ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

10 ಜೂನ್, 2026 ಬುಧವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 91 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಮುಂಬೈ ಟಿ-20 ಲೀಗ್‌ನಲ್ಲಿ ಬಾಂದ್ರಾ ಬ್ಲಾಸ್ಟರ್ಸ್ ವಿರುದ್ಧ ಅಂಧೇರಿ ತಂಡವು 9 ವಿಕೆಟ್‌ಗಳ ಭರ್ಜರಿ ಗೆಲುವು ದಾಖಲಿಸಿದೆ. ಅಂಧೇರಿ ಪರ ಅರ್ಜುನ್ ತೆಂಡೂಲ್ಕರ್ 3 ವಿಕೆಟ್ ಹಾಗು 66 ರನ್ ಸಿಡಿಸಿ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.




ಶೂನ್ಯದಿಂದ ಕೋಟಿಗಳ ಸಾಮ್ರಾಜ್ಯ » 2



ಕಾಫಿ ಬೆಳೆಗಾರರ ಸಮಸ್ಯೆ ಬಗ್ಗೆ ಸರ್ಕಾರದ ಗಮನ ಸೆಳೆಯುವೆ 3



ಕೃಷಿ ಜಮೀನಿನಲ್ಲಿ ಚಿರತೆ ಹೆಜ್ಜೆ ಗುರುತು ಪತ್ತೆ » 4


# ಮೈತ್ರಿಯಲ್ಲಿ ಬಿರುಕು ಸೃಷ್ಟಿಸಲು ಕಾಂಗ್ರೆಸ್ ಯತ್ನ


## ದೇವೇಗೌಡರು ರಾಜ್ಯಸಭೆ ಟಿಕೆಟ್‌ಗೆ ಅರ್ಜಿ ಹಾಕಿಲ್ಲ: ಹೆಚ್.ಡಿ.ಕುಮಾರಸ್ವಾಮಿ ಸ್ಪಷ್ಟನೆ

• ಪ್ರಜೋದಯ ವರದಿ

**ಬೆಂಗಳೂರು:** ಕಾಂಗ್ರೆಸ್ ನಾಯಕರಿಗೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಬಗ್ಗೆ ಅತಿಯಾದ ಅನುಕಂಪ ಬಂದಿದ್ದು, ಜೆಡಿಎಸ್ ಮತ್ತು ಬಿಜೆಪಿ ನಡುವಿನ ಮೈತ್ರಿಯಲ್ಲಿ ಬಿರುಕು ಸೃಷ್ಟಿಸಲು ಯತ್ನಿಸುತ್ತಿದ್ದಾರೆಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಟೀಕಿಸಿದರು.

ಮಂಡ್ಯದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹೆಚ್.ಡಿ. ದೇವೇಗೌಡ ಅವರು ರಾಜ್ಯಸಭೆ ಟಿಕೆಟ್‌ಗೆ ಅರ್ಜಿ ಹಾಕಿರಲಿಲ್ಲ. ದೇವೇಗೌಡರದ್ದು ಹೋರಾಟದ ಬದುಕು. ಅಧಿಕಾರಕ್ಕಾಗಿ ಆಸೆ ಪಟ್ಟವರಲ್ಲ. ಸ್ವಾಭಿಮಾನಕ್ಕೆ ಧಕ್ಕೆಯಾದಾಗ ಪ್ರಧಾನಿ ಸ್ಥಾನವನ್ನೇ ಬಿಟ್ಟು ಬಂದರು. ಅದೆಲ್ಲವೂ ಕಾಂಗ್ರೆಸ್ ಪಕ್ಷಕ್ಕೆ ಗೊತ್ತಿಲ್ಲವೇ ಎಂದು ತೀಕ್ಷ್ಣವಾಗಿ ಪ್ರಶ್ನಿಸಿದರು.

ಕಳೆದ ಬಾರಿ ದೇವೇಗೌಡರ ವಿರುದ್ಧ ಇನ್ನೊಬ್ಬ ಅಭ್ಯರ್ಥಿ ನಿಲ್ಲುವ ಅವಕಾಶ ಇರಲಿಲ್ಲ. ಆ ಸಂದರ್ಭದಲ್ಲಿ ಯಾವುದೇ ಪಕ್ಷಕ್ಕೆ ತನ್ನ ಅಭ್ಯರ್ಥಿ



ಯನ್ನು ನಿಲ್ಲಿಸಿ ಗೆಲ್ಲಿಸಿಕೊಳ್ಳುವಷ್ಟು ಸಂಖ್ಯಾಬಲವಿರಲಿಲ್ಲ. ನಮ್ಮ ಪಕ್ಷಕ್ಕೆ ಸಂಖ್ಯಾಬಲ ಇತ್ತು. ಹೀಗಾಗಿ ರಾಜ್ಯಸಭೆಗೆ ದೇವೇಗೌಡರು ಆಯ್ಕೆಯಾದರು. ಅವರು ಕಾಂಗ್ರೆಸ್ ಬೆಂಬಲದಿಂದ ರಾಜ್ಯಸಭೆಗೆ ಹೋಗಲಿಲ್ಲವೆಂದು ತಿರುಗೇಟು ನೀಡಿದರು.

**ಅತಿ ವಿನಯಂ ಧೂರ್ತ ಲಕ್ಷಣಂ**

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಲಹೆ ಕೇಳಲು ಮಾಜಿ ಮುಖ್ಯಮಂತ್ರಿಗಳ ಭೇಟಿಯಾಗುವ ವಿಚಾರಕ್ಕೆ ಪ್ರತಿಕ್ರಿಯಿಸಿ, ನಾನೇನು ಸಲಹೆ ನೀಡಲಿ. ಕುಮಾರಸ್ವಾಮಿ ಎರಡು ಬಾರಿ ಮುಖ್ಯಮಂತ್ರಿ ಆಗಿ ಏನು ಹರಿದಿದ್ದಾರೆಂದು ನನ್ನನ್ನು ಈ ಹಿಂದೆ ಟೀಕಿಸಿದ್ದಾರೆ. ಎಲ್ಲದಕ್ಕೂ ಸಾಕ್ಷಿ ಗುಡ್ಡೇ ಕೇಳುತ್ತಾರೆ. ನಾನೇನು ಹರಿದಿಲ್ಲ, ನನ್ನ ಬಳಿ ಬಂದು ಏನು ಸಲಹೆ ಕೇಳುತ್ತಾರೆ. ಅವರಿಗೆ ಫೋಟೋ ಬೇಕು. ಹಾಗಾಗಿ ಎಲ್ಲಾ ಕಡೆ ಹೋಗುತ್ತಿದ್ದಾರೆ. ಎಲ್ಲವನ್ನೂ ನಾನು ಬಲ್ಲೆ. ಅತಿ ವಿನಯಂ ಧೂರ್ತ ಲಕ್ಷಣಂ ಅಂತ. ಆ ಮಾತು ನನಗೆ ಪದೇಪದೇ ನೆನಪಿಗೆ ಬರುತ್ತಿದೆ. ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಿರುವುದರಿಂದ ಒಕ್ಕಲಿಗರ ಮತದ ಮೇಲೆ ಯಾವುದೇ ವ್ಯತ್ಯಾಸವಾಗುವುದಿಲ್ಲವೆಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ವಿಧಾನಸಭೆಯಿಂದ ವಿಧಾನ ಪರಿಷತ್‌ನ 7 ಸ್ಥಾನಗಳಿಗೆ ಚುನಾವಣೆ ನಡೆಯುತ್ತಿದ್ದು, ಜೆಡಿಎಸ್‌ನಿಂದ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದೇವೆ. ನಮಗೂ 2 ಮತಗಳ ಕೊರತೆ ಇದೆ. ಕಾಂಗ್ರೆಸ್‌ನ 5ನೇ ಅಭ್ಯರ್ಥಿಗೂ 2 ಮತಗಳ ಕೊರತೆ ಇದೆ. ಈ ಚುನಾವಣೆಯಲ್ಲಿ ಯಾವುದೇ ಗೇಮ್ ಪ್ಲ್ಯಾನ್ ಇಲ್ಲವೆಂದು ಸ್ಪಷ್ಟಪಡಿಸಿದರು.

ಬಿಜೆಪಿಯಿಂದ ಉಚ್ಚಾಟನೆಯಾಗಿರುವ ಬಸನಗೌಡ ಪಾಟೀಲ್ ಯತ್ನಾಳ್ ಅವರ ಮತವನ್ನು ಕೇಳುತ್ತೇವೆ. ನಮ್ಮ ಪ್ರಯತ್ನ ನಾವು ಮಾಡುತ್ತೇವೆ. ಕಾಂಗ್ರೆಸ್‌ನವರಿಗೆ ಹಣ, ಅಧಿಕಾರ ಬಲವಿದೆ. ಏನಾಗುತ್ತದೆ ಎಂದು ಕಾಯ್ದು ನೋಡೋಣ ವೆಂದರು.

ಬಿಜೆಪಿ ದೇವೇಗೌಡ ಅವರನ್ನು ಅತ್ಯಂತ ಗೌರವದಿಂದ ನಡೆಸಿ ಕೊಂಡಿದೆ. ಭಾರತದ ಸಮಗ್ರತೆ ಉಳಿಯಬೇಕಾದರೆ, ಅಭಿವೃದ್ಧಿ ಹೊಂದಬೇಕಾದರೆ ಅದು ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತದಿಂದ ಮಾತ್ರ ಸಾಧ್ಯವೆಂಬ ನಂಬಿಕೆಯಿಂದ ದೇವೇಗೌಡ ಅವರು ಬಿಜೆಪಿ ಬೆಂಬಲಿಸಿ, ಎನ್‌ಡಿಎಗೆ ತಮ್ಮ ಜೆಡಿಎಸ್ ಪಕ್ಷವನ್ನು ಸೇರಿಸಿದ್ದಾರೆಂದು ಹೇಳಿದ್ದಾರೆ.

### ಕಾಂಗ್ರೆಸ್ ಮೊಸಳೆ ಕಣ್ಣೀರು ಅವಶ್ಯಕತೆ ಇಲ್ಲ

ದೇಶದ ಪ್ರಧಾನ ಮಂತ್ರಿ ಸ್ಥಾನವನ್ನು ಅಲಂಕರಿಸಿದ್ದ ಹೆಮ್ಮೆಯ ಕನ್ನಡಿಗ ಎಂದು ಎನಿಸಿಕೊಂಡಿದ್ದ ದೇವೇಗೌಡರ ಕುರಿತು ಕರ್ನಾಟಕದ ಕಾಂಗ್ರೆಸ್ ಪಕ್ಷದ ಉಸ್ತುವಾರಿ ರಣದೀಪ್ ಸುರ್ಜೇವಾಲಾ ಮತ್ತು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಅವರು ಮೊಸಳೆ ಕಣ್ಣೀರು ಸುರಿಸುವ ಅವಶ್ಯಕತೆ ಇಲ್ಲವೆಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಹೇಳಿದ್ದಾರೆ.
ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ದೇವೇಗೌಡ ಅವರನ್ನು ಪ್ರಧಾನಿ ಪದವಿಯಿಂದ ಕೆಳಗಿಳಿಸಿದ ಕುಖ್ಯಾತಿ ಕಾಂಗ್ರೆಸ್ ಮೇಲಿರುವುದನ್ನು ಅವರ ಮುಂದಾಳುಗಳು ಮರೆತಂತಿದೆ ಎಂದು ಕಿಡಿಕಾರಿದ್ದಾರೆ.
ದೇವೇಗೌಡರ ರಾಜಕೀಯ ಜೀವನದುದ್ದಕ್ಕೂ ಕಾಡಿದ್ದು, ಅವರ ಪಕ್ಷವನ್ನು ಇಬ್ಭಾಗ ಮಾಡಲು ಯತ್ನಿಸಿದ್ದು ಕಾಂಗ್ರೆಸ್. ಇಷ್ಟಾಗಿಯೂ ಕೊಳಕು ರಾಜಕಾರಣ ಮಾಡುವುದನ್ನು ನಿಲ್ಲಿಸದ ಕಾಂಗ್ರೆಸ್ಸಿಗರು, ದೇವೇಗೌಡರ ಕುರಿತು ಕೃತಕ ಕಾಳಜಿಯ ಮಾತನಾಡುತ್ತಿರುವ ಪರಿ ಹಾಸ್ಯಾಸ್ಪದವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

## 211 ಕೋ.ರೂ. ವಹಿವಾಟಿನೊಂದಿಗೆ ತಂಬಾಕು ಹರಾಜು ಮಾರುಕಟ್ಟೆ ಮುಕ್ತಾಯ

• ಪ್ರಜೋದಯ ವರದಿ

**ಅರಕಲಗೂಡು :** ತಾಲ್ಲೂಕಿನ ಪ್ರಮುಖ ವಾಣಿಜ್ಯ ಬೆಳೆ ತಂಬಾಕು ಹರಾಜು ವಹಿವಾಟು ಬಹುತೇಕ ಮುಕ್ತಾಯಗೊಂಡಿದ್ದು, 2025-26 ನೇ ಸಾಲಿಗೆ 211ಕೋ.ರೂ. ವಹಿವಾಟು ದಾಖಲಾಗಿದೆ.

ಪ್ರಸಕ್ತ ವರ್ಷದ ಮಾರುಕಟ್ಟೆಯಲ್ಲಿ ವ್ಯಾಪಾರ ವಹಿವಾಟು ಪ್ರಾರಂಭದ ದಿನಗಳಲ್ಲಿ ಉತ್ತಮ ಬೆಲೆ ದೊರಕುತ್ತಿದ್ದು, ಕೇಂದ್ರ ಸರ್ಕಾರವು ತಂಬಾಕು ಉತ್ಪನ್ನಗಳ ಮೇಲೆ ಅಬಕಾರಿ ಸುಂಕವನ್ನು ವಿಧಿಸಿದ ನಂತರ ದಿಢೀರ್ ಕುಸಿತ ಕಂಡಿತು. ಬೆಲೆ ಇಳಿಕೆ ವಿರೋಧಿಸಿ ಅನೇಕ ಪ್ರತಿಭಟನೆಗಳು ನಡೆದು, ಸಂಸದರು ಸೇರಿ ವಿವಿಧ ಜನಪ್ರತಿನಿಧಿಗಳು ಮಾರುಕಟ್ಟೆಗೆ ಭೇಟಿ ನೀಡಿ ತಂಬಾಕು ಬೆಲೆ ಇಳಿಕೆ ಕುರಿತು ವಾಣಿಜ್ಯ ಸಚಿವಾಲಯದ ಗಮನ ಸೆಳೆದು ಅಬಕಾರಿ ಸುಂಕವನ್ನು ಕಡಿಮೆ ಮಾಡಿ ಬೆಳೆಗಾರರಿಂದ ತಂಬಾಕು ಖರೀದಿಯ ಹೆಚ್ಚು ದೊರಕುವಂತೆ ಕ್ರಮಕೈಗೊಳ್ಳುವ ಭರವಸೆ ನೀಡಿದರು ತಂಬಾಕು ಖರೀದಿಯ ಬೆಲೆಯಲ್ಲಿ ಏರಿಕೆ ಕಾಣಲಿಲ್ಲ.

2025-26ನೇ ಸಾಲಿಗೆ ರಾಮನಾಥಪುರದ ಪ್ಲಾಟ್ ಫಾರಂ ಸಂಖ್ಯೆ 7 ರಲ್ಲಿ ಒಟ್ಟು 80,786 ಬೇಲ್‌ಗಳಿಂದ 87,33,514 ಕೆ.ಜಿ.ತಂಬಾಕು



ಮಾರಾಟವಾಗಿದೆ. ಪ್ರತಿ ಕೆ.ಜಿ. ಉತ್ತಮ ಗುಣಮಟ್ಟದ ಪ್ರತಿ ಕೆ. ಜಿ. ಹೊಗೆಸೊಪ್ಪಿಗೆ ಗರಿಷ್ಠ 321ರೂ, ಕನಿಷ್ಠ 50ರೂ ಬೆಲೆ ದೊರೆತಿದ್ದು, ಮಾರಾಟವಾದ ಪ್ರತಿ ಕೆ.ಜಿ.ತಂಬಾಕಿನ ಬೆಲೆ ಸರಾಸರಿ ಬೆಲೆ 242.40ರೂ. ಸಿಕ್ಕಿದ್ದು, ಒಟ್ಟು 211.69 ಕೋ. ರೂ. ವಹಿವಾಟು ನಡೆದಿದೆ.

**ಖರೀದಿಯಲ್ಲಿ 35 ಕಂಪೆನಿಗಳು ಭಾಗಿ**

2025-26 ನೇ ಸಾಲಿನಲ್ಲಿ ರಾಮನಾಥಪುರದ ಪ್ಲಾಟ್ ಫಾರಂ ಸಂಖ್ಯೆ 7ರಲ್ಲಿ ನಡೆದ ತಂಬಾಕು ಹರಾಜಿನಲ್ಲಿ 35ಕಂಪೆನಿಗಳು ರೈತರಿಂದ ತಂಬಾಕನ್ನು ಕೊಳ್ಳುವ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದವು.

**ರಸಗೊಬ್ಬರ ವಿತರಣೆ ಪ್ರಾರಂಭ**

ಪ್ರಸಕ್ತ ಸಾಲಿನ ಹೊಗೆಸೊಪ್ಪು ಬೆಳೆಸಲು ಅಗತ್ಯವಿರುವ ರಸಗೊಬ್ಬರಗಳನ್ನು ಮಾರುಕಟ್ಟೆಯಲ್ಲಿ ವಿತರಿಸಲು ಪ್ರಾರಂಭಿಸಿದ್ದು, ಬೆಳೆಗಾರರು ತಮ್ಮ ವಾಹನಗಳಲ್ಲಿ ಗೊಬ್ಬರವನ್ನು ಕೊಂಡೊಯ್ಯುತ್ತಿದ್ದಾರೆ. ಬೆಲೆ ಇಳಿಕೆಯ ಜೊತೆಗೆ ಮಂಡಳಿಯು ತಂಬಾಕು ಉತ್ಪಾದನೆ ಕಡಿತಗೊಳಿಸಿದ್ದು 2026-27 ನೇ ಸಾಲಿಗೆ ಸಿಂಗಲ್ ಬ್ಯಾರಲ್ ಪರವಾನಗಿ ಹೊಂದಿರುವ ಬೆಳೆಗಾರರು 1017ಕೆ.ಜಿ., ಡಬಲ್ ಬ್ಯಾರಲ್ ಹೊಂದಿರುವವರು 2034 ಕೆ.ಜಿ. ಮಾತ್ರ ಬೆಳೆಯುವಂತೆ ತಂಬಾಕು ಮಂಡಳಿಯು ಪ್ರಕಟಣೆ ಹೊರಡಿಸಿದೆ.

## ಜೂ.28ರಂದು ಪಲ್ಸ್ ಪೋಲಿಯೋ ಅಭಿಯಾನ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾದ್ಯಂತ ಜೂ. 28ರಂದು ಪಲ್ಸ್ ಪೋಲಿಯೋ ಅಭಿಯಾನ ಹಮ್ಮಿಕೊಂಡಿದ್ದು, 5 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಕಡ್ಡಾಯವಾಗಿ ಲಸಿಕೆ ಹಾಕಿಸಬೇಕೆಂದು ಜಿಲ್ಲಾಧಿಕಾರಿ ಕೆ. ಎಸ್.ಲತಾಕುಮಾರಿ ಅವರು ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ನಡೆದ ಜಿಲ್ಲಾ ಮಟ್ಟದ ಪಲ್ಸ್ ಪೋಲಿಯೋ ಚಾಲನಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಿಗದಿತ ಬೂತ್‌ಗಳಲ್ಲಿ ಹಾಗು ಸಾರ್ವಜನಿಕರು ಪ್ರಯಾಣ ಮಾಡುವ ಸಂದರ್ಭದಲ್ಲಿ ಅನುಕೂಲವಾಗುವಂತೆ ರೈಲ್ವೆ, ಬಸ್ ನಿಲ್ದಾಣಗಳಲ್ಲಿ ಲಸಿಕೆ ಹಾಕಲು ಕ್ರಮ ಕೈಗೊಳ್ಳಬೇಕೆಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ವಲಸೆ ಕಾರ್ಮಿಕರ ಪತ್ತೆ ಮಾಡಬೇಕು, ಕಾಫಿ ತೋಟಗಳಲ್ಲಿ ಕೆಲಸ ಮಾಡುವ ಹಾಗು ಕಟ್ಟಡ ನಿರ್ಮಾಣ ಕಾಮಗಾರಿ ನಡೆಯುತ್ತಿರುವ ಕಡೆಗಳಲ್ಲಿ ಮಕ್ಕಳಿಗೆ ತಪ್ಪದಂತೆ ಲಸಿಕೆ ನೀಡಲು ಕ್ರಮ ವಹಿಸಲು ಅಧಿಕಾರಿಗಳಿಗೆ ಸೂಚಿಸಿದರು.

ಜೂ. 28 ರಂದು ಬೂತ್ ಮಟ್ಟ



ದಲ್ಲಿ ಲಸಿಕಾ ಕಾರ್ಯಕ್ರಮ ನಡೆಯಲಿದೆ. ನಂತರ ನಗರ ಪ್ರದೇಶಗಳಲ್ಲಿ ಮೂರು ದಿನ ಹಾಗು ಗ್ರಾಮೀಣ ಪ್ರದೇಶದಲ್ಲಿ ಎರಡು ದಿನ ಮನೆ ಮನೆಗೆ ಭೇಟಿ ನೀಡಿ ಲಸಿಕೆ ಹಾಕಲಾಗುವುದೆಂದು ತಿಳಿಸಿದರು.

ಲಸಿಕೆಯನ್ನು ಸುರಕ್ಷಿತವಾಗಿಡಲು ಕೋಲ್ಡ್ ಚೈನ್ ಲಿಂಕ್ ಇರಬೇಕಾಗಿರುವುದರಿಂದ ನಿರಂತರವಾಗಿ ವಿದ್ಯುತ್ ಸರಬರಾಜು ಇರುವಂತೆ ನೋಡಿಕೊಳ್ಳಬೇಕು. ಲಸಿಕೆ ಸಂದರ್ಭದಲ್ಲಿ ಅಗತ್ಯ ಸಾರಿಗೆ ವ್ಯವಸ್ಥೆ ಕಲ್ಪಿಸಲು ಕ್ರಮ ಕೈಗೊಳ್ಳುವಂತೆ ಸಾರಿಗೆ ಇಲಾಖೆ ಅಧಿಕಾರಿಗೆ ಸೂಚಿಸಿದರು.

ಎಲ್ಲಾ ಅಧಿಕಾರಿಗಳು ಸಮನ್ವಯತೆಯಿಂದ ಕರ್ತವ್ಯ ನಿರ್ವಹಿಸಿ ಯಾವುದೇ ಮಗುವಿವು ಲಸಿಕೆಯಿಂದ ವಂಚಿತರಾಗದಂತೆ ನೋಡಿಕೊಳ್ಳಲು ತಿಳಿಸಿದರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ|| ಅನಿಲ್, ಆರ್‌ಸಿಹೆಚ್ ಅಧಿಕಾರಿ ಡಾ|| ಶಿವಶಂಕರ್ ಹಾಗು ವಿವಿಧ ಇಲಾಖೆಗಳ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

# ಜಿಲ್ಲೆಯಲ್ಲಿ ರೌಡಿಗಳ ನಿಗ್ರಹ ಪಡೆಗೆ ಪೂರ್ಣ ತಯಾರಿ

-ಮಲ್ಲಿಕಾರ್ಜುನ ಕೊಚ್ಚರಗಿ

• ಪ್ರಜೋದಯ ವರದಿ

## 20 ಠಾಣೆಗಳಲ್ಲಿ ಕಾರ್ಯ ನಿರ್ವಹಣೆ | ಪೊಲೀಸರಿಗೆ ಹೆಚ್ಚುವರಿ ತರಬೇತಿ

**ಹಾಸನ:** ಅಪರಾಧ ಸಂಖ್ಯೆ ತಗ್ಗಿಸುವ ನಿಟ್ಟಿನಲ್ಲಿ ರೌಡಿ ನಿಗ್ರಹಕ್ಕೆ ಪ್ರತ್ಯೇಕ ಪಡೆ ಆರಂಭಿಸುವಂತೆ ರಾಜ್ಯ ಪೊಲೀಸ್ ಮಹಾನಿರ್ದೇಶಕರು ಆದೇಶ ಹೊರಡಿಸಿರುವ ಬೆನ್ನಲ್ಲೇ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ ಅವರು ಅಗತ್ಯ ಕ್ರಮ ಕೈಗೊಂಡಿದ್ದಾರೆ.

ರೌಡಿಗಳ ಚಲನವಲನದ ಮೇಲೆ ಕಣ್ಣಿಟ್ಟಿರುವ ಪೊಲೀಸರಿಗೆ ಸರ್ಕಾರದ ಹೊಸ ಆದೇಶವು ಆನೆಬಲ ನೀಡಿದಂತಾಗಿದೆ. ಪ್ರತಿ ಪೊಲೀಸ್ ವಲಯ, ಠಾಣೆ ಮಟ್ಟದಲ್ಲಿ ರೌಡಿ ನಿಗ್ರಹ ಪಡೆ ಆರಂಭವಾಗಲಿದೆ. ಇರುವ ಸಿಬ್ಬಂದಿಗೆ ಹೆಚ್ಚುವರಿ ಜವಾಬ್ದಾರಿ ವಹಿಸುವ ಕ್ರಮ ಇದಾಗಿದ್ದು ಆ ನಿಟ್ಟಿನಲ್ಲಿ ತರಬೇತಿ ಸಹ ನೀಡಲಾಗುತ್ತಿದೆ. ಜಿಲ್ಲಾದ್ಯಂತ ಒಟ್ಟು 20 ವಿಶೇಷ ರೌಡಿ ನಿಗ್ರಹ ಪಡೆಗಳು ಅಸ್ತಿತ್ವಕ್ಕೆ ಬರಲಿವೆ.

ಬಡ್ಡಿಂಗ್ ರೌಡಿಗಳ ಮೇಲೆ ಕಣ್ಣು: ಇತ್ತೀಚೆಗೆ ಅಪರಾಧ ಲೋಕದ ಕಡೆಗೆ ಆಕರ್ಷಿತರಾಗುತ್ತಿರುವ ಇನ್‌ಸ್ಟಾಗ್ರಾಂ/ಸಾಮಾಜಿಕ ಜಾಲತಾಣದ ಬಡ್ಡಿಂಗ್ ರೌಡಿಗಳ (ಉದಯೋನ್ಮುಖ ರೌಡಿಗಳು) ಮೇಲೆಯೂ



ಪೊಲೀಸ್ ಇಲಾಖೆ ತೀವ್ರ ನಿಗಾ ಇರಿಸಲಿದೆ.

ಜಿಲ್ಲೆಯಿಂದ ಈಗಾಗಲೇ ಗಡಿಪಾರು ಶಿಕ್ಷೆಗೆ ಒಳಗಾಗಿದ್ದರೂ, ಆದೇಶ ಉಲ್ಲಂಘಿಸಿ ಜಿಲ್ಲೆಯೊಳಗೆ ರಹಸ್ಯವಾಗಿ ಸಂಚರಿಸುತ್ತಿರುವವರ ಪತ್ತೆಗೆ ವಿಶೇಷ ಕಾರ್ಯಾಚರಣೆ ಶೀಘ್ರದಲ್ಲೇ ಆರಂಭವಾಗಲಿದೆ. ತಲೆಮರೆಸಿಕೊಂಡಿರುವ ಅಪರಾಧಿಗಳನ್ನು ಪತ್ತೆ ಹಚ್ಚಿ ಜೈಲಿಗಟ್ಟಲು ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

ಜಿಲ್ಲೆಯಲ್ಲಿ ಸದ್ಯಕ್ಕೆ ಸುಮಾರು 70 ರೌಡಿ ಶೀಟರ್‌ಗಳನ್ನು ಗಡಿಪಾರು ಮಾಡಲು ಪಟ್ಟಿ ಸಿದ್ಧಪಡಿಸಲಾಗಿದೆ. ಅವರಲ್ಲಿ ಹಲವರು ಒಂದಕ್ಕಿಂತ ಹೆಚ್ಚು ಕೊಲೆ ಪ್ರಕರಣಗಳಲ್ಲಿ ಭಾಗಿಯಾದ ಹಿನ್ನಲೆಯುಳ್ಳವರಾಗಿದ್ದಾರೆ. ಅವರ ವಿರುದ್ಧ ಗುಂಡಾ ಕಾಯ್ದೆಯಡಿ ಕ್ರಮ ಜರುಗಿಸುವುದರ ಜೊತೆಗೆ ನ್ಯಾಯಾಲಯದಲ್ಲಿ ಕಠಿಣ ಶಿಕ್ಷೆಯಾಗುವಂತೆ ನೋಡಿಕೊಳ್ಳುವುದು ನಮ್ಮ ಗುರಿ ಎಂದು ಶುಭನ್ವಿತಾ ಅವರು ತಿಳಿಸಿದ್ದಾರೆ.

ರೌಡಿ ಚಟುವಟಿಕೆಗಳು ಸಮಾಜದಲ್ಲಿ ಭಯದ ವಾತಾವರಣ ಸೃಷ್ಟಿಸುತ್ತವೆ ಮತ್ತು ಸಾಮಾಜಿಕ ಸೌಹಾರ್ದತೆ ಹಾಳು ಮಾಡುತ್ತವೆ. ಜೊತೆಗೆ ಸಾರ್ವಜನಿಕ ಶಾಂತಿಗೆ ಧಕ್ಕೆ ಉಂಟು

> **ಜಿಲ್ಲೆಯಲ್ಲಿ ರೌಡಿ ನಿಗ್ರಹ ಪಡೆ ಆರಂಭಕ್ಕೆ ಸಿದ್ಧತೆ ನಡೆದಿದೆ. ಈ ವಿಚಾರದಲ್ಲಿ ನಾವು ಮೊದಲೇ ಸಾಕಷ್ಟು ಕ್ರಮ ಕೈಗೊಂಡಿದ್ದೇವೆ. ಸರ್ಕಾರದ ಹೊಸ ಆದೇಶವು ಕೆಲಸಕ್ಕೆ ವೇಗ ನೀಡಲಿದೆ. ನಿಗ್ರಹ ಪಡೆ ಕಾರ್ಯನಿರ್ವಹಣೆಗೆ ಸಿಬ್ಬಂದಿ ಕೊರತೆ ಇಲ್ಲ.**
> **-ಶುಭನ್ವಿತಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ**

ಮಾಡುತ್ತಿವೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಅಧಿಕಾರ ವಹಿಸಿಕೊಂಡ ತಕ್ಷಣದಲ್ಲೇ ಈ ಮಹತ್ವದ ನಿರ್ಧಾರ ಪ್ರಕಟಿಸಿರುವುದು ಕಾನೂನು ಸುವ್ಯವಸ್ಥೆ ಬಿಗಿಯಾಗುವ ಆಶಯ ಮೂಡಿದೆ.

**ನಿಗ್ರಹ ಪಡೆಯ ಕೆಲಸವೇನು ?**

ರೌಡಿ ನಿಗ್ರಹ ದಳವು ಅಪರಾಧ ಪ್ರಕರಣಗಳನ್ನು ಪರಿಶೀಲಿಸಿ, ಹೊಸ ರೌಡಿ ಪಟ್ಟಿ ತೆರೆಯಬೇಕು. ರೌಡಿ ಶೀಟರ್‌ಗಳ ಚಲನವಲನ ಮತ್ತು ಚಟುವಟಿಕೆಗಳ ಮೇಲೆ ನಿಗಾ ವಹಿಸಬೇಕು. ಹೊಸ ರೌಡಿ ಅಂಶಗಳು, ಗ್ಯಾಂಗ್‌ಗಳು ಮತ್ತು ಅಪರಾಧ ಗುಂಪುಗಳನ್ನು ಗುರುತಿಸಿ ಗುಪ್ತಚರ ಮಾಹಿತಿ ಸಂಗ್ರಹಿಸಬೇಕು. ಅಪಾಯ ಪ್ರದೇಶಗಳಲ್ಲಿ ವಿಶೇಷ ಕಾರ್ಯಾಚರಣೆ ಮತ್ತು ದಿಢೀರ್ ತಪಾಸಣೆ ನಿಗ್ರಹ ಪಡೆಯ ಕೆಲಸವಾಗಿದೆ.

ಈ ಹಿಂದೆ ದೊಡ್ಡ ಮಟ್ಟದ ರೌಡಿ ನಿಗ್ರಹ ಕಾರ್ಯಾಚರಣೆಗಳು ಸಿಸಿಬಿ ಅಥವಾ ಸಿಐಡಿ ಯಂತಹ ಉನ್ನತ ಮಟ್ಟದ ವಿಭಾಗಗಳಿಗೆ ಸೀಮಿತವಾಗಿದ್ದವು. ಈಗ ಪ್ರತಿ ಠಾಣೆ ಮಟ್ಟದಲ್ಲೂ ಪಡೆ ಅಸ್ತಿತ್ವಕ್ಕೆ ಬರುವುದರಿಂದ ಸ್ಥಳೀಯವಾಗಿ ಉದಯೋನ್ಮುಖ ರೌಡಿಗಳು ಅಥವಾ ಸಣ್ಣ-ಪುಟ್ಟ ಗ್ಯಾಂಗ್‌ಗಳು ಬೆಳೆಯುವ ಮುನ್ನವೇ ಅವರನ್ನು ಮಟ್ಟ ಹಾಕಲು ಸಾಧ್ಯವಾಗುತ್ತದೆ. ಈ ವಿಶೇಷ ಪಡೆಗಳು ರೌಡಿಗಳ ವಿರುದ್ಧ ಪ್ರಬಲ ಸಾಕ್ಷ್ಯಗಳನ್ನು ಸಂಗ್ರಹಿಸುವಲ್ಲಿ ಗಮನ ಹರಿಸುವುದರಿಂದ, ನ್ಯಾಯಾಲಯದಲ್ಲಿ ಅವರಿಗೆ ಕಠಿಣ ಶಿಕ್ಷೆಯಾಗುವಂತೆ ನೋಡಿಕೊಳ್ಳಬಹುದು.

ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳನ್ನು ಬಳಸಿ ಯುವಕರು ರೀಲ್ಸ್ ಮೂಲಕ ರೌಡಿಸಂ ಸಂಸ್ಕೃತಿಗೆ ಆಕರ್ಷಿತರಾಗುತ್ತಿದ್ದಾರೆ. ನಿಗ್ರಹ ಪಡೆ ಸಾಮಾಜಿಕ ಜಾಲತಾಣಗಳ ಮೇಲೂ ನಿಗಾ ಇಡುವುದರಿಂದ ಹಾದಿ ತಪ್ಪುತ್ತಿರುವ ಯುವಕರನ್ನು ಆರಂಭದಲ್ಲೇ ಪತ್ತೆಹಚ್ಚಿ ಕೌನ್ಸಲಿಂಗ್ ನಡೆಸಲು ಮತ್ತು ಕಾನೂನು ಕ್ರಮ ಜರುಗಿಸಲು ನೆರವಾಗುತ್ತದೆ.

# ಸಣ್ಣ ಪ್ರಯತ್ನದಿಂದ ದೊಡ್ಡ ಬದಲಾವಣೆ ಸಾಧ್ಯ

## ಪ್ರತಿಯೊಬ್ಬರೂ ಒಂದೊಂದು ಗಿಡ ಬೆಳೆಸುವಂತೆ ನ್ಯಾ. ಹೇಮಾವತಿ ಕರೆ

• ಪ್ರಜೋದಯ ವರದಿ

**ಹಾಸನ:** ಪರಿಸರ ಸಂರಕ್ಷಣೆ ಅತ್ಯಗತ್ಯವಾಗಿದ್ದು, ಪ್ರತಿಯೊಬ್ಬರ ಸಣ್ಣ ಪ್ರಯತ್ನವೂ ದೊಡ್ಡ ಬದಲಾವಣೆಗೆ ಕಾರಣವಾಗಬಹುದೆಂದು ಪ್ರಧಾನ ಜಿಲ್ಲಾ ನ್ಯಾಯಾಧೀಶರಾದ ಹೇಮಾವತಿ ಅವರು ಹೇಳಿದರು.

ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಮಂಗಳವಾರ ಹಮ್ಮಿಕೊಂಡಿದ್ದ ಗಿಡ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕಾಡು ಬೆಳೆಸಿ, ನಾಡು ಉಳಿಸಿ ಎಂಬ ಸಂದೇಶವನ್ನು ಜೀವನ

» ನಾಲ್ಕನೇ ಪುಟದಲ್ಲಿ



> **ಪ್ರಕೃತಿಯ ಸಮತೋಲನ ಕಾಪಾಡುವಲ್ಲಿ ಮರಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಆದರೆ, ನಗರೀಕರಣ, ರಸ್ತೆ ನಿರ್ಮಾಣ ಹಾಗೂ ವಿವಿಧ ಅಭಿವೃದ್ಧಿ ಕಾಮಗಾರಿ ನೆಪದಲ್ಲಿ ಹಲವು ದಶಕಗಳಷ್ಟು ಹಳೆಯ ಮರಗಳನ್ನು ಕಡಿದು ಹಾಕಲಾಗುತ್ತಿದೆ. ಅವುಗಳ ಬದಲಿಗೆ ಹೊಸ ಗಿಡಗಳನ್ನು ನೆಟ್ಟು ಬೆಳೆಸುವ ಮನೋಭಾವ ಸಮಾಜದಲ್ಲಿ ಮೂಡಬೇಕಿದೆ.**
> **-ಹೇಮಾವತಿ, ಪ್ರಧಾನ ಜಿಲ್ಲಾ ನ್ಯಾಯಾಧೀಶೆ**

# ಕಿರುಕುಳಕ್ಕೆ ಬೇಸತ್ತು ನಮ್ಮ ಕ್ಲಿನಿಕ್ ವೈದ್ಯಾಧಿಕಾರಿ ರಾಜೀನಾಮೆ

• ಪ್ರಜೋದಯ ವರದಿ

**ಸಕಲೇಶಪುರ:** ಪಟ್ಟಣದ ಅರೇಹಳ್ಳಿ ಬೀದಿಯ ನಮ್ಮ ಕ್ಲಿನಿಕ್‌ನ ವೈದ್ಯಾ ಧಿಕಾರಿ ಡಾ||ರತನ್ ಅವರು ಸೇವೆಗೆ ರಾಜೀನಾಮೆ ಸಲ್ಲಿಸಿದ್ದು, ಮೇಲಾಧಿ ಕಾರಿಗಳ ಕಿರುಕುಳವೇ ಸೇವೆ ತೊರೆಯಲು ಕಾರಣ ಎನ್ನಲಾಗಿದೆ.

ಕಳೆದ ಎರಡು ವರ್ಷಗಳಿಂದ ಕ್ಲಿನಿಕ್‌ನಲ್ಲಿ ಕೆಲಸ ಮಾಡಿಕೊಂಡಿದ್ದ ರತನ್ ಅವರು ಸಾರ್ವಜನಿಕರಿಗೆ ಹತ್ತಿರವಾಗಿದ್ದರು. ಸರಳತೆ, ಸ್ಪಂದನೆ ಹಾಗು ಗುಣಮಟ್ಟದ ಚಿಕಿತ್ಸೆ ಯಿಂದಾಗಿ ಜನಮನ್ನಣೆ ಗಳಿಸಿದ್ದರು. ಪಟ್ಟಣದ ಸ್ಲಂ ಹಾಗು ಬಡಾವಣೆಯ ಜನರ ಮನೆಗೆ ಭೇಟಿ ನೀಡಿ ಆರೋಗ್ಯ ಪರಿಶೀಲಿಸುವ ಮೂಲಕ ಮೆಚ್ಚುಗೆಗೆ ಪಾತ್ರರಾಗಿದ್ದರು.

**ನಿರಂತರ ಅವಮಾನಕ್ಕೆ ಬೇಸರ**

ಕ್ಲಿನಿಕ್‌ನಲ್ಲಿ ಉತ್ತಮ ಸೇವೆ ನೀಡುತ್ತಿದ್ದ ವೈದ್ಯರು ಕರ್ತವ್ಯಕ್ಕೆ ಸೇರಿದ ದಿನದಿಂದಲೇ ಕೆಲ ಹಿರಿಯ



ಅಧಿಕಾರಿಗಳಿಂದ ತಾರತಮ್ಯ ಹಾಗು ಮಾನಸಿಕ ಒತ್ತಡ ಎದುರಿಸುತ್ತಿದ್ದರು ಎನ್ನಲಾಗಿದೆ. ಜನರಿಗೆ ಪರಿಣಾಮಕಾರಿ ಸೇವೆ ನೀಡುತ್ತಿದ್ದರೂ ಅಲ್ಲಿಂದ ಬಿಡುಗಡೆಗೊಳಿಸಿ ಬೇರೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ತೆರಳುವಂತೆ ಅನಗತ್ಯ ಒತ್ತಡ ಹೇರಲಾಗುತ್ತಿತ್ತು. ಇಲಾಖೆಯ ಅಧಿಕೃತ ಸಭೆಗಳಲ್ಲಿ ಸಹೋದ್ಯೋಗಿಗಳ ಎದುರೇ ಅವಮಾನಿಸುವುದು, ವೃತ್ತಿಗೆ ಅಗೌರವ ಬರುವ ರೀತಿ ಚುಚ್ಚು ಮಾತನಾಡುತ್ತಿದ್ದರು. ಅಲ್ಲದೆ ಕ್ಲಿನಿಕ್ ಸಿಬ್ಬಂದಿ ಹಾಗು ವೈದ್ಯರ ಹಾಜರಾತಿ ಪಟ್ಟಿಗೆ ಸಹಿ ಹಾಕುವಂತಹ ಸಾಮಾನ್ಯ ಆಡಳಿತಾತ್ಮಕ ವಿಚಾರಗಳಲ್ಲಿಯೂ ವಿನಾಕಾರಣ ವಿಳಂಬ ಮಾಡಿ ಮಾನಸಿಕವಾಗಿ ಕಿರುಕುಳ ನೀಡಲಾಗುತ್ತಿತ್ತು ಎಂಬ ಗಂಭೀರ ಆರೋಪ ಕೇಳಿಬಂದಿವೆ.

ನಿರಂತರ ಅವಮಾನ ಮತ್ತು ಒತ್ತಡದ ನಡುವೆಯೂ ಸೇವೆ ಮುಂದುವರಿಸಿದ್ದ ವೈದ್ಯರು ಕೊನೆಗೆ ಬೇಸತ್ತು ರಾಜೀನಾಮೆ ನೀಡಿದ್ದಾರೆ. ಕಳೆದ ಕೆಲವು ದಿನಗಳಿಂದ ಕರ್ತವ್ಯಕ್ಕೆ ಗೈರಾಗಿದ್ದ ಡಾ|| ರತನ್ ಅಧಿಕೃತವಾಗಿ ರಾಜೀನಾಮೆ ಸಲ್ಲಿಸಿ ತೆರಳಿರುವುದರಿಂದ ನಮ್ಮ ಕ್ಲಿನಿಕ್ ಮತ್ತೊಮ್ಮೆ ವೈದ್ಯರಿಲ್ಲದ ಸ್ಥಿತಿಗೆ ತಲುಪಿದೆ. ಪ್ರತಿಕ್ರಿಯೆಗೆ ಪ್ರಯತ್ನಿಸಿದರೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಸಂಪರ್ಕಕ್ಕೆ ಸಿಗಲಿಲ್ಲ.

## ಯುವಕ ಅನುಮಾನಾಸ್ಪದ ಸಾವು

• ಪ್ರಜೋದಯ ವರದಿ

**ಹಾಸನ:** ಯುವಕ ಅನುಮಾನಾಸ್ಪದವಾಗಿ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಮಾರನಹಳ್ಳಿಯಲ್ಲಿ ನಡೆದಿದೆ. ಕುಟುಂಬಸ್ಥರು ಕೊಲೆ ಮಾಡಲಾಗಿದೆ ಎಂದು ಆರೋಪಿಸಿದ್ದಾರೆ. ಅರುಣ್‌ಕುಮಾರ್ (30) ಮೃತ ಯುವಕ.

ಕೋಲಾರದಲ್ಲಿ ಬೇಕರಿ ಕೆಲಸ ಮಾಡುತ್ತಿದ್ದ ಅರುಣ್ ಕುಮಾರ್, ಕೆಲ ದಿನಗಳ ಹಿಂದೆ ಕೆಲಸ ಬಿಟ್ಟು ಮನೆಗೆ ವಾಪಾಸ್ ಬಂದು, ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದ. ಸೋಮವಾರ ಸ್ನೇಹಿತ ಅಶ್ವಥ್ ಎಂಬಾತನ ಬಳಿ ಇದ್ದ ಬೈಕ್ ತರುವುದಾಗಿ ಹೇಳಿ ಅರುಣ್ ಕುಮಾರ್ ಮನೆಯಿಂದ ಹೋಗಿದ್ದ. ಈ ನಡುವೆ ಬಾರ್‌ವೊಂದರ ಬಳಿ ಅಶ್ವಥ್ ಜೊತೆ ಅರುಣ್ ಕುಮಾರ್ ಜಗಳವಾಡಿಕೊಂಡಿದ್ದ ಎನ್ನಲಾಗಿದೆ. ಅದಾದ ಕೆಲ ಹೊತ್ತಿನ ನಂತರ ಮಾರನಹಳ್ಳಿ ಸಮೀಪದ ಹೊಂಡದ ಬಳಿ ಅರುಣ್ ಕುಮಾರ್ ಮೃತದೇಹ ಪತ್ತೆಯಾಗಿದೆ.

ಮೃತದೇಹದ ಪಕ್ಕದಲ್ಲೇ ಅರುಣ್ ಕುಮಾರ್ ಬೈಕ್ ನಿಂತಿದೆ. ಸ್ನೇಹಿತರೇ ಕೊಲೆ ಮಾಡಿ ಅಪಘಾತ ಎಂದು ಬಿಂಬಿಸಿದ್ದಾರೆಂದು ಮೃತನ ಕುಟುಂಬದವರು ಆರೋಪಿಸಿ ದ್ದಾರೆ. ಅರುಣ್‌ಕುಮಾರ್ ಮನೆಯಿಂದ ಹೊರಟಾಗ ಹಾಕಿದ್ದ ಟೀ ಶರ್ಟ್‌ಗೂ, ಮೃತಪಟ್ಟಾಗ ಹಾಕಿಕೊಂಡಿರುವ ಟೀ ಶರ್ಟ್ ಬೇರೆ ಎಂದು ಅನುಮಾನ ವ್ಯಕ್ತಪಡಿಸಿ, ನ್ಯಾಯ ಒದಗಿಸುವಂತೆ ಕುಟುಂಬಸ್ಥರು ಆಗ್ರಹಿಸಿದ್ದಾರೆ. ಗ್ರಾಮಾಂತರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

## ಅ.7ಕ್ಕೆ ಅಂತಿಮ ಮತದಾರರ ಪಟ್ಟಿ | ನೋಂದಣಿಯಲ್ಲಿ ಭಾಗವಹಿಸಲು ಕರೆ

# ಎಸ್‌ಐಆರ್:ಜೂ.30 ರಿಂದ ಒಂದು ತಿಂಗಳು ಸಿಬ್ಬಂದಿ ಮನೆ ಭೇಟಿ

• ಪ್ರಜೋದಯ ವರದಿ

**ಹಾಸನ:** ವಿಧಾನಸಭಾ ಕ್ಷೇತ್ರದಲ್ಲಿ ಮತದಾರರ ಪಟ್ಟಿ ತೀವ್ರ ಪರಿಷ್ಕರಣೆಗೆ ಸಿದ್ಧತೆ ಮಾಡಿಕೊಂಡಿದ್ದು, ಜೂ.30 ರಿಂದ ಜು.29ರ ವರೆಗೆ ಮತದಾರರ ಮನೆ-ಮನೆಗೆ ಭೇಟಿ ನೀಡಿ ಗಣತಿ ಪ್ರಮಾಣ ಪತ್ರ ಭರ್ತಿ ಮಾಡಲಾಗುತ್ತದೆಂದು ಉಪವಿಭಾಗಾಧಿಕಾರಿ ಜಗದೀಶ್ ಗಂಗಣ್ಣನವರ್ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ಹಾಸನ ವಿಧಾನಸಭಾ ಕ್ಷೇತ್ರದಲ್ಲಿ ಎಸ್‌ಐಆರ್ ಪ್ರಕ್ರಿಯೆಗಾಗಿ 275 ಸಿಬ್ಬಂದಿ, 64 ಬಿಎಲ್‌ಒ ಹಾಗು 5 ತರಬೇತುದಾರರ ನಿಯೋಜಿಸಲಾಗಿದೆ. ಚುನಾವಣಾ ಆಯೋಗದ ನಿರ್ದೇಶನದಂತೆ ಮ್ಯಾಪಿಂಗ್ ಕಾರ್ಯ ನಡೆಸಲಾಗಿದೆ. ಶೇ.95 ರಷ್ಟು ಮ್ಯಾಪಿಂಗ್ ಕಾರ್ಯ ಪೂರ್ಣಗೊಂಡಿದೆ. ಈ ವೇಳೆ ಪ್ರಕ್ರಿಯೆಯಿಂದ ಹೊರಗುಳಿದವರು ಆತಂಕಕ್ಕೆ ಒಳಗಾಗದೆ ಮತ್ತೊಮ್ಮೆ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು. ಮತಗಟ್ಟೆ ಅಧಿಕಾರಿಗಳ ಮನೆ ಮನೆಗೆ ಭೇಟಿ ಅವಧಿಯಲ್ಲಿ ಮತದಾರರು ಲಭ್ಯವಿಲ್ಲದಿದ್ದರೆ 3 ಬಾರಿ ಭೇಟಿ ನೀಡುತ್ತಾರೆ. ಬೆಳಿಗ್ಗೆ 10 ಗಂಟೆ ಒಳಗೆ ಹಾಗು ಸಂಜೆ 5ರ ನಂತರ ಮನೆ ಭೇಟಿಗೆ ಸೂಚಿಸಲಾಗಿದೆ. ಅರ್ಹ ಮತದಾರರು ಪಟ್ಟಿಯಿಂದ ಹೊರಗುಳಿಯಬಾರದೆಂಬ ಉದ್ದೇಶದಿಂದ ಎಲ್ಲಾ ಕ್ರಮ ಕೈಗೊಳ್ಳಲಾಗಿದೆ ಎಂದರು.

ಖಾಲಿ ಗಣತಿ ಪ್ರಮಾಣ ಪತ್ರದಲ್ಲಿ ಮತದಾರರ ವಿವರಗಳನ್ನು ಭರ್ತಿ ಮಾಡಿ ಸಂಬಂಧಪಟ್ಟವರ ಸಹಿ ಪಡೆದು ನಂತರ ಆ್ಯಪ್‌ನಲ್ಲಿ ಅಪ್ಲೋಡ್ ಮಾಡಲಾಗುತ್ತದೆ. ಮತಗಟ್ಟೆ ಅಧಿಕಾರಿಗಳು ಮನೆ ಭೇಟಿಗೆ ಬರುವ ಮೊದಲು ಮತಗಟ್ಟೆ ಏಜೆಂಟರೊಂದಿಗೆ ಸಭೆ ನಡೆಸಬೇಕು. ಮಾನ್ಯತೆ ಪಡೆದ ರಾಜಕೀಯ ಪಕ್ಷಗಳಿಗೆ ಬಿಎಲ್



ಎಗಳ ನೇಮಿಸುವಂತೆ ಮೇ 27ರಂದು ಸೂಚಿಸಲಾಗಿದೆ ಎಂದರು.

**ಎಸ್‌ಐಆರ್ ಪ್ರಕ್ರಿಯೆ ಹೇಗೆ**

2026ರ ಅ.1 ವಿಶೇಷ ಸಮಗ್ರ ಪರಿಷ್ಕರಣೆಗೆ ಅರ್ಹತಾ ದಿನವಾಗಿದೆ. ಜೂನ್ 20 ರಿಂದ 29ರ ವರೆಗೆ ಪೂರ್ವ ತಯಾರಿ, ತರಬೇತಿ ಮತ್ತು ಮುದ್ರಣಕ್ಕೆ ವ್ಯವಸ್ಥೆ ಮಾಡಿಕೊಳ್ಳುವುದು. ಜೂನ್ 30 ರಿಂದ ಜುಲೈ 29ರ ವರೆಗೆ ಮತಗಟ್ಟೆ ಅಧಿಕಾರಿಗಳಿಂದ ಮನೆ ಮನೆಗೆ ಭೇಟಿ, ಜುಲೈ 29 ಮತಗಟ್ಟೆಗಳ ಪುನರ್ ವಿಂಗಡಣೆ ಕಾರ್ಯ, ಆ.5ರಂದು ಕರಡು ಮತದಾರರ ಪಟ್ಟಿ ಪ್ರಕಟವಾಗಲಿದೆ. ಆ.5 ರಿಂದ ಸೆ.4ರ ವರೆಗೆ ಹಕ್ಕು ಮತ್ತು ಆಕ್ಷೇಪಣೆ ಸಲ್ಲಿಸಲು ಅವಕಾಶ ಕಲ್ಪಿಸಿದೆ. ಅಂತಿಮವಾಗಿ ಅ.7ರಂದು ಅಂತಿಮ ಮತದಾರರ ಪಟ್ಟಿ ಪ್ರಕಟವಾಗಲಿದೆ ಎಂದು ಮಾಹಿತಿ ನೀಡಿದರು.

ಮ್ಯಾಪಿಂಗ್ ಪ್ರಕ್ರಿಯೆಯಿಂದ ಕೈಬಿಟ್ಟಿರುವವರು ಆತಂಕಕ್ಕೆ ಒಳಗಾಗದೆ ಕೆಲ ನಿಯಮಗಳನ್ನು ಪಾಲಿಸಬೇಕಾಗುತ್ತದೆ. 1987ರ ಜುಲೈ 1 ರಿಂದ 2004ರ ಜನವರಿ 1ರ ಅವಧಿಯಲ್ಲಿ ಜನಿಸಿರುವವರು ಕಡ್ಡಾಯವಾಗಿ ತಮ್ಮ ಜನನ ಪ್ರಮಾಣ ಪತ್ರ ಸಲ್ಲಿಸಬೇಕು. ಅಗತ್ಯ ದಾಖಲಾತಿಗಳು ಇಲ್ಲದಿದ್ದರೆ ಬ್ಯಾಂಕ್ ಪಾಸ್‌ಬುಕ್ ಅಥವಾ ಯಾವುದಾರರು ಅಧಿಕೃತ ಗುರುತಿನ ಚೀಟಿ ಸಲ್ಲಿಸಬೇಕು. 2004ರ ಬಳಿಕ ಜನಿಸಿದವರು ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ ನೀಡುವುದನ್ನು ಕಡ್ಡಾಯಗೊಳಿಸಿದೆ. ಒಂದು ವೇಳೆ ಕುಟುಂಬದ ಸದಸ್ಯರು ಹೊರ ಊರಿನಲ್ಲಿ ನೆಲೆಸಿದ್ದರೆ ಅವರ ಕುಟುಂಬಸ್ಥರು ತಮ್ಮದೇ ಸಹಿ ಹಾಕಿ ಸಂಬಂಧಪಟ್ಟವರ ದಾಖಲೆಗಳನ್ನು ನೀಡಿದರೆ ಮತದಾರರ ಪಟ್ಟಿಗೆ ಸೇರ್ಪಡೆ ಮಾಡಲಾಗುತ್ತದೆ. ಈ ಮೊದಲೇ ಮತದಾರರ ಗುರುತಿನ ಚೀಟಿ ಇದೆ, ಈ ಪ್ರಕ್ರಿಯೆ ನಮಗೆ ಸಂಬಂಧಿಸಿಲ್ಲವೆಂದು ನಿರ್ಲಕ್ಷ್ಯ ತೋರಿದರೆ ಪ್ರಮಾದವಾಗುತ್ತದೆಂದು ಅವರು ಎಚ್ಚರಿಸಿದರು.

**ಆಕ್ಷೇಪಣೆ ಸಲ್ಲಿಸಲು ಅವಕಾಶ**

ಮತಗಟ್ಟೆ ಅಧಿಕಾರಿಗಳಿಗೆ ಎಲ್ಲಾ ದಾಖಲಾತಿ ಸಲ್ಲಿಸಿದ ಬಳಿಕವೂ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಪ್ರಕಟವಾಗದಿದ್ದರೆ, ತಮಗೆ ಗೊತ್ತಿರುವಂತೆ ಮರಣ ಹೊಂದಿದವರ ಹೆಸರು ಸೇರಿದ್ದರೆ ಅಂತಹ ದೂರುಗಳನ್ನು ಆ.5 ರಿಂದ ಸೆ.9ರ ವರೆಗೆ ಸಲ್ಲಿಸಬಹುದು. ಈ ವಿಚಾರದಲ್ಲಿ ರಾಜಕೀಯ ಪಕ್ಷಗಳ ಏಜೆಂಟರು ಎಚ್ಚರಿಕೆ ವಹಿಸಬೇಕಾಗುತ್ತದೆಂದರು. ತಹಶೀಲ್ದಾರ್ ಗೀತಾ ಹಾಜರಿದ್ದರು.

## ಮಾಲೇಕಲ್ಲು ತಿರುಪತಿ ಬೆಟ್ಟದಲ್ಲಿ ಕರಡಿ ಪ್ರತ್ಯಕ್ಷ

**ಅರಸೀಕೆರೆ:** ತಾಲ್ಲೂಕಿನ ಅಮರಗಿರಿ ಮಾಲೇಕಲ್ಲು ತಿರುಪತಿ ಬೆಟ್ಟದ ತಪ್ಪಲಿನಲ್ಲಿರುವ ಗುಂಡಮ್ಮ ದೇವಸ್ಥಾನದ ಸಮೀಪ ಕರಡಿ ಕಾಣಿಸಿಕೊಂಡು ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದೆ.



ಬೆಟ್ಟದ ಸುತ್ತಮುತ್ತ ಸಂರಕ್ಷಿತ ಅರಣ್ಯ ಪ್ರದೇಶವಿದ್ದು, ಕರಡಿ, ಚಿರತೆ ಸೇರಿ ವಿವಿಧ ವನ್ಯಜೀವಿಗಳ ವಾಸಸ್ಥಳವಾಗಿದೆ. ಆಹಾರ ಹುಡುಕುತ್ತಾ ವನ್ಯಜೀವಿಗಳು ಗ್ರಾಮ ಹಾಗು ಕೃಷಿ ಜಮೀನು ಕಡೆಗೆ ಸಂಚರಿಸುವುದು ಸಾಮಾನ್ಯವಾಗಿದೆ.

ಈ ಕುರಿತು ವಲಯ ಅರಣ್ಯಾಧಿಕಾರಿ ಹೇಮಂತ್ ಪ್ರತಿಕ್ರಿಯಿಸಿ, ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ಅನಧಿಕೃತವಾಗಿ ಪ್ರವೇಶಿಸುವ ವೇಳೆ ಕಾಡುಪ್ರಾಣಿಗಳಿಂದ ಅಹಿತಕರ ಘಟನೆ ಸಂಭವಿಸಿದರೆ ಅದಕ್ಕೆ ಅರಣ್ಯ ಇಲಾಖೆ ಜವಾಬ್ದಾರಿಯಾಗುವುದಿಲ್ಲ. ಸಂರಕ್ಷಿತ ಅರಣ್ಯ ಪ್ರದೇಶದಲ್ಲಿರುವ ಕಾಡುಪ್ರಾಣಿಗಳು ಆಹಾರ ಅರಸಿ ಸುತ್ತಮುತ್ತಲಿನ ಜಮೀನುಗಳಿಗೆ ಸಂಚರಿಸುವುದು ಸಹಜ. ಬೆಳಿಗ್ಗೆ ಹಾಗು ಸಂಜೆ ವೇಳೆಯಲ್ಲಿ ಸಾರ್ವಜನಿಕರು ಎಚ್ಚರಿಕೆಯಿಂದ ಓಡಾಡಬೇಕು. ಕಾಡುಪ್ರಾಣಿಗಳು ಕಂಡು ಬಂದಲ್ಲಿ ತಕ್ಷಣ ಅರಣ್ಯ ಇಲಾಖೆಯ ಕಚೇರಿಗೆ ಮಾಹಿತಿ ನೀಡುವಂತೆ ಸಾರ್ವಜನಿಕರಿಗೆ ಮನವಿ ಮಾಡಿದರು.

# ಶೂನ್ಯದಿಂದ ಕೋಟಿಗಳ ಸಾಮ್ರಾಜ್ಯ

**ಟರ್ಕಿಯ ಪರ್ವತ ಪ್ರದೇಶದ ಕುರುಬರ ಕುಟುಂಬದಲ್ಲಿ ಜನಿಸಿದ ಹಮ್ದಿಗೆ ಇಂಗ್ಲಿಷ್ ಭಾಷೆ ಬರುತ್ತಿರಲಿಲ್ಲ, ಆಹಾರ ಉದ್ಯಮದ ಅನುಭವವೂ ಇರಲಿಲ್ಲ. ಆದರೆ, ಅಮೆರಿಕನ್ನರು ತಿನ್ನುತ್ತಿದ್ದ ಸಕ್ಕರೆ ಮಿಶ್ರಿತ, ತೆಳುವಾದ ಮೊಸರಿಗಿಂತ ತನ್ನ ತಾಯಿ ಮಾಡುತ್ತಿದ್ದ ಸಾಂಪ್ರದಾಯಿಕ, ಗಟ್ಟಿಯಾದ ಮೊಸರು ಎಷ್ಟೋ ಮೇಲು ಎಂಬ ಆತ್ಮವಿಶ್ವಾಸ ಅವರಿಗಿತ್ತು.**



## ಚೋಬಾನಿ ಮೊಸರಿನ ಯಶೋಗಾಥೆ

ಒಂದೊಳ್ಳೆ ಮಾತು

ಅದು 2005ನೇ ಇಸವಿ. ನ್ಯೂಯಾರ್ಕ್‌ನ ನ್ಯೂ ಬರ್ಲಿನ್‌ನಲ್ಲಿ ಕ್ರ್ಯಾಫ್ಟ್ ಫುಡ್ಸ್ ಸಂಸ್ಥೆಗೆ ಸೇರಿದ ಒಂದು ಹಳೆಯ ಮೊಸರು ಕಾರ್ಖಾನೆ ಮುಚ್ಚಿ ಹೋಗಿತ್ತು. ಮೊಸರು ಮಾರಾಟ ನಮಗೆ ಲಾಭದಾಯಕವಲ್ಲ ಎಂದು ನಿರ್ಧರಿಸಿ ಆ ಬೃಹತ್ ಕಂಪನಿ ಆ ಕಾರ್ಖಾನೆಯನ್ನು ಕೈಬಿಟ್ಟಿತ್ತು. ಆದರೆ, 33 ವರ್ಷದ ಕುರ್ದಿಶ್ ಮೂಲದ ವಲಸಿಗ ಹಮ್ದಿ ಉಲುಕಾಯಾ ಅವರಿಗೆ ಆ ಪಾಳುಬಿದ್ದ ಕಟ್ಟಡದಲ್ಲಿ ಒಂದು ಹೊಸ ಭವಿಷ್ಯ ಕಾಣಿಸಿತು.

ಟರ್ಕಿಯ ಪರ್ವತ ಪ್ರದೇಶದ ಕುರುಬರ ಕುಟುಂಬದಲ್ಲಿ ಜನಿಸಿದ ಹಮ್ದಿಗೆ ಇಂಗ್ಲಿಷ್ ಭಾಷೆ ಬರುತ್ತಿರಲಿಲ್ಲ, ಆಹಾರ ಉದ್ಯಮದ ಅನುಭವವೂ ಇರಲಿಲ್ಲ. ಆದರೆ, ಅಮೆರಿಕನ್ನರು ತಿನ್ನುತ್ತಿದ್ದ ಸಕ್ಕರೆ ಮಿಶ್ರಿತ, ತೆಳುವಾದ ಮೊಸರಿಗಿಂತ ತನ್ನ ತಾಯಿ ಮಾಡುತ್ತಿದ್ದ ಸಾಂಪ್ರದಾಯಿಕ, ಗಟ್ಟಿಯಾದ ಮೊಸರು ಎಷ್ಟೋ ಮೇಲು ಎಂಬ ಆತ್ಮವಿಶ್ವಾಸ ಅವರಿಗಿತ್ತು.

ಬ್ಯಾಂಕಿನಿಂದ ಪಡೆದ 10 ಲಕ್ಷ ಡಾಲರ್ ಸಾಲದ ಹಣದಿಂದ ಅವರು ಆ ಮುಚ್ಚಿದ ಕಾರ್ಖಾನೆಯನ್ನು ಖರೀದಿಸಿದರು. ಕ್ರ್ಯಾಫ್ಟ್ ಸಂಸ್ಥೆಗೇ ಮಾಡಲಾಗದ್ದನ್ನು ನೀವೂ ಬರೆಯಬಹುದು ನೀನೇನು ಮಾಡಲು ಸಾಧ್ಯ? ನೀನೊಬ್ಬ ಕುರುಬ, ನಿನಗೇನು ಗೊತ್ತು? ಎಂದು ಎಲ್ಲರೂ ನಕ್ಕರು. ಆದರೆ ಹಮ್ದಿ ಯಾರ ಮಾತನ್ನೂ ಕೇಳಲಿಲ್ಲ.

ಕಾರ್ಖಾನೆ ಖರೀದಿಸಿದ ತಕ್ಷಣ ಹಮ್ದಿ ಮಾಡಿದ ಮೊದಲ ಕೆಲಸ-ಹಿಂದೆ ಕೆಲಸ ಕಳೆದುಕೊಂಡಿದ್ದ ಐದು ಜನ ಸ್ಥಳೀಯ ಕಾರ್ಮಿಕರನ್ನು ಮತ್ತೆ ಕೆಲಸಕ್ಕೆ ಸೇರಿಸಿಕೊಂಡಿದ್ದು. ಟರ್ಕಿಯಿಂದ ಒಬ್ಬ ಮೊಸರು ತಜ್ಞರನ್ನು ಕರೆಸಿ, ಸುಮಾರು 18 ತಿಂಗಳುಗಳ ಕಾಲ ಹಗಲು ರಾತ್ರಿ ಶ್ರಮಿಸಿ, ಯಾವುದೇ ರಾಸಾಯನಿಕವಿಲ್ಲದ ಸಾಂಪ್ರದಾಯಿಕ ಗ್ರೀಕ್ ಮೊಸರನ್ನು ಸಿದ್ಧಪಡಿಸಿದರು. ಅದಕ್ಕೆ ಚೋ ಬಾನಿ ಎಂದು ಹೆಸರಿಟ್ಟರು, ಅಂದರೆ ಕುರ್ದಿಶ್ ಭಾಷೆಯಲ್ಲಿ ಕುರುಬ ಎಂದರ್ಥ.

ಅಕ್ಟೋಬರ್ 2007ರಲ್ಲಿ ಚೋಬಾನಿ ಮೊಸರಿನ ಮೊದಲ ಆರ್ಡರ್ ಮಾರುಕಟ್ಟೆಗೆ ಬಂದಿತು. ಯಾವುದೇ ದೊಡ್ಡ ಜಾಹೀರಾತು ಇಲ್ಲದಿದ್ದರೂ, ಅದರ ಅದ್ಭುತ ರುಚಿಯಿಂದಾಗಿ ಜನರ ಬಾಯಿಂದ ಬಾಯಿಗೆ ಹರಡಿ ಬೇಡಿಕೆ ಹೆಚ್ಚಾಯಿತು. ಆಗ ಮಾರುಕಟ್ಟೆಯ ದೈತ್ಯ ಕಂಪನಿಗಳಾದ ಡ್ಯಾನನ್ ಮತ್ತು ಯೋಪ್ಲೈಟ್‌ಗಳು ಚೋಬಾನಿಯನ್ನು ಹತ್ತಿಕ್ಕಲು ಕಾನೂನು ಸಮರ ಸಾರಿದವು.

ಸೂಪರ್ ಮಾರ್ಕೆಟ್‌ಗಳಲ್ಲಿ ಜಾಗ ಸಿಗದಂತೆ ಮಾಡಲು ಯತ್ನಿಸಿದವು. ಆದರೆ ಗುಣಮಟ್ಟದ ಮುಂದೆ ಅವರ ಯಾವುದೇ ತಂತ್ರಗಳು ಫಲಿಸಲಿಲ್ಲ. 2011ರ ವೇಳೆಗೆ, ಚೋಬಾನಿ ಅಮೆರಿಕಾದ ಮೊಸರು ಮಾರುಕಟ್ಟೆಯ ಶೇಕಡಾ 17ರಷ್ಟು ಪಾಲನ್ನು ವಶಪಡಿಸಿಕೊಂಡಿತು. 2012ರಲ್ಲಿ ವಾರ್ಷಿಕ ಆದಾಯ 100 ಕೋಟಿ ಡಾಲರ್ ದಾಟಿತು. ಇದು ಗೂಗಲ್ ಮತ್ತು ಫೇಸ್ಬುಕ್‌ಗಿಂತಲೂ ವೇಗವಾಗಿ ಬೆಳೆದ ಬ್ರ್ಯಾಂಡ್ ಎನಿಸಿಕೊಂಡಿತು. ಹಮ್ದಿ ಉಲುಕಾಯಾ ಅವರ ಇಂದಿನ ನಿವ್ವಳ ಆಸ್ತಿ ಸುಮಾರು 11000 ಕೋಟಿ ಡಾಲರ್.

ಹಣ ಗಳಿಸಿದ ಮೇಲೂ ಹಮ್ದಿ ತಮ್ಮ ಮಾನವೀಯತೆಯನ್ನು ಮರೆಯಲಿಲ್ಲ. 2016ರಲ್ಲಿ ಅವರು ತಮ್ಮ ಕಂಪನಿಯ ಶೇಕಡಾ 10ರಷ್ಟು ಪಾಲನ್ನು ತಮ್ಮ 2000 ಕಾರ್ಮಿಕರಿಗೆ ಹಂಚಿದರು. ನಿರಾಶ್ರಿತರಿಗೆ ಸಹಾಯ ಮಾಡಲು ಟೆಂಟ್ ಮೇಲೆ ನಂಬಿಕೆಯಿದ್ದರೆ ಇಡೀ ಉದ್ಯಮವನ್ನೇ ಬದಲಾಯಿಸಬಹುದು ಎಂಬುದಕ್ಕೆ ಹಮ್ದಿ ಉಲುಕಾಯಾ ಅವರೇ ಜೀವಂತ ಉದಾಹರಣೆ.

ಕೆಲವೊಮ್ಮೆ ಅನೇಕರು ಕೈಲಾಗದು ಎಂದು ಬಿಟ್ಟು ಹೋದ ಸ್ಥಳದ ಮತ್ಯಾರೋ ಬಂದು ಎಲ್ಲರೂ ಮೂಗಿನ ಮೇಲೆ ಬೆರಳು ಇಡುವಂತೆ, ಸಾಮ್ರಾಜ್ಯವನ್ನು ಕಟ್ಟುತ್ತಾರೆ.

ಇವೆಲ್ಲ ಒಂದು ದಿನದಲ್ಲಿ ಆಗುವ ಕೆಲಸವಲ್ಲ. ಆದರೆ ಆತ್ಮವಿಶ್ವಾಸ, ಆತ್ಮಸ್ಥೈರ್ಯ ಮತ್ತು ಛಲ ಬಿಡದೆ ಪ್ರಯತ್ನಿಸುವ, ಮತ್ತೆ ಮತ್ತೆ ಗುರಿಯೆಡೆಗೆ ಸಾಗುವ ಮನಸ್ಥಿತಿ ಇದ್ದಾಗ ಯಾವುದೂ ಅಸಾಧ್ಯವಲ್ಲ.

**- ರೂಪಾ** ಗುರುರಾಜ್

**ಭಕ್ತರ ಸೌಲಭ್ಯ ಅಗತ್ಯವಿದ್ದರೂ, ಪ್ರಕೃತಿಯ ಸಮತೋಲನ ಕಾಪಾಡುವ ಜವಾಬ್ದಾರಿ ಅದಕ್ಕಿಂತಲೂ ಮುಖ್ಯವಾಗಬೇಕು. ಕುಕ್ಕೆ ಸುಬ್ರಮಣ್ಯ ಎಂಬುದು ಕೇವಲ ದೇವಾಲಯವಲ್ಲ - ಅದು ಪ್ರಕೃತಿ, ಭಕ್ತಿ ಮತ್ತು ಸಂಸ್ಕೃತಿಯ ಸಂಗಮ. ಅಲ್ಲಿನ ಕಾಡಿನ ನಿಶ್ಶಬ್ದ, ಕುಮಾರಧಾರೆ ನದಿಯ ತಣ್ಣನೆಯ ಹರಿವು, ಜನಜೀವನ ಇದೆ.**

# ಈ ಅಭಿವೃದ್ಧಿ ಯಾರಿಗಾಗಿ?



ಪ್ರಸ್ತುತ ಕುಕ್ಕೆ ಸುಬ್ರಮಣ್ಯ ಕ್ಷೇತ್ರದಂತಹ ಪವಿತ್ರ ಸ್ಥಳಗಳಲ್ಲಿ ಅಭಿವೃದ್ಧಿ ಎಂಬ ಹೆಸರಿನಲ್ಲಿ ನಡೆಯುತ್ತಿರುವ ಅತಿಯಾದ ಕಾಂಕ್ರೀಟೀಕರಣ, ಆಧುನೀಕರಣ, ಕಟ್ಟಡಗಳ ನಿರ್ಮಾಣ ನಿಜಕ್ಕೂ ಆತಂಕ ಕಾರಿ ವಿಷಯವೇ ಆಗಿದೆ.

ಒಮ್ಮೆ ಪ್ರಕೃತಿಯ ಮಡಿಲಲ್ಲಿ ನೆಲೆಸಿದ್ದ, ಹಸಿರು ಕಾಡು, ನದಿ, ಮಲೆಗಳ ಮಧ್ಯೆ ದೇವರ ಸಾನ್ನಿಧ್ಯವನ್ನು ಮನಸಾರೆ ಅನುಭವಿಸಬಹುದಾಗಿದ್ದ ಈ ಕ್ಷೇತ್ರಗಳು ಇಂದು ನಿಧಾನವಾಗಿ ವಾಣಿಜ್ಯೀಕರಣ ಮತ್ತು ಅತಿಯಾದ ನಿರ್ಮಾಣಗಳ ಒತ್ತಡಕ್ಕೆ ಒಳಗಾಗುತ್ತಿರುವುದು ಬೇಸರ ಮೂಡಿಸುತ್ತದೆ. ಭಕ್ತರ ಸೌಲಭ್ಯ ಅಗತ್ಯವಿದ್ದರೂ, ಪ್ರಕೃತಿಯ ಸಮತೋಲನ ಕಾಪಾಡುವ ಜವಾಬ್ದಾರಿ ಅದಕ್ಕಿಂತಲೂ ಮುಖ್ಯವಾಗಬೇಕು. ಕುಕ್ಕೆ ಸುಬ್ರಮಣ್ಯ ಎಂಬುದು ಕೇವಲ ದೇವಾಲಯವಲ್ಲ - ಅದು ಪ್ರಕೃತಿ, ಭಕ್ತಿ ಮತ್ತು ಸಂಸ್ಕೃತಿಯ ಸಂಗಮ. ಅಲ್ಲಿನ ಕಾಡಿನ ನಿಶ್ಶಬ್ದ, ಕುಮಾರಧಾರೆ ನದಿಯ ತಣ್ಣನೆಯ ಹರಿವು, ಜನಜೀವನ ಇದೆ. ಪಶ್ಚಿಮ ಘಟ್ಟಗಳ ಹಸಿರು ವಾತಾವರಣವೇ ಆ ಕ್ಷೇತ್ರದ ಆತ್ಮವಾಗಿದೆ. ಆ ಆತ್ಮವನ್ನು ಕಳೆದುಕೊಳ್ಳುವ ರೀತಿಯ ಅಭಿವೃದ್ಧಿ ದೀರ್ಘಕಾಲದಲ್ಲಿ ಕ್ಷೇತ್ರದ ವೈಶಿಷ್ಟ್ಯವನ್ನೇ ಮಸುಕಾಗಿಸಬಹುದು. ಕುಕ್ಕೆಯ ಪಕ್ಕದ ಪ್ರದೇಶಗಳಾದ ಐನೆಕಿದು, ಬಾಳುಗೋಡು, ಏನೆಕಲ್ಲು, ಕಜೆ, ಕೈಕಂಬ ಮೊದಲಾದ ಕಡೆಗಳಲ್ಲಿ ಯೋಜಿತ ರೀತಿಯಲ್ಲಿ ವಸತಿ, ವಾಹನ ನಿಲ್ದಾಣ, ವಾಣಿಜ್ಯ ಸಂಕೀರ್ಣಗಳು ಮತ್ತು ಪ್ರವಾಸೋದ್ಯಮ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಿದ್ದರೆ, ಕ್ಷೇತ್ರದ ಮೇಲಿನ ಒತ್ತಡವೂ ಕಡಿಮೆಯಾಗುತ್ತಿತ್ತು ಮತ್ತು ಪರಿಸರವೂ ಉಳಿಯುತ್ತಿತ್ತು.

ಇದು ಕ್ಷೇತ್ರದ ಸಂರಕ್ಷಣೆ ಜೊತೆಗೆ ಸಮತೋಲನದ ಅಭಿವೃದ್ಧಿ ಎನ್ನುವ ದಾರಿಯಾಗಬಹುದಿತ್ತು. ಕುಕ್ಕೆ ಸುಬ್ರಹ್ಮಣ್ಯ ಮೊದಲು ನಾನಾ ಬಗೆಯ ಸರ್ಪಗಳ ತವರು. ಇಲ್ಲಿನ ಕನ್ನಡಿ ಹೊಳೆಯಂತೂ ಕನ್ನಡಿಯಂತೆ ಸ್ವಚ್ಛವಾಗಿತ್ತು. ಆದರೆ ಅಭಿವೃದ್ಧಿಯ ಹೊಳೆಯಿಂದಾಗಿ ಕನ್ನಡಿ ಹೊಳೆ ಕಲುಷಿತವಾಗಿದೆ. ಸರ್ಪಗಳು ಈಗ ಕಾಣಸಿಗಲಾರವು.

ಕುಕ್ಕೆಯಂತೆಯೇ ರಾಜ್ಯದಲ್ಲಿ ಇನ್ನೂ ಹಲವು ಕ್ಷೇತ್ರಗಳಿವೆ. ಇದರಲ್ಲಿ ಕೆಲವು ಖಾಸಗಿಯವರಿಗೆ ಸೇರಿವೆ. ಅಲ್ಲೂ ಅಭಿವೃದ್ಧಿಯ ಭರಾಟೆ ನಡೆದಿದೆ. ಲಕ್ಷಾಂತರ ಸಂಖ್ಯೆಯಲ್ಲಿ ಬರುವ ಭಕ್ತರು ತಂಗಲು ವಸತಿಗೃಹಗಳು ಲೆಕ್ಕವಿಲ್ಲದಷ್ಟು ಹುಟ್ಟಿಕೊಳ್ಳುತ್ತಿವೆ. ಈ ಭಕ್ತರಿಗೆ ಊಟ ತಿಂಡಿ ನೀಡಲು ಹೋಟೆಲುಗಳು ಸೃಷ್ಟಿಯಾಗುತ್ತಿವೆ. ಆದರೆ ಈ ಹೊಟೆಲ್‌ಗಳಲ್ಲಿ ಅಲ್ಲಿನ ಸ್ಥಳೀಯ ಖಾದ್ಯ ವೈವಿಧ್ಯಗಳು ಸಿಗುವುದೇ ಅಲ್ಲ. ಮತ್ತದೇ ಬೆಂಗಳೂರಿನ ತಿಂಡಿಗಳು. ಉತ್ತರ ಭಾರತದ ರೋಟಿ, ನಾನ್, ಕುಲ್ಚಾಗಳು ಎಲ್ಲ ದಂಡಿಯಾಗಿ ಸಿಗುತ್ತವೆ. ಹೀಗೆ ಆಧುನೀಕರಣಗೊಂಡಲ್ಲಿ ಸ್ಥಳೀಯರಿಗೆ ಕೆಲಸಗಳು ಸಿಕ್ಕಿದರೆ ಪರವಾಗಿಲ್ಲ. ಆದರೆ ಹಾಗಾಗುವುದೇ ಇಲ್ಲ. ಸ್ಥಳೀಯರ ಬದಲು ಇಲ್ಲಿ ಬಿಹಾರಿಗಳು, ಉತ್ತರ ಪ್ರದೇಶದವರು ಬಂದು ನೆಲೆಸುತ್ತಾರೆ. ಪಾರ್ಕಿಂಗ್, ಶೌಚಗೃಹ ಕಾಯುವಿಕೆ ಮುಂತಾದ ಕಡೆಗಳಲ್ಲಿ ಈಗಾಗಲೇ ಉತ್ತರ ಭಾರತೀಯರು ಇದ್ದಾರೆ. ನಿಧಾನವಾಗಿ ಇವರು ಇನ್ನೂ ಹಲವರನ್ನು ಅಲ್ಲಿಂದ ಕರೆದುಕೊಂಡು ಬಂದು ಇಲ್ಲಿ ಕಾಲನಿಗಳನ್ನೇ ಸೃಷ್ಟಿಸುತ್ತಿದ್ದಾರೆ.

ಚಿಕ್ಕಮಗಳೂರು ಮುಂತಾದ ಕಡೆಗಳಲ್ಲಿ ಇವರ ಕಾಲನಿಗಳು ಈಗಾಗಲೇ ಇವೆ. ನಿಧಾನವಾಗಿ ಇವು ಸುಬ್ರಹ್ಮಣ್ಯ, ಧರ್ಮಸ್ಥಳ, ಹೊರನಾಡು, ಶೃಂಗೇರಿಗಳಲ್ಲೂ ಕಂಡುಬಂದರೆ ಆಶ್ಚರ್ಯವಿಲ್ಲ. ನಮ್ಮ ದೇಶದ ಸಂವಿಧಾನದ ಪ್ರಕಾರ ಯಾರೂ ಎಲ್ಲೂ ಕೆಲಸ ಮಾಡಬಹುದು. ಆದರೆ ಸ್ಥಳೀಯ ಜನಜೀವನ, ಬದುಕಿನ ವೈಖರಿ ಏರುಪೇರು ಆಗಬಾರದು. ಅಭಿವೃದ್ಧಿ ಅಗತ್ಯವೇ ಸರಿ, ಆದರೆ ಅದು ಪ್ರಕೃತಿಯನ್ನು ಅಳಿಸಿ ಮಾಡುವ ಅಭಿವೃದ್ಧಿಯಾಗಬಾರದು.

**- ನಿತಿನ್** ಮಲ್ಲಾರ

**■ ರಸ್ತೆ ಅಪಘಾತದಲ್ಲಿ ಪ್ರತಿ ನೂರು ಸಾವಿನಲ್ಲಿ ಆರು ಮಂದಿ ಹದಿನೆಂಟು ವರ್ಷಕ್ಕಿಂತ ಕಡಿಮೆ ಇರುವವರು ವಾಹನ ಚಲಾಯಿಸುತ್ತಿದ್ದರು ಎನ್ನುವುದು ತಿಳಿದು ಬಂದಿದೆ. ಹದಿನೆಂಟಕ್ಕಿಂತ ಮುಂಚೆ ವಾಹನ ಚಲಾಯಿಸಲು ಅನುಮತಿಯನ್ನು ನಮ್ಮ ಕಾನೂನು ನೀಡುವುದಿಲ್ಲ. ಆದರೆ ಈ ಕಾನೂನು ಯಾರೂ ಪಾಲಿಸುತ್ತಿಲ್ಲ. ಇದು ತಪ್ಪು ಎನ್ನುವುದು ಸಮಾಜದಲ್ಲಿ ಚರ್ಚೆ ಕೂಡ ಆಗುವುದಿಲ್ಲ.**

# ನೈತಿಕತೆ ಬೇರೆಯವರಿಗೆ ನೀತಿಪಾಠವಾದರೆ ಸಾಕೆ?



ವಿಶ್ವರಂಗ

ದೃಶ್ಯ ಒಂದು: ಮೈಸೂರಿನ ಒಂದು ರಸ್ತೆಯಲ್ಲಿ ಹದಿನೆಂಟು ತುಂಬಿರದ ಹುಡುಗನೊಬ್ಬ ಬೈಕು ಚಲಾಯಿಸಿಕೊಂಡು ಹೋಗುತ್ತಿದ್ದಾನೆ. ಆತನ ಹಿಂದೆ ಕುಳಿತ ತಂದೆಯ ಮುಖದಲ್ಲಿ ತನ್ನ ಮಗ ಬೈಕ್ ಚಲಾಯಿಸುವ ಬಗ್ಗೆ ಅತೀವ ಹೆಮ್ಮೆ. ಅದೇ ಬಡಾವಣೆಯಲ್ಲಿರುವ ಕಾರಣ ಅವರ ಬಗ್ಗೆ ತಿಳಿದುಕೊಂಡೆ. ಆತ ಶಿಸ್ತಿನ ಮನುಷ್ಯ. ಸ್ವಲ್ಪವೂ ಕೆಟ್ಟ ಹೆಸರು ಪಡೆದುಕೊಂಡಿಲ್ಲ. ಆದರೆ ಹದಿನೆಂಟು ದೂರದ ಮಾತು, ಹದಿನಾರು ಕೂಡ ತುಂಬದ ಮಗ ಬೈಕು ಓಡಿಸುವುದು ಆತನಿಗೆ ಹೆಮ್ಮೆ. ನಮ್ಮ ಸಮಾಜದಲ್ಲಿ ಹದಿನೆಂಟು ತುಂಬದ ಲಕ್ಷಾಂತರ ಮಕ್ಕಳು ರಾಜಾರೋಷವಾಗಿ ರಸ್ತೆಯಲ್ಲಿ ಬೈಕು, ಕಾರು ಚಲಾಯಿಸುತ್ತಿದ್ದಾರೆ.

ರಸ್ತೆ ಅಪಘಾತದಲ್ಲಿ ಪ್ರತಿ ನೂರು ಸಾವಿನಲ್ಲಿ ಆರು ಮಂದಿ ಹದಿನೆಂಟು ವರ್ಷಕ್ಕಿಂತ ಕಡಿಮೆ ಇರುವವರು ವಾಹನ ಚಲಾಯಿಸುತ್ತಿದ್ದರು ಎನ್ನುವುದು ತಿಳಿದು ಬಂದಿದೆ. ಹದಿನೆಂಟಕ್ಕಿಂತ ಮುಂಚೆ ವಾಹನ ಚಲಾಯಿಸಲು ಅನುಮತಿಯನ್ನು ನಮ್ಮ ಕಾನೂನು ನೀಡುವುದಿಲ್ಲ. ಆದರೆ ಈ ಕಾನೂನು ಯಾರೂ ಪಾಲಿಸುತ್ತಿಲ್ಲ. ಇದು ತಪ್ಪು ಎನ್ನುವುದು ಸಮಾಜದಲ್ಲಿ ಚರ್ಚೆ ಕೂಡ ಆಗುವುದಿಲ್ಲ.

ದೃಶ್ಯ ಎರಡು: ತಿಂಗಳ ಮೊದಲ ವಾರ ಮತ್ತು ಕೊನೆಯ ವಾರದಲ್ಲಿ ಮೈಸೂರಿನ ಪ್ರಮುಖ ರಸ್ತೆಗಳಲ್ಲಿ ಟ್ರಾಫಿಕ್ ಪೊಲೀಸರು ನಿಂತಿರುತ್ತಾರೆ. ರಸ್ತೆಯಲ್ಲಿ ದ್ವಿಚಕ್ರ ಚಲಾಯಿಸುವವರಲ್ಲಿ 70 ಪ್ರತಿಶತಕ್ಕೂ ಹೆಚ್ಚಿನ ಜನ ತಲೆಗೆ ಹೆಲ್ಮೆಟ್ ಹಾಕುವುದಿಲ್ಲ. ಬಹಳಷ್ಟು ಜನ ಅದನ್ನು ಬೈಕಿನಲ್ಲಿ ತಗಲಾಕಿರುತ್ತಾರೆ. ಪೊಲೀಸರನ್ನು ನೋಡಿದ ತಕ್ಷಣ ಅದನ್ನು ತಲೆಗೆ ಏರಿಸುತ್ತಾರೆ. ಹೆಣ್ಣು, ಗಂಡು ಮತ್ತು ವಯಸ್ಸಿನ ಭೇದವಿಲ್ಲದೆ ಪೊಲೀಸರನ್ನು ಕಂಡ ತಕ್ಷಣ ವಾಹನ ನಿಲ್ಲಿಸಿ, ವಿರುದ್ಧ ದಿಕ್ಕಿನಲ್ಲಿ ಹೋಗುವುದು ಕಂಡಿದ್ದೇನೆ. ನಾವು ಮಾಡಿದ್ದು ತಪ್ಪು ಎನ್ನುವ ಲವಲೇಶ ಭಾವನೆಯೂ ಅವರಲ್ಲಿ ಕಾಣುವುದಿಲ್ಲ. ಬದಲಿಗೆ ಹೇಗಾದರೂ ಪೊಲೀಸರ ಕೈಗೆ ಸಿಕ್ಕಿ ಹಾಕಿಕೊಳ್ಳದೆ ಇದ್ದರೆ ಸಾಕು ಎನ್ನುವ ಆ ಕ್ಷಣದ ಭಾವನೆ ಅವರಿಂದ ಇನ್ನೊಂದು ತಪ್ಪು ಮಾಡಿಸುತ್ತದೆ.

ಯಾವ ಅಪರಾಧಿ ಭಾವವೂ ಇಲ್ಲದೆ ವಿರುದ್ಧ ದಿಕ್ಕಿನಲ್ಲಿ ವಾಹನವನ್ನು ಚಲಾಯಿಸುತ್ತಾರೆ. ಪೊಲೀಸರು ಕೂಡ ಕಡಿಮೆಯಿಲ್ಲ, ನಡು ರಸ್ತೆಗೆ ಬಂದು ಸವಾರರನ್ನು ಹಿಡಿಯುತ್ತಾರೆ. ರಸ್ತೆಯ ಅರ್ಧ ಭಾಗವನ್ನು ವಾಹನಗಳು ಆಕ್ರಮಿಸಿಕೊಳ್ಳುವುದರಿಂದ ಅವರು ಟ್ರಾಫಿಕ್ ಜಾಮ್‌ಗೆ ಕೂಡ ಕಾರಣರಾಗುತ್ತಿದ್ದಾರೆ. ಅಂಗೈ ಹುಣ್ಣಿಗೆ ಕನ್ನಡಿ ಯಾಕೆ ಬೇಕು ಅಲ್ವಾ? ಆದರೆ ಅಂಗೈ ಹುಣ್ಣು ಸಮಾಜಕ್ಕೆ ಕಾಣುವುದೇ ಇಲ್ಲ.

ದೃಶ್ಯ ಮೂರು : ವಾಹನವನ್ನು ತೀರಾ ಬಲಭಾಗದಲ್ಲಿ ನಿಧಾನವಾಗಿ ಚಲಾಯಿಸುತ್ತಾ ಮೊಬೈಲಿನಲ್ಲಿ ಮಾತಾಡುವುದು, ಮೊಬೈಲ್ ಸ್ಕ್ರೋಲ್ ಮಾಡುವುದು ಅತಿ ಸಾಮಾನ್ಯ. ಸಿಂಗ್ನಲ್ ಜಂಪ್ ಮಾಡುವುದು, ಗಾಡಿಯ ಕಿಟಕಿ ಕೆಳಗಿಳಿಸಿ ಹಿಂದೆ ಮುಂದೆ ನೋಡದೆ ಉಗಿಯುವುದು ಕೂಡ ಇವತ್ತಿಗೆ ನಮ್ಮ ಸಮಾಜದಲ್ಲಿ ಸಾಮಾನ್ಯ. ರಸ್ತೆಯಲ್ಲಿ ಕಸ ಎಸೆಯುವುದು ನಮ್ಮ ಜನ್ಮಸಿದ್ಧ ಹಕ್ಕು.

ದೃಶ್ಯ ನಾಲ್ಕು: ಸೈಟು ನೋಂದಣಿ ಮಾಡಿಸಿಕೊಳ್ಳಬೇಕು. ಇವತ್ತಿಗೆ ಸ್ಟ್ಯಾಂಪ್ ಡ್ಯೂಟಿ ಶೇ.7.65 ಆಗಿ ಹೋಗಿದೆ. ಸ್ಟ್ಯಾಂಪ್ ಡ್ಯೂಟಿ ಉಳಿಸಬೇಕಲ್ಲ. ಏನು ಮಾಡುವುದು? ನೂರು ರೂಪಾಯಿ ಮೌಲ್ಯದ ಜಾಗವನ್ನು ಐವತ್ತು ರುಪಾಯಿಗೆ ನೋಂದಣಿ ಮಾಡಿಸಿಕೊಳ್ಳುವುದು. ಉಳಿದ ಐವತ್ತು ರೂಪಾಯಿ ನಗದು ರೂಪದಲ್ಲಿ ನೀಡುವುದು. ಎಷ್ಟು ಸುಲಭ ಅಲ್ವಾ? ಇವತ್ತಿಗೆ ಇದು ಅಲಿಖಿತ ನಿಯಮ. ಈ ರೀತಿ ನಾವು ಮಾಡುವುದಿಲ್ಲ, ದಯಮಾಡಿ ಪೂರ್ಣ ಮೌಲ್ಯಕ್ಕೆ ನೋಂದಣಿ ಮಾಡಿಕೊಡಿ ಎಂದರೂ ಸಾಧ್ಯವಿಲ್ಲ ಎನ್ನುವ ಮಟ್ಟಕ್ಕೆ ಮಾರು ಕಟ್ಟೆ ಬಂದು ನಿಂತಿದೆ. ಇನ್ನು ಸರಕಾರಕ್ಕೆ ನೀಡುವ ತೆರಿಗೆಯನ್ನು ತಪ್ಪಿಸಿಕೊಳ್ಳಲು, ಸಾಧ್ಯವಾದಷ್ಟೂ ಕಡಿಮೆ ನೀಡಲು ನಮ್ಮ ಸಭ್ಯ ನಾಗರಿಕರು ಮಾಡುವ ಕಸರತ್ತುಗಳನ್ನು ನಾನು ಇಲ್ಲಿ ವಿವರಿಸಲು ಹೋಗುವುದಿಲ್ಲ.

ದೃಶ್ಯ ಐದು: ಕ್ರಿಕೆಟ್ ಆಟವನ್ನು ನೋಡುತ್ತಾ, ಹೇಗೆ ಬ್ಯಾಟ್ ಮಾಡಬೇಕು, ಹೇಗೆ ಬೌಲಿಂಗ್ ಮಾಡ ಬೇಕಿತ್ತು, ಹೇಗೆ ಫೀಲ್ಡಿಂಗ್ ಮಾಡಬೇಕು, ಇತ್ಯಾದಿ ರನ್ನಿಂಗ್ ಕಾಮೆಂಟರಿ ನೀಡುತ್ತಾ ಸರ್ವಜ್ಞರಂತೆ ಮಾತಾಡುವ ಜನ ಕೊನೆ ಪಕ್ಷ ಗಲ್ಲಿ ಕ್ರಿಕೆಟ್ ನಲ್ಲಿಯಾದರೂ ಚಾಂಪಿಯನ್ ಎನ್ನಿಸಿ ಕೊಂಡಿದ್ದರೆ ಹೋಗಲಿ ಬಿಡು ಎನ್ನಬಹುದು. ಜೀವನದಲ್ಲಿ ಕೈಯಲ್ಲಿ ಬ್ಯಾಟ್ ಆಂಡ್ ಬಾಲ್ ಮುಟ್ಟದ ಜನ ಅಂತರಾಷ್ಟ್ರೀಯ ಕ್ರಿಕೆಟ್ ಆಟವನ್ನು ವಿಶ್ಲೇಷಿಸುವುದು ನೋಡಿದಾಗ ಮನಸ್ಸಿನಲ್ಲಿ ನಗು ಬರುತ್ತದೆ.

ದೃಶ್ಯ ಆರು: ಬುದ್ಧಿ ಬಂದಾಗಿನಿಂದ ಕೇಳುತ್ತಿರುವ ಮಾತು, ಇದು ಗೊತ್ತ, ಇದು ಇಂತಹವರಿಗೆ ಸೇರಿದ್ದು, ಇದು ಅವರ ಜಾಗ, ಇದರಲ್ಲಿ ಅವರ ಬಂಡವಾಳವಿದೆ. ರಾಜಕಾರಣಿ ಹೆಸರು ಕಾಲಕ್ಕೆ ತಕ್ಕಂತೆ ಬದಲಾಗಿದೆ. ಆದರೆ ಜನರ ಮನಸ್ಥಿತಿ ಮಾತ್ರ ಬದಲಾಗಿಲ್ಲ. ಇವತ್ತಿಗೂ ಇದು ಅವನದು, ಇವನದು, ಇದು ಅವರ ಜಾಯಿಂಟ್ ವೆಂಚರ್ ಇತ್ಯಾದಿ ಹೇಳುವುದು ನಿಲ್ಲಿಸುವುದಿಲ್ಲ. ಗುಂಪಿನಲ್ಲಿ ಎಲ್ಲರೂ ರಾಜಕಾರಣಿಗಳ ಬಗ್ಗೆ, ಅವರು ಅನೈತಿಕವಾಗಿ ಮಾಡಿರುವ ಆಸ್ತಿಯ ಬಗ್ಗೆ ಮಾತಾಡುತ್ತಾರೆ. ಆದರೆ ಯಾರೊಬ್ಬರೂ, ಹೌದು ಸಾಹಿತ್ಯ ಲೋಕಕ್ಕೆ ಸೇರಿದವರು ಕೂಡ, ಈತ ಭ್ರಷ್ಟ ಹೀಗಾಗಿ ನಾನು ಈತನ ಸರಕಾರ ನೀಡುವ ಪುರಸ್ಕಾರ ಸ್ವೀಕರಿಸುವುದಿಲ್ಲ, ಈತನ ಕೈಯಿಂದ ಸ್ವೀಕರಿಸುವುದಿಲ್ಲ ಎನ್ನುವ ಮಾತನ್ನು ಆಡುವುದಿಲ್ಲ. ಪರಮನೀಚ, ಪರಮ ಭ್ರಷ್ಟ ಎಂದು ಯಾವ ರಾಜಕಾರಣಿಯನ್ನು ಹಂಗಿಸಿದ್ದರೋ ಅದೇ ರಾಜಕಾರಣಿಯ ಪಕ್ಕದಲ್ಲಿ ಹೆಮ್ಮೆಯಿಂದ ನಿಂತು ಫೋಟೋ ತೆಗೆಸಿ ಕೊಳ್ಳುತ್ತಾರೆ. ಊರವರ ಮುಂದೆ ನನಗವನು ಗೊತ್ತು, ದೋಸ್ತು ಎಂದು ಹೇಳಿಕೊಂಡು ತಿರುಗುತ್ತಾರೆ.

ಮೇಲಿನ ಅಷ್ಟೂ ವಿಚಾರಗಳು ಊರು, ಸಮಯಗಳ ಅಂತರವಿಲ್ಲದೆ, ವಯಸ್ಸು ಮತ್ತು ಲಿಂಗಭೇದವಿಲ್ಲದೆ ಘಟಿಸುತ್ತಲೆ ಇರುತ್ತದೆ. ಇಷ್ಟೂ ವಿಚಾರಗಳಲ್ಲಿ ನಾವು ಭಾಗಿಯಾಗಿದ್ದಾಗ ನಮಗದು ತಪ್ಪು ಎಂದು ಕೂಡ ಅನ್ನಿಸುವುದಿಲ್ಲ. ಆದರೆ ನಾವೆಲ್ಲರೂ ಸಮಾಜಕ್ಕೆ ಬುದ್ಧಿವಾದ ಹೇಳುವ ದರ್ದಿಗೆ ಮಾತ್ರ ಬಹುಬೇಗ ಬಿದ್ದು ಬಿಡುತ್ತೇವೆ. ಸಮಾಜದ ವಿಚಾರದಲ್ಲಿ ಇದು ನಿಷಿದ್ಧವಾಗಿ ಬಿಡುತ್ತದೆ. ಅಂದರೆ ಸಮಾಜದ ಬೇರೊಬ್ಬರು ಇದನ್ನು ಮಾಡಿದ್ದಾರೆ ಎನ್ನುವ ಗಾಳಿಸುದ್ದಿಸಿಕ್ಕರೂ ಸಾಕು ಕಣ್ರೀ, ಮಾಡಿದ್ದರೋ ಇಲ್ಲವೋ ಎನ್ನುವುದನ್ನು ತಿಳಿದುಕೊಳ್ಳದೆ ಜಗತ್ತಿನ ಎಲ್ಲಾ ನೈತಿಕತೆಗೆ ಆತನನ್ನು ಕಟ್ಟಿ ಮುಳುಗಿಸಿಬಿಡುತ್ತಾರೆ.

ಇದರರ್ಥ ಎಲ್ಲರೂ ಅನೈತಿಕತೆಯ ಹಾದಿ ಹಿಡಿದಿದ್ದಾರೆ ಎಂದಲ್ಲ. ಅಥವಾ ಮೆಜಾರಿಟಿ ಮಾಡಿದರೆ ಅದು ಸರಿ ಎನ್ನುವುದೂ ಅಲ್ಲ. ನನ್ನ ಈ ಸಾಲುಗಳ ಉದ್ದೇಶ ಸ್ಪಷ್ಟ. ಜನರ ಮುಖಕ್ಕೆ ಕನ್ನಡಿ ಹಿಡಿಯುವುದು ಅಷ್ಟೇ. ನಾವೇನೂ ಮಹಾಸುಭಗರು ಎನ್ನುವ ಟೊಳ್ಳುತನವಿದೆಯಲ್ಲ ಅದಕ್ಕಿಂತ ದೊಡ್ಡ ಆತ್ಮವಂಚನೆ ಬೇರೇನೂ ಇಲ್ಲ. ನಾವು ಮಾಡಿದ ತಪ್ಪು ಸಣ್ಣದು ಎನ್ನುವ ಭಾವನೆಯೇ ತಪ್ಪು.

ಹೆಲ್ಮೆಟ್ ಹಾಕದಿರುವುದು, ತೆರಿಗೆ ವಂಚನೆ, ಐದು ರೂಪಾಯಿ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡದೆ ಹೂಡಿಕೆ ತಜ್ಞರತರಹ ಮುಖವಾಡ ಹಾಕುವುದು, ಪಟ್ಟಿ ದೊಡ್ಡದು. ರಾಜಕಾರಣಿಗಳನ್ನು ಅಥವಾ ಇನ್ನಾ ರನ್ನೋ ಕಳ್ಳರು, ಸುಳ್ಳರು, ನೈತಿಕತೆ ಇಲ್ಲದವರು ಎನ್ನುವ ಪಟ್ಟದಲ್ಲಿ ಸುಲಭವಾಗಿ ಕೂರಿಸುವ ಸಮಾಜ, ಜನ ಸ್ವಲ್ಪ ಆತ್ಮಾವಲೋಕನ ಕೂಡ ಮಾಡಿಕೊಳ್ಳಲಿ ಎನ್ನುವುದು ಈ ಬರಹದ ಉದ್ದೇಶ.

ದೊಡ್ಡ ಮಟ್ಟದಲ್ಲಿ ತೆರಿಗೆ ವಂಚನೆ ಮಾಡಿದರೆ ಮಾತ್ರ ಅವರು ಕೆಟ್ಟವರು, ದೊಡ್ಡ ಮಟ್ಟದಲ್ಲಿ ಲೂಟ ಮಾಡಿದವರು ಮಾತ್ರ ಕಳ್ಳರು ಎನ್ನುವ ನಮ್ಮ ಜನರ ಭಾವನೆ ಬದಲಾಗಬೇಕಿದೆ. ಇಲ್ಲಿ ನಾವೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ವಂಚನೆಯಲ್ಲಿ ಭಾಗಿಯಾಗಿದ್ದೇವೆ. ಆದರೆ ಎಂದಿಗೂ ನಮ್ಮ ಕಡೆಗೆ ನಾವು ಬೆಟ್ಟು ಮಾಡಿ ತೋರಿಸಿಕೊಳ್ಳುವುದಿಲ್ಲ. ಬಲಿಷ್ಠ ವ್ಯಕ್ತಿಗೆ ಸುಳ್ಳು ಹೇಳಿದರೆ ಆತನಿಗೆ ಕೋಪ ಬರುತ್ತದೆ. ಅದೇ ಸಮಾಜದಲ್ಲಿನ ಜನರಿಗೆ ನಿಜ ಹೇಳಿ ನೋಡಿ! ಅವರಿಗೆ ಕೋಪ ಬರುತ್ತದೆ. ಅವರ ಮುಖಕ್ಕೆ ಮಾತ್ರ ಕನ್ನಡಿಯನ್ನು ಹಿಡಿಯಲು ಹೋಗಬಾರದು. ನನ್ನ ಆಪ್ತ ಸ್ನೇಹಿತನೊಬ್ಬನಿದ್ದಾನೆ. ಆದರೆ ಆತನ ಒಂದು ಗುಣವನ್ನು ನಾನು ಕಂಡರೂ ಕಾಣದಂತೆ ಇರುವುದರಿಂದ ನಮ್ಮ ಸ್ನೇಹ ಉಳಿದುಕೊಂಡಿದೆ.

ನಾನು ಏನೇ ಕೊಂಡುಕೊಂಡರೂ ಎಷ್ಟು ಕೊಟ್ಟೆ ಎಂದ ಕೇಳುತ್ತಾನೆ. ಇಷ್ಟು ಎಂದ ತಕ್ಷಣ, ನೀನು ಜಾಸ್ತಿ ಕೊಟ್ಟಿದ್ದೀಯ, ಮಾರುಕಟ್ಟೆಯಲ್ಲಿ ಇದಕ್ಕೆ ಇಷ್ಟು ಬೆಲೆಯಿಲ್ಲ ಎಂದು, ತಾನು ಅದೇ ತರಹದ ವಸ್ತುವಿಗೆ ಎಷ್ಟು ಕಡಿಮೆ ಕೊಟ್ಟೆ ಎಂದು ಹೇಳಿಕೊಂಡು ಸಮಾಧಾನ ಪಡುವುದು ಆ ಗುಣ. ಅವನು ಮಾಡಿದ್ದೇ ಬೆಸ್ಟ್!

ಆತನ ಸುತ್ತಮುತ್ತ ಇರುವವರು ಟೋಪಿ ಹಾಕಿಸ್ಕೊಂಡಿದ್ದಾರೆ ಎನ್ನುವುದು ಅವನ ಭಾವನೆ. ನಾವು ಮಾಡಿದ ತಪ್ಪು ಸಣ್ಣದು, ಬೇರೆಯವರು ಮಾಡಿದ್ದು ದೊಡ್ಡದು. ಅವರು ಮಾಡಬಾರದು, ಅದು ಅಪರಾಧ! ನಾನು ಮಾಡಿದರೆ ಅದು ಓಕೆ, ಚಲ್ತಾ ಹೈ!

ಒಟ್ಟಾರೆ ಸಮಾಜದ ಜನರನ್ನು ಮೆಚ್ಚಿಸಲು ಜನಾರ್ದನನಿಂದಲೇ ಸಾಧ್ಯವಾಗಲಿಲ್ಲ ಎಂದ ಮೇಲೆ ಸಾಮಾನ್ಯ ಮನುಷ್ಯರ ಕೈಲಿ ಹೇಗೆ ಸಾಧ್ಯ? ಇದನ್ನು ಕಂಡು ನಮ್ಮ ಕೆ ಎಸ್ ನರಸಿಂಹಸ್ವಾಮಿಯವರು ಒಂದೊಳ್ಳೆ ಕವನ ಬರೆದಿದ್ದಾರೆ. ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ! ಎನ್ನುತ್ತಾರೆ.

ಚಳಿಗಾಲ ಬಂದಾಗ ಎಷ್ಟು ಚಳಿ? ಎಂದರು
ಬಂತಲ್ಲ ಬೇಸಿಗೆ, ಕೆಟ್ಟಬಿಸಿಲ ಎಂದರು
ಮಳೆ ಬಿತ್ತೊ, ಬಿಡದಲ್ಲ ಶನಿ! ಎಂಬ ಟೀಕೆ
ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ!
ಚಿಗುರ ಚೆನ್ನದ ನಡುವೆ ಹೂವ ಬಯಸುವರು
ಹೂಗಳ ಕಾಲದಲ್ಲಿ ಹಣ್ಣ ಹೊಗಳುವರು;
ಹಣ್ಣಿನ ಗಾತ್ರ ಪೀಚು ಎಂದಿವರ ಟೀಕೆ
ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ!
ನಿಂತವರ ಕೇಳುವರು: ನೀನೇಕೆ ನಿಂತೆ?
ಮಲಗಿದರೆ ಗೊಣಗುವರು: ನಿನಗಿಲ್ಲ ಚಿಂತೆ!
ಓಡಿದರೆ ಬೆನ್ನ ಹಿಂದೆಯೆ ಇವರ ಟೀಕೆ
ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ!
ಓದಿದರೆ ಹೇಳುವರು: ಮತ್ತೊಮ್ಮೆ ಬರಿಯೊ!
ಬರೆದಿಡಲು ಬೆದಕುವರು: ಬರವಣಿಗೆ ಸರಿಯೊ?
ಇವರ ಬಯಕೆಗಳೇನೊ! ಇವರದೇ ಟೀಕೆ
ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ!

ನಾನು ಭಾರತಕ್ಕೆ ವಾಪಸ್ಸು ಮರಳಿ ಬಂದ ಪ್ರಥಮ ದಿನಗಳಲ್ಲಿ ನನಗೆ ಭಾರತದ ರಸ್ತೆಗಳಲ್ಲಿರುವ ಕಸ, ಹಾರನ್, ಇಲ್ಲಿನ ಜನಜಂಗುಳಿ ಬಿಟ್ಟು ಬೇರೇನೂ ಕಾಣುತ್ತಿರಲಿಲ್ಲ.

ಇಲ್ಲಿ ಬದುಕುವುದು ಹೇಗೆ? ಸಮಾಜ ಗಬ್ಬೆದ್ದು ಹೋಗಿದೆ ಎನ್ನುವ ಮನಸ್ಥಿತಿಯಲ್ಲಿದ್ದೆ. ನಂಬಿಕೆ ಬದುಕಿಗೆ ಬಹಳ ಮುಖ್ಯ. ದೃಷ್ಟಿಯಂತೆ ಸೃಷ್ಟಿ ಎನ್ನುವುದು ಅರಿವಾಗುತ್ತಾ ಹೋಯ್ತು. ಇಲ್ಲಿನ ಬದುಕು ಕೂಡ ದಶಕ ಮುಗಿಸಿದೆ. ಒಂದು ಸಣ್ಣ ಕಥೆಯೊಂದಿಗೆ ಇವತ್ತಿನ ಬರಹಕ್ಕೆ ವಿರಾಮ ಹಾಡುವೆ.

ಹತ್ತಾರು ಇಲಿಗಳನ್ನು ವಿಜ್ಞಾನಿಗಳು ನೀರಿನಲ್ಲಿ ಹಾಕುತ್ತಾರೆ. ಅವುಗಳು ಇಪ್ಪತ್ತು ನಿಮಿಷದಲ್ಲಿ ಈಜಲಾಗದೆ ಮುಳುಗಿ ಸಾಯುತ್ತವೆ. ಮತ್ತೊಮ್ಮೆ ಹತ್ತಾರು ಇಲಿಗಳನ್ನು ನೀರಿಗೆ ಹಾಕುತ್ತಾರೆ. ಈ ಬಾರಿ ಕೂಡ ಅವುಗಳು ಇಪ್ಪತ್ತು ನಿಮಿಷದಲ್ಲಿ ಸಾಯುವ ಹಂತಕ್ಕೆ ಹೋಗುತ್ತವೆ, ಆದರೆ ಮುಳುಗುವ ಮುನ್ನ ರಕ್ಷಣೆ ಮಾಡುತ್ತಾರೆ.

ಒಂದೆರಡು ದಿನ ಅವುಗಳನ್ನು ಕಾಪಾಡಿ ಮತ್ತೆ ನೀರಿಗೆ ಹಾಕುತ್ತಾರೆ. ಈ ಬಾರಿ ವಿಜ್ಞಾನಿಗಳಿಗೆ ಆಶ್ಚರ್ಯ ಕಾದಿತ್ತು. ಇಪ್ಪತ್ತು ನಿಮಿಷವಾದರೂ ಅವು ಮುಳುಗಲಿಲ್ಲ, ಬರೋಬ್ಬರಿ ಇಪ್ಪತ್ತು ಗಂಟೆ ಅವು ಸಾಯದೆ, ಮುಳುಗದೆ ಈಜಾಡುತ್ತಲೆ ಇದ್ದವಂತೆ! ಇದಕ್ಕೇನು ಕಾರಣ ಎಂದು ವಿಜ್ಞಾನಿಗಳು ಗಮನಿಸಿದಾಗ ನಂಬಿಕೆ ಎನ್ನುವುದು ಗೊತ್ತಾಯಿತಂತೆ! ಯಾರೋ ಬರುತ್ತಾರೆ ರಕ್ಷಣೆ ಮಾಡುತ್ತಾರೆ ಎನ್ನುವ ನಂಬಿಕೆ, ಅನುಭವ ಅವುಗಳನ್ನು ಇಪ್ಪತ್ತು ಗಂಟೆ ಈಜು ಹೊಡೆಸಿತ್ತು!

ಇಲಿ ಇಪ್ಪತ್ತು ಗಂಟೆ ನಂಬಿಕೆಯಲ್ಲಿ ಬದುಕಬಲ್ಲದು ಎಂದರೆ ನಾವು ಮನುಷ್ಯರು, ಒಂದೊಳ್ಳೆ ಸಮಾಜದ ನಿರ್ಮಾಣ ನಮ್ಮೆಲ್ಲರ ಹೊಣೆ. ಇವತ್ತಲ್ಲ ನಾಳೆ ಒಳ್ಳೆಯದಾಗುತ್ತದೆ ಎನ್ನುವ ನಂಬಿಕೆ ನನ್ನದು. ಆದರೆ ನೈತಿಕತೆ ಎನ್ನುವುದು ಒನ್ ವೇ ಟ್ರಾಫಿಕ್ ಆಗಬಾರದು ಅಷ್ಟೆ.

**- ರಂಗಸ್ವಾಮಿ** ಎಂ

## ಮಯೂರ ಹಾಸ್ಯ

### ಅಜ್ಜಿಗೆ ಪಾನಿಪುರಿ ಆಗಿದೆ!

ಐದು ವರ್ಷದ ಮೊಮ್ಮಗಳನ್ನು ಮನೆ ಹತ್ತಿರದ ಪಾರ್ಕಿಗೆ ಕರೆದುಕೊಂಡು ಹೋಗಿದ್ದೆ. ಇದ್ದಕ್ಕಿದ್ದಂತೆ ಭಾರೀ ಮೋಡಗಳೊಂದಿಗೆ ಕತ್ತಲಾವರಿಸಿ ಮಳೆ ಸಹ ಬರಲಾರಂಭಿಸಿತು. ಅಲ್ಲಿಯೇ ಪಾರ್ಕಿನಲ್ಲಿ ಶೀಟ್ ಹಾಕಿದ್ದ ಎತ್ತರದ ವೇದಿಕೆ ಮೇಲೆ ಹೋಗಿ ನಿಂತಾಗ...


ನಾಲ್ಕೈದು ಮಹಿಳೆಯರಿದ್ದ ಗುಂಪಿನಲ್ಲಿದ್ದ ಅಜ್ಜಿ, ನನ್ನೊಂದಿಗೆ ನಿಂತಿದ್ದ ಮೊಮ್ಮಗಳನ್ನು ತನ್ನೆಡೆಗೆ ಕರೆದುಕೊಂಡರು. ಆಕೆಯನ್ನು ಕುಳ್ಳಿರಿಸಿ ಮಾತನಾಡುತ್ತಾ ಸಲುಗೆಯಿಂದ ಮೊಮ್ಮಗಳ ಕೈಯಲ್ಲಿದ್ದ ಮೊಬೈಲಿನಲ್ಲಿ ಫೋಟೊ ನೋಡ್ತಾ ಇವು ಯಾರು? ಇವು ಯಾರು? ಎಂದು ಕೇಳಿದರು. ಇವರು ಅಜ್ಜ... ಅಪ್ಪಾ... ಎಂದೆಲ್ಲಾ ಹೇಳ್ತಾ ಇದ್ದಂತೆ, ಅವಳ ಅಜ್ಜಿಯ ಪಾದಕ್ಕೆ ಗಾಯ ಆಗಿರುವ ಫೋಟೊ ಬಂದೊಡನೆ.. ಅಜ್ಜಿಗೆ ಪಾನಿಪೂರಿ ಆಗ್ಯೆತೆ ಎಂದಳು. ಈ ವಿಷಯ ಪ್ರಶ್ನೆ ಕೇಳಿದ ಅಜ್ಜಿಗೆ ಅರ್ಥ ಆಗಲಿಲ್ಲ. ಆಗ ನಾನು ಇವಳ ಅಜ್ಜಿಯ ಕಾಲಿನ ಮೇಲೆ ಬಿಸಿ ಬಿಸಿ ನೀರು ಬಿದ್ದಿದ್ದರಿಂದ ಚರ್ಮದ ಮೇಲೆ ನೀರು ತುಂಬಿದ ಗುಳ್ಳೆಗಳು ಊದಿಕೊಂಡಿದ್ದವು. ಅವು ನೋಡಲು ಪಾನಿಪೂರಿಯಂತೆ ಕಂಡಿದ್ದರಿಂದ ಈ ಮೊಮ್ಮಗಳು ಅಜ್ಜಿ ಕಾಲು ಪಾನಿಪೂರಿ ಅಂತ ಕರೆಯುತ್ತಾಳೆ ಎಂದು ಹೇಳಿದಾಗ ಎಲ್ಲರೂ ನಕ್ಕಿದ್ದೇ ನಕ್ಕಿದ್ದು.

**- ರಘುನಾಥರಾವ್** ತಾಪ್ಸೆ

★★★★★★★★★★★★★★★★★★★

### ನಾನು ಸೇದಿದರೆ?

ಗೂರಲು ಕೆಮ್ಮಿನಿಂದ ವಿಪರೀತವಾಗಿ ಬಳಲುತ್ತಿದ್ದ ಗುಂಡ ತಡೆಯಲಾರದೆ ಕೊನೆಗೆ ತನ್ನ ಪರಿಚಿತ ವೈದ್ಯರಲ್ಲಿಗೆ ಓಡಿದ. ಕೂಲಂಕಷವಾಗಿ ಅವನನ್ನು ಪರೀಕ್ಷಿಸಿದ ವೈದ್ಯರು ಒಂದೆರಡು ಮಾತ್ರೆ ಮತ್ತು ಸಿರಪ್ಪನ್ನು ಬರೆದು ಕೊಡುತ್ತ ಅಂದ ಹಾಗೆ ನಿಮಗೆ ಸಿಗರೇಟು ಸೇದುವ ಚಟವಿದೆಯೇ? ದಿನಕ್ಕೆ ಎಷ್ಟು ಸೇದುತ್ತೀರಾ? ಎಂದು ಕೇಳಿದರು.



ಗುಂಡ ಹೌದು ಡಾಕ್ಟ್ರೇ ದಿನಕ್ಕೆ ಒಂದು ಪ್ಯಾಕ್ ಸೇದುತ್ತೇನೆ ಎಂದ. ಅವರು ಅದನ್ನು ಆದಷ್ಟು ಕಡಿಮೆ ಮಾಡಲು ಹೇಳಿದಾಗ ಗುಂಡ ಡಾಕ್ಟ್ರೇ, ಸಿಗರೇಟು ಸೇದುವುದರಿಂದ ಕ್ಯಾನ್ಸರ್ ಬರುತ್ತದಂತೆ ಹೌದಾ? ಎಂದು ಪ್ರಶ್ನಿಸಿದ. ಅವರು ಹೌದು. ಅದು ತುಂಬಾ ಅಪಾಯಕಾರಿ ಎಂದರು.

ಅದಕ್ಕೆ ಗುಂಡ ಮತ್ತೆ ನಾನು ಸೇದಿದರೆ ಹೊಗೆ ಬರುತ್ತದಲ್ಲಾ ಯಾಕೆ? ಎಂದು ಕೇಳಿದ. ವೈದ್ಯರು ಕಕ್ಕಾಬಿಕ್ಕಿಯಾಗಿದ್ದರು.

**- ಮಂಜುನಾಥ** ಎಂ.ಕೆ.

★★★★★★★★★★★★★★★★★★★

### ನವ್ಯ ಚಿತ್ರ

ಕೇಶವ ಸ್ನೇಹಿತ ನಾಣಿಗೆ ನವ್ಯ ಚಿತ್ರಕಲಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಬಂದಿದ್ದಕ್ಕೆ ಅಭಿನಂದನೆ ಹೇಳುತ್ತಾ, ಅಲ್ಲ ನಾಣಿ ನಿನಗೆ ಪ್ರಥಮ ಬಹುಮಾನ ಬಂದಿರುವುದೇನೋ ಸರಿ. ಆದರೆ ಆ ಚಿತ್ರ ಮಾತ್ರ ನನಗೇನೂ ಸ್ವಲ್ಪವೂ ಅರ್ಥವಾಗಲಿಲ್ಲ. ಆ ಚಿತ್ರದ ನಿಗೂಢತೆಯಾದರೂ ಏನು? ಎಂದ.

ಅದಕ್ಕೆ ನಾಣಿ ಆ ಚಿತ್ರ ನನಗೆ ಅರ್ಥವಾಗಿದ್ದರೆ ತಾನೇ ನಿನಗೆ ಹೇಳೋದು. ಅದನ್ನೇನೂ ನಾನು ಬರೆದಿರಲಿಲ್ಲ. ನನ್ನ ಪುಟ್ಟ ಮಗಳು ನಾನು ಇಟ್ಟಿದ್ದ ಬಿಳಿ ಹಾಳೆಯ ಮೇಲೆ ಇಂಕು ಚೆಲ್ಲಿ ಬಿಟ್ಟಿದ್ದಳು. ನಾನು ಮರೆತು, ಬರೆದಿದ್ದ ಚಿತ್ರದೊಂದಿಗೆ ಅದನ್ನು ಕಳಿಸಿಬಿಟ್ಟಿದ್ದೆ ಅಷ್ಟೇ ಎಂದಾಗ ಕೇಶವನಿಗೆ ಸುಸ್ತೋ ಸುಸ್ತು!

**- ಶಂಕರೇಗೌಡ** ತುಂಬಕೆರೆ

## ಬಾಯಿ ಹುಣ್ಣಿಗೆ ಮುಖ್ಯ ಕಾರಣಗಳು:

- ದೇಹದ ಉಷ್ಣತೆ ಹೆಚ್ಚಾಗುವುದು
- ವಿಟಮಿನ್ ಕೊರತೆ
- ಮಲಬದ್ಧತೆ
- ಅತಿಯಾದ ಖಾರದ ಆಹಾರ
- ಸೋಂಕು

# ಬಾಯಿ ಹುಣ್ಣುಗಳಿಗೆ ಸುಲಭ ಮನೆಮದ್ದುಗಳು

ಬಾಯಿ ಹುಣ್ಣು (ಮೌತ್ ಅಲ್ಸರ್) ಸಣ್ಣ ವಿಷಯವೆಂದು ತೋರುತ್ತದೆ. ಆದರೆ, ಊಟ ಮಾಡುವಾಗ ಮಾತ್ರ ತುಂಬಾ ತೀವ್ರವಾದ ನೋವು, ಉರಿಯನ್ನು ಉಂಟು ಮಾಡುತ್ತದೆ. ಹಲವರನ್ನು ತುಂಬಾ ಕಾಡುವ ಈ ಸಮಸ್ಯೆಗೆ ತಕ್ಷಣ ವೈದ್ಯರ ಬಳಿ ಹೋಗುವ ಅಗತ್ಯವಿಲ್ಲ. ಅಡುಗೆ ಮನೆಯಲ್ಲೇ ದೊರೆಯುವ ಸರಳ ವಸ್ತುಗಳಿಂದಲೇ ನೋವು ಶಮನಗೊಳಿಸಿ, ಬೇಗ ಗುಣಪಡಿಸಿಕೊಳ್ಳಬಹುದು.

ಈ ಹುಣ್ಣುಗಳು ಬಾಯಿಯ ಒಳಭಾಗದಲ್ಲಿ ಬಿಳಿ ಅಥವಾ ಕೆಂಪು ಗುಳ್ಳೆಗಳಂತೆ ಕಾಣಿಸಿಕೊಂಡು ಉರಿ ಮತ್ತು ನೋವುಂಟು ಮಾಡುತ್ತವೆ. ಸಾಮಾನ್ಯವಾಗಿ ಕೆಲವು ದಿನಗಳಲ್ಲಿ ತಾನಾಗೇ ಗುಣವಾಗುತ್ತವೆ. ಆದರೆ ತ್ವರಿತ ಉಪಶಮನಕ್ಕೆ ಈ ಮನೆಮದ್ದುಗಳನ್ನು ಪ್ರಯತ್ನಿಸಿ.


**1. ಜೇನುತುಪ್ಪ + ಅರಿಶಿನ ಪೇಸ್ಟ್:** ಜೇನುತುಪ್ಪದ ಗುಣಪಡಿಸುವ ಶಕ್ತಿ ಮತ್ತು ಅರಿಶಿನದ ಆಂಟಿ-ಸೆಪ್ಟಿಕ್ ಗುಣ ಎರಡೂ ಸೇರಿದರೆ ಬಾಯಿ ಹುಣ್ಣಿಗೆ ಉತ್ತಮ ಔಷಧಿ. ಒಂದು ಚಮಚ ಜೇನುತುಪ್ಪಕ್ಕೆ ಚಿಟಿಕೆ ಅರಿಶಿನ ಸೇರಿಸಿ ಪೇಸ್ಟ್ ಮಾಡಿ. ಹುಣ್ಣಿನ ಮೇಲೆ ಹಚ್ಚಿ 10-15 ನಿಮಿಷ ಇರಿಸಿ. ನಂತರ ಉಗುರು ಬೆಚ್ಚಗಿನ ನೀರಿನಿಂದ ಬಾಯಿ ಮುಕ್ಕಳಿಸಿ. ದಿನಕ್ಕೆ 2-3 ಬಾರಿ ಮಾಡಿ.

**2. ತೆಂಗಿನ ಎಣ್ಣೆ:** ತೆಂಗಿನ ಎಣ್ಣೆಯಲ್ಲಿ ಆಂಟಿ-ಮೈಕ್ರೋಬಿಯಲ್ ಗುಣಗಳಿವೆ. ಇದು ಉರಿ, ನೋವು ಎರಡನ್ನೂ ಶೀಘ್ರವಾಗಿ ತಗ್ಗಿಸುತ್ತದೆ. ಶುದ್ಧ ತೆಂಗಿನ ಎಣ್ಣೆಯನ್ನು ನೇರವಾಗಿ ಹುಣ್ಣಿನ ಮೇಲೆ ಹಚ್ಚಿ 10 ನಿಮಿಷ ಬಿಡಿ. ನಂತರ ಬಾಯಿ ತೊಳೆಯಿರಿ.

**3. ಅಲೋವೆರಾ (ಲೋಳೆಸರ) ಜೆಲ್:** ಅಲೋವೆರಾ ಜೆಲ್ ತಕ್ಷಣವೇ ತಂಪು ನೀಡುವ ಮ್ಯಾಜಿಕ್! ಹುಣ್ಣಿನ ಮೇಲೆ ಜೆಲ್ ಹಚ್ಚಿ 10 ನಿಮಿಷ ಇರಿಸಿ. ನಂತರ ನೀರಿನಿಂದ ತೊಳೆಯಿರಿ. ಊತ ಮತ್ತು ನೋವು ಎರಡೂ ಕಡಿಮೆಯಾಗುತ್ತವೆ.

**4. ಕಾಚು (ಕತ್ತಾ) + ಎಲೆಗಳು:** ಪಾರಂಪರಿಕ ವೈದ್ಯರು ಬಹಳ ಹೊಗಳುವ ಉಪಾಯ. ಪೇರಳೆ ಎಲೆ ಅಥವಾ ವೀಳ್ಯ ದೆಲೆಯ ಚಿಗು ರಿಗೆ ಸ್ವಲ್ಪ ಕಾಚು ಹಾಕಿ ಮೆಲ್ಲಗೆ ಅಗಿಯಿರಿ. ಲಾಲಾರಸದೊಂದಿಗೆ ಬೆರೆತು ಹುಣ್ಣಿಗೆ ಸಮಾಧಾನ ನೀಡುತ್ತದೆ.

**5. ಉಪ್ಪು ನೀರು ಮುಕ್ಕಳಿಕೆ (ಅತ್ಯಂತ ಸುಲಭ ಮತ್ತು ಪರಿಣಾಮಕಾರಿ) :** ಒಂದು ಕಪ್ ಉಗುರು ಬೆಚ್ಚಗಿನ ನೀರಿಗೆ ಒಂದು ಚಮಚ ಉಪ್ಪು ಸೇರಿಸಿ. ಈ ನೀರಿನಿಂದ ಒಂದು ನಿಮಿಷ ಬಾಯಿ ಮುಕ್ಕಳಿಸಿ. ಬ್ಯಾಕ್ಟೀರಿಯಾ ಕಡಿಮೆಯಾಗಿ, ನೋವು ಮತ್ತು ಊತ ಎರಡೂ ಶಮನವಾಗುತ್ತವೆ. ದಿನಕ್ಕೆ ಹಲವು ಬಾರಿ ಮಾಡಬಹುದು.



**ಸಲಹೆ:** ಹುಣ್ಣುಗಳು ಹೆಚ್ಚಾಗುತ್ತಿದ್ದರೆ ಅಥವಾ ಗುಣವಾಗದಿದ್ದರೆ ವೈದ್ಯರನ್ನು ಸಂಪರ್ಕಿಸುವುದು ಉತ್ತಮ. ಆರೋಗ್ಯಕರ ಆಹಾರ, ಸಾಕಷ್ಟು ನೀರು ಸೇವನೆ ಮತ್ತು ಒತ್ತಡ ಕಡಿಮೆ ಮಾಡುವುದರಿಂದಲೂ ಈ ಸಮಸ್ಯೆ ಕಡಿಮೆ ಯಾಗುತ್ತದೆ. ಈ ಮನೆಮದ್ದುಗಳನ್ನು ಪ್ರಯತ್ನಿಸಿ ನಿಮ್ಮ ಅನುಭವವನ್ನು ಹಂಚಿಕೊಳ್ಳಿ!




**ಈ ಮುನ್ನೆಚ್ಚರಿಕೆ ನೆನಪಿರಲಿ:** ಹೆಚ್ಚು ಖಾರ, ಉಪ್ಪು, ಹುಳಿ ಆಹಾರವನ್ನು ತಾತ್ಕಾಲಿಕವಾಗಿ ತಪ್ಪಿಸಿ, ದಿನಕ್ಕೆ ಕನಿಷ್ಠ 8-10 ಲೋಟ ನೀರು ಕುಡಿಯಿರಿ. ಹಸಿರು ತರಕಾರಿ ಮತ್ತು ಹಣ್ಣುಗಳನ್ನು ಸೇವಿಸಿ ಎರಡು ವಾರಗಳಿಗೂ ಹೆಚ್ಚು ಕಾಲ ಹುಣ್ಣು ಗುಣವಾಗದಿದ್ದರೆ ಅಥವಾ ಪದೇಪದೇ ಕಾಣಿಸಿಕೊಂಡರೆ ವೈದ್ಯರ ಸಲಹೆ ಪಡೆಯುವುದು ಸೂಕ್ತ ಬಾಯಿ ಹುಣ್ಣು ಸಾಮಾನ್ಯ ಸಮಸ್ಯೆಯಾದರೂ ನೋವು ತೀವ್ರವಾಗಿರುತ್ತದೆ. ಮನೆಯಲ್ಲೇ ದೊರೆಯುವ ಸರಳ ಪದಾರ್ಥಗಳಿಂದ ತ್ವರಿತ ಉಪಶಮನ ಪಡೆಯಬಹುದು. ಸರಿಯಾದ ಆರೈಕೆ ಮತ್ತು ಆಹಾರ ಪದ್ಧತಿಯಿಂದ ಈ ಸಮಸ್ಯೆಯನ್ನು ನಿಯಂತ್ರಿಸಬಹುದು ಎಂದು ಆರೋಗ್ಯ ತಜ್ಞರು ತಿಳಿಸಿದ್ದಾರೆ.

**- ಕೆ.ಪಿ.ಅಶ್ವಿನ್** ರಾವ್

CMYK CMYK CMYK CMYK

## ಇಂದು ವಿದ್ಯುತ್ ವ್ಯತ್ಯಯ

**ಹಾಸನ:** ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ 66/11 ಕೆ.ವಿ. ಸೋಮನಹಳ್ಳಿ ವಿ.ವಿ. ಕೇಂದ್ರ ಮತ್ತು 66/11 ಕೆ.ವಿ. ಮಾರ್ಗಗಳಲ್ಲಿ ತ್ರೈಮಾಸಿಕ ನಿರ್ವಹಣಾ ಕೆಲಸವನ್ನು ಹಮ್ಮಿಕೊಂಡಿರುವುದರಿಂದ ಜೂ. 10 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ವಿತರಣಾ ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ಸೋಮನ ಹಳ್ಳಿ, ಚಿಕ್ಕಮೇನಹಳ್ಳಿ, ಹಿರೇಕಡ ಲೂರು ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ವಾಗುವುದರಿಂದ ಸಾರ್ವಜನಿಕರು ಸಹಕರಿಸುವಂತೆ ಕಾರ್ಯ ನಿರ್ವಾಹಕ ಇಂಜಿನಿಯರ್ ಅವರು ತಿಳಿಸಿದ್ದಾರೆ.

### ಯಸಳೂರು, ಹೆತ್ತೂರು

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ 66/11 ಕೆವಿ ಯಸಳೂರು ಮತ್ತು ಹೆತ್ತೂರು ವಿವಿ ಕೇಂದ್ರ ಮತ್ತು 66/11 ಕೆವಿ ಮಾರ್ಗ ಗಳಲ್ಲಿ ತ್ರೈಮಾಸಿಕ ನಿರ್ವಹಣಾ ಕೆಲಸವನ್ನು ಹಮ್ಮಿಕೊಂಡಿರುವುದ ರಿಂದ ಜೂ. 10 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ವಿತರಣಾ ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ಯಸ ಳೂರು, ಹೊಸೂರು, ಕುಂಬ್ರಳ್ಳಿ, ದೊಡ್ಡ ಕಲ್ಲೂರು, ಕೊಡ್ಲಿಪೇಟೆ, ಕೆರೋಡಿ, ಉಚ್ಚಂಗಿ ಹೊಂಗಡಹಳ್ಳ, ಬಿಸಿಲೆ ಘಾಟ್, ಕೂಡುರಸ್ತೆ, ಹೆತ್ತೂರು, ಬಾಚಿಹಳ್ಳಿ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುವುದರಿಂದ ಸಾರ್ವಜನಿಕರು ಸಹಕರಿಸುವಂತೆ ಕಾರ್ಯ ನಿರ್ವಾಹಕ ಇಂಜಿನಿಯರ್ ಅವರು ತಿಳಿಸಿದ್ದಾರೆ.

### ಗಂಗೂರು ಕೇಂದ್ರ,

ಹೊಳೆನರಸೀಪುರ ನೋಡಲ್ ಕೇಂದ್ರ ವ್ಯಾಪ್ತಿಯ 66/11 ಕೆ.ವಿ. ವಿ.ವಿ ಗಂಗೂರು (ಕಳ್ಳಿಕೊಪ್ಪಲು) ಕೇಂದ್ರ, ಮಾರ್ಗಗಳಲ್ಲಿ ತ್ರೈಮಾಸಿಕ ನಿರ್ವಹಣಾ ಕೆಲಸವನ್ನು ಹಮ್ಮಿಕೊಂಡಿರುವುದರಿಂದ ಜೂ. 10 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ವಿತರಣಾ ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ಗಂಗೂರು, ಅಂಕನಹಳ್ಳಿ, ಸೆರ್ವೆಗಾರನಕೊಪ್ಪಲು, ಕಳ್ಳಿಕೊಪ್ಪಲು, ಸಂಕನಹಳ್ಳಿ, ಶಿವಪುರ, ಕಟ್ಟಹಳ್ಳಿ, ಅಪ್ಪಗೌಡನಹಳ್ಳಿ, ಚಿಕ್ಕಬ್ಯಾಗತವಳ್ಳಿ, ಪಾಳ್ಯ, ಮಾರಗೌಡನಹಳ್ಳಿ, ಶ್ರೀ ರಾಮ ದೇವರಕಟ್ಟೆ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುವುದರಿಂದ ಸಾರ್ವಜನಿಕರು ಸಹಕರಿಸುವಂತೆ ಕಾರ್ಯ ನಿರ್ವಾಹಕ ಇಂಜಿನಿಯರ್ ಅವರು ತಿಳಿಸಿದ್ದಾರೆ.

## ಯುವನಿಧಿ ಯೋಜನೆಯ ಸ್ವಯಂ-ಘೋಷಣೆ

**ಹಾಸನ:** ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಯುವನಿಧಿ ಯೋಜನೆಯಲ್ಲಿ ನೋಂದಣೆಯಾದ ಅಭ್ಯರ್ಥಿಗಳು ಕಡ್ಡಾಯವಾಗಿ ಆಧಾರ ಸೀಡೆಡ್ ಬ್ಯಾಂಕ್ ಖಾತೆ ಹೊಂದಿರಬೇಕು. ವೆಬ್ ಸೈಟ್ ||t:// bqg.mbwqb|bmb..q ನಲ್ಲಿ ತಮ್ಮ ಅರ್ಜಿಯು ಯಾವ ಹಂತದಲ್ಲಿದೆ ಎಂಬುದನ್ನು ಪರಿಶೀಲಿಸಿಕೊಂಡು ಹಾಗೂ ಪರಿಶೀಲನೆಗೆ ಬಾಕಿ ಉಳಿದಿರುವ ಅಭ್ಯರ್ಥಿಗಳು ಮಾತ್ರ ಸೂಚಿಸಲ್ಪಟ್ಟ ಇಲಾಖೆಯ ಕಚೇರಿಗಳಿಗೆ ತಮ್ಮ ಎಲ್ಲ ಮೂಲ ಅಂಕಪಟ್ಟಿ ಹಾಗೂ ಇತರೆ ಪ್ರಮಾಣ ಪತ್ರಗಳೊಂದಿಗೆ ಖುದ್ದಾಗಿ ಭೇಟಿ ನೀಡಿ ಪರಿಶೀಲಿಸಿ ಶೀಘ್ರವಾಗಿ ದೃಢೀಕರಿಸಿಕೊಳ್ಳವಂತೆ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಉದ್ಯೋಗಾಧಿಕಾರಿ ತಿಳಿಸಿದ್ದಾರೆ.

ಈಗಾಗಲೇ ನೋಂದಾಯಿಸಿಕೊಂಡು ಹಣ ಪಡೆಯುತ್ತಿರುವ ಫಲಾನುಭವಿಗಳು ಪ್ರತಿ ತಿಂಗಳು 25ನೇ ದಿನಾಂಕದೊಳಗೆ ಸ್ವಯಂ-ಘೋಷಣೆಯನ್ನು ಮಾಡಿಕೊಳ್ಳಬೇಕಾಗಿದೆ ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂರವಾಣಿ ಸಂಖ್ಯೆ:08172- 296374, ನ್ನು ಸಂಪರ್ಕಿಸಬಹುದಾಗಿದೆ.

## ಅತಿಥಿ ಶಿಕ್ಷಕರು, ಉಪನ್ಯಾಸಕರ ಹುದ್ದೆಗೆ ಅರ್ಜಿ ಆಹ್ವಾನ

ಹಾಸನ: ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿನ ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ವಸತಿ ಶಾಲೆ-ಕಾಲೇಜುಗಳಲ್ಲಿ ಖಾಲಿ ಇರುವ ಅತಿಥಿ ಶಿಕ್ಷಕರು, ಅತಿಥಿ ಉಪನ್ಯಾಸಕರ ಹುದ್ದೆಗಳಿಗೆ 2026-27 ನೇ ಶೈಕ್ಷಣಿಕ ಸಾಲಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ.

ಜೂ 10 ರಂದು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿರುತ್ತದೆ, ನಿಗದಿತ ಅರ್ಜಿ ನಮೂನೆಗಳು ಜಿಲ್ಲೆಯ ಎಲ್ಲಾ ವಸತಿ ಶಾಲೆಗಳಲ್ಲಿ ಲಭ್ಯವಿದ್ದು, ಭರ್ತಿ ಮಾಡಿದ ಅರ್ಜಿಗಳನ್ನು ಅವ್ಯಶಕಾ ದಾಖಲಾತಿಗಳೊಂದಿಗೆ ಹತ್ತಿರದ ವಸತಿ ಶಾಲೆಗಳಲ್ಲಿ ಸಲ್ಲಿಸಬಹುದಾಗಿದೆ.

**ಅತಿಥಿ ಉಪನ್ಯಾಸಕರು ಹುದ್ದೆಗೆ ಅರ್ಹತೆಗಳು:** ಸಂಬಂಧಪಟ್ಟ ವಿಷಯದಲ್ಲಿ ಸ್ನಾತಕೋತ್ತರ ಪದವಿ, ಬಿ.ಇಡಿ ಶಿಕ್ಷಣ ಪಡೆದಿರಬೇಕು.

**ಅತಿಥಿ ಶಿಕ್ಷಕರ ಹುದ್ದೆಗೆ ಅರ್ಹತೆಗಳು:** ಖಾಲಿ ಇರುವ ಅತಿಥಿ ಶಿಕ್ಷಕರ ಹುದ್ದೆಗಳಿಗೆ ಸಂಬಂಧಿಸಿದ ವಿಷಯದಲ್ಲಿ ಪದವಿ, ಕಡ್ಡಾಯವಾಗಿ ಬಿ.ಇಡಿ. ಶಿಕ್ಷಣ ಪಡೆದಿರಬೇಕು ಹಾಗೂ ಟಿ.ಇ.ಟಿ. ಉತ್ತೀರ್ಣರಾಗಿರಬೇಕು ಹೆಚ್ಚಿನ ಮಾಹಿತಿಗೆ ಹತ್ತಿರದ ವಸತಿ ಶಾಲೆಯನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

# ಕಾಫಿ ಬೆಳೆಗಾರರ ಸಮಸ್ಯೆ ಬಗ್ಗೆ ಸರ್ಕಾರದ ಗಮನ ಸೆಳೆಯುವೆ

### ಜಿಲ್ಲಾ ಪ್ಲಾಂಟರ್ಸ್ ಸಂಘದ ಪ್ರಥಮ ಕಾರ್ಯಕಾರಿ ಮಂಡಳಿ ಸಭೆಯಲ್ಲಿ ಶಾಸಕ ಹೆಚ್.ಕೆ.ಸುರೇಶ್

• ಪ್ರಜೋದಯ ವರದಿ




**ಸಕಲೇಶಪುರ:** ಕಾಫಿ ಬೆಳೆಗಾರರ ಸಮಸ್ಯೆಗಳ ವಿಚಾರ ಬಂದಾಗ ಸದಾ ಅವರ ಪರವಾಗಿ ನಿಲ್ಲುವುದರ ಜೊತೆಗೆ, ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತಂದು ಪರಿಹಾರ ದೊರಕಿಸಲು ನಿರಂತರ ಪ್ರಯತ್ನ ಮಾಡುವುದಾಗಿ ಬೇಲೂರು ಶಾಸಕ ಹುಲ್ಲಹಳ್ಳಿ ಸುರೇಶ್ ಅವರು ಭರವಸೆ ನೀಡಿದರು.

ಪಟ್ಟಣದ ಎಚ್.ಡಿ.ಪಿ.ಎ. ಸಭಾಂಗಣದಲ್ಲಿ ನಡೆದ ಹಾಸನ ಜಿಲ್ಲಾ ಪ್ಲಾಂಟರ್ಸ್ ಸಂಘದ 2026-28ನೇ ಸಾಲಿನ ಪ್ರಥಮ ಕಾರ್ಯಕಾರಿ ಮಂಡಳಿ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿ, ಮಲೆನಾಡಿನ ಕಾಫಿ ಬೆಳೆಗಾರರು ರಾಜ್ಯದ ಆರ್ಥಿಕತೆಗೆ ಮಹತ್ವದ ಕೊಡುಗೆ ನೀಡುತ್ತಿದ್ದು, ಅವರಿಗೆ ಹಿಂದಿನ ದಿನಗಳಲ್ಲಿ ದೊರೆಯುತ್ತಿದ್ದ ಗೌರವ ಹಾಗೂ ಪ್ರೋತ್ಸಾಹವನ್ನು ಮರಳಿ ನೀಡುವ ಅಗತ್ಯ ಹೆಚ್ಚಾಗಿದೆ ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಕಾಡಾನೆ ಹಾವಳಿ, ಬೆಳೆ ನಷ್ಟ ಹಾಗೂ ಕೃಷಿ ಸಂಬಂಧಿತ ವಿವಿಧ ಸಮಸ್ಯೆಗಳಿಂದ ಬೆಳೆಗಾರರು ಸಂಕಷ್ಟ ಅನುಭವಿಸುತ್ತಿದ್ದಾರೆ. ಹಾಸನ ಜಿಲ್ಲೆಯ ನಾಲ್ಕು ತಾಲ್ಲೂಕುಗಳ ಬೆಳೆಗಾರರು ಒಗ್ಗಟ್ಟಾಗಿ ತಮ್ಮ ಸಮಸ್ಯೆಗಳನ್ನು ಸರ್ಕಾರದ ಮುಂದೆ ಮಂಡಿಸಿದರೆ ಶೀಘ್ರ ಪರಿಹಾರ ದೊರೆಯಲು ಸಾಧ್ಯವಾಗುತ್ತದೆ ಎಂದು ಸುರೇಶ್ ಅವರು ಅಭಿಪ್ರಾಯಪಟ್ಟರು.

ಬೆಳೆಗಾರರ ಅನುಭವ, ಸಲಹೆ ಹಾಗೂ ಸಮಸ್ಯೆಗಳನ್ನು ಸದನದ ಒಳಗೆ ಮತ್ತು ಹೊರಗೆ ಪ್ರಸ್ತಾಪಿಸುವ ಮೂಲಕ ರೈತರ ಹಿತಾಸಕ್ತಿಗೆ ಸಂಬಂಧಿಸಿದ ವಿಷಯಗಳಲ್ಲಿ ಸರ್ಕಾರದ ಗಮನ ಸೆಳೆಯುವ ಕಾರ್ಯವನ್ನು ಮುಂದುವರಿಸುವುದಾಗಿ ತಿಳಿಸಿದರು.

ಸಭೆಯಲ್ಲಿ ಎಚ್.ಡಿ.ಪಿ.ಎ. ಮಾಜಿ ಅಧ್ಯಕ್ಷ ಪ್ರಸನ್ನ ಅವರು ಬಿಟ್ಟೇಶ್ವರ ಕಾರ್ಯಕಾರಿ ಮಂಡಳಿ ಸದಸ್ಯರಿಗೆ ಸಭಾ ಶಿಷ್ಟಾಚಾರ, ಸಂಸದೀಯ ಕಾರ್ಯವಿಧಾನಗಳು ಹಾಗೂ ಸಂಘಟನಾ ನಿರ್ವಹಣೆಯ ಕುರಿತು ಮಾರ್ಗ ದರ್ಶನ ನೀಡಿದರಲ್ಲದೆ, ಸಂಘದ ಬಲವರ್ಧನೆಗೆ ಸದಸ್ಯರ ಸಕ್ರಿಯ ಭಾಗವಹಿಸುವಿಕೆ ಮತ್ತು ಜವಾಬ್ದಾರಿಯುತ ಕಾರ್ಯ ನಿರ್ವಹಣೆ ಅಗತ್ಯ ಎಂದು ಅವರು ಹೇಳಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಹಾಸನ ಜಿಲ್ಲಾ ಪ್ಲಾಂಟರ್ಸ್ ಸಂಘದ ಅಧ್ಯಕ್ಷ ಅರೇಹಳ್ಳಿ ಮಂಜುನಾಥ್ ಶೆಟ್ಟಿ ಮಾತನಾಡಿ, ವರ್ಷಕ್ಕೆ ಕನಿಷ್ಠ ನಾಲ್ಕು ಪ್ರಮುಖ ಕಾರ್ಯಕ್ರಮಗಳನ್ನು ಆಯೋಜಿಸುವ ಉದ್ದೇಶ ಹೊಂದಿದ್ದು, ಕಾಳುಮೆಣಸು ವಿಚಾರ ಸಂಕಿರಣ, ಕಾಫಿ ದಿನಾಚರಣೆ ಹಾಗೂ ಕೃಷಿ ಅಧ್ಯಯನ ಪ್ರವಾಸ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದರು.

ಮುಂದಿನ ವರ್ಷ ಸಂಘ ಸ್ಥಾಪನೆಯ ಸುವರ್ಣ ಮಹೋತ್ಸವವನ್ನು ಅದ್ದೂರಿಯಾಗಿ ಆಚರಿಸುವ ಯೋಜನೆ ರೂಪಿಸಲಾಗಿದ್ದು, ಮುಖ್ಯಮಂತ್ರಿ ಹಾಗೂ ಧರ್ಮಸ್ಥಳದ ಡಿ. ವೀರೇಂದ್ರ ಹೆಗ್ಗಡೆ ಅವರನ್ನು ಆಹ್ವಾನಿಸುವ ಚಿಂತನೆ ಇದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ನಿವೃತ್ತ ಕಾಫಿ ಮಂಡಳಿಯ ಜಂಟಿ ನಿರ್ದೇಶಕ ನವೀನ್ ಕುಮಾರ್ ಹಾಗೂ ಹಾಸನ ಜಿಲ್ಲಾ ಪ್ಲಾಂಟರ್ಸ್ ಸಂಘದ ಚುನಾವಣಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದ ಕೆ.ಜಿ.ಎಫ್. ಮಾಜಿ ಅಧ್ಯಕ್ಷ ಮೋಹನ್ ಮತ್ತು ಮಾಜಿ ಕಾರ್ಯದರ್ಶಿ ಕೆ.ಬಿ.ಕೃಷ್ಣಪ್ರಸಾದ್ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಗೌರವ ಕಾರ್ಯದರ್ಶಿ ಹೆಗ್ಗೋವೆ ಪುಟ್ಟರಾಜ್, ಖಜಾಂಚಿ ಲೋಕೇಶ್, ಜಂಟಿ ಕಾರ್ಯದರ್ಶಿ ರವಿಕುಮಾರ್, ಸಂಘಟನಾ ಕಾರ್ಯದರ್ಶಿ ಹೆಚ್.ಎಂ. ಮಂಜುನಾಥ್ ಸೇರಿ ವಿವಿಧ ತಾಲ್ಲೂಕು ಮತ್ತು ಹೋಬಳಿ ಮಟ್ಟದ ಪದಾಧಿಕಾರಿಗಳು, ಸದಸ್ಯರು ಹಾಗೂ ವಿವಿಧ ತಾಲ್ಲೂಕುಗಳ ಕಾಫಿ ಬೆಳೆಗಾರರು ಉಪಸ್ಥಿತರಿದ್ದರು.

## ವಸತಿ ಶಾಲೆಗಳಿಗೆ ಅರ್ಜಿ

**ಹಾಸನ:** ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ 2026-27 ನೇ ಸಾಲಿನ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚನ್ನಮ್ಮ, ಇಂದಿರಾ ಗಾಂಧಿ, ಡಾ. ಬಿ.ಆರ್ ಅಂಬೇಡ್ಕರ್ ವಸತಿ ಶಾಲೆಗಳಿಗೆ 7,8 ಮತ್ತು 9 ನೇ ತರಗತಿ ಪ್ರವೇಶಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರು ತಿಳಿಸಿದ್ದಾರೆ.

ಜೂ.12 ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿದ್ದು, ನಿಗದಿತ ಅರ್ಜಿ ನಮೂನೆಗಳು ಜಿಲ್ಲೆಯ ಎಲ್ಲಾ ವಸತಿ ಶಾಲೆಗಳಲ್ಲಿ ಲಭ್ಯವಿದ್ದು, ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ದಾಖಲಾತಿಗಳೊಂದಿಗೆ ಕಡ್ಡಾಯವಾಗಿ ಹತ್ತಿರದ ವಸತಿ ಶಾಲೆಗಳಲ್ಲಿ ಸಲ್ಲಿಸಬಹುದಾಗಿದ್ದು, ಪ್ರವೇಶ ಪರೀಕ್ಷೆಯು ಜೂ.17 ರಂದು ತಾಲ್ಲೂಕು ಹಂತದಲ್ಲಿ ನಿಗದಿತ ವಸತಿ ಶಾಲೆಗಳಲ್ಲಿ ನಡೆಯುವುದು ಹೆಚ್ಚಿನ ಮಾಹಿತಿಗೆ ಹತ್ತಿರದ ವಸತಿ ಶಾಲೆಯನ್ನು ಸಂಪರ್ಕಿಸಬಹುದಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮೂಲಸೌಕರ್ಯ ಕಲ್ಪಿಸುವುದು ಜನಪ್ರತಿನಿಧಿಗಳ ಕರ್ತವ್ಯ

### ರಸ್ತೆ ಕಾಮಗಾರಿಗೆ ಶಾಸಕ ಸುರೇಶ್ ಭೂಮಿ ಪೂಜೆ

• ಪ್ರಜೋದಯ ವರದಿ



**ಆಲೂರು:** ಜನಸಾಮಾನ್ಯರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಜನಪ್ರತಿನಿಧಿಗಳ ಕರ್ತವ್ಯ ಎಂದು ಶಾಸಕ ಸಿಮೆಂಟ್ ಮಂಜು ಅವರು ತಿಳಿಸಿದರು.

ತಾಳೂರು ಗ್ರಾಮ ಪಂಚಾಯಿತಿ ಚಿಕ್ಕಕಣಗಾಲು ಗ್ರಾಮದಲ್ಲಿ ರಸ್ತೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಮಂಗಳವಾರ ತಾಲ್ಲೂಕಿನ ಮಡಬಲು ಪಂಚಾಯಿತಿ ಲಕ್ಷ್ಮಿಪುರ, ಚಿಕ್ಕಕಣಗಾಲು ಕಾಲೋನಿ, ತಾಳೂರು ಪಂಚಾಯಿತಿ ಜನ್ನಾಪುರ ತಿಮ್ಮನಹಳ್ಳಿ, ಭೈರಾಪುರ ಪಂಚಾಯಿತಿ ಧರ್ಮಪುರಿ, ಹೊಸೂರು ಮತ್ತು ಬ್ಯಾಬ ಕಾಲೋನಿಯಲ್ಲಿ ಶಾಸಕರ ಅನುದಾನದಲ್ಲಿ ಸುಮಾರು 50 ಲಕ್ಷ ರೂ.ಗಳ ವೆಚ್ಚದಲ್ಲಿ ರಸ್ತೆಗಳ ದುರಸ್ತಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಗಿದೆ ಎಂದು ಅವರು ಹೇಳಿದರು.

ಕಾಮಗಾರಿ ಗುಣಮಟ್ಟವನ್ನು ಕಾಪಾಡಬೇಕೆಂದು ಗುತ್ತಿಗೆದಾರರಿಗೆ ಸೂಚಿಸಿದ್ದೇನೆ. ಸ್ಥಳೀಯರು ಕಾಮಗಾರಿ ಗುಣಮಟ್ಟದ ಬಗ್ಗೆ ಕಾಳಜಿ ವಹಿಸಬೇಕು. ಪ್ರತಿ ಹಳ್ಳಿಗಳಿಗೆ ಗುಣಮಟ್ಟದ ರಸ್ತೆ, ದಾರಿ ದೀಪ, ಕುಡಿಯುವ ನೀರಿನ ಸೌಲಭ್ಯ ಒದಗಿಸಲು ಶ್ರಮಿಸುತ್ತೇನೆ ಎಂದರು.

ಸ್ಥಳೀಯರು, ಪಕ್ಷದ ಮುಖಂಡರು ಹಾಗೂ ಸಾರ್ವಜನಿಕರು ಇದ್ದರು.

# ಗ್ರಂಥಾಲಯದ ಪ್ರಗತಿ ವಿವರ ಸಲ್ಲಿಸಲು ಸೂಚನೆ

### ಗ್ರಂಥಾಲಯ ಆವರಣದಲ್ಲಿ ಗಿಡ ನೆಡಿ: ಡಿ.ಸಿ.

• ಪ್ರಜೋದಯ ವರದಿ




**ಹಾಸನ:** ಜಿಲ್ಲಾ ಗ್ರಂಥಾಲಯದ ಪ್ರಗತಿ ಸಾಧಿಸಿರುವ ಬಗ್ಗೆ ವಿವರವಾದ ಮಾಹಿತಿ ನೀಡುವಂತೆ ಜಿಲ್ಲಾಧಿಕಾರಿ ಲತಾ ಕುಮಾರಿ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಗ್ರಂಥಾಲಯದಲ್ಲಿರುವ ಶೇಡ್‌ನಲ್ಲಿ ಮಕ್ಕಳು ಕುಳಿತು ಓದಲು ಅನುಕೂಲವಾಗುವಂತೆ ಸಜ್ಜುಗೊಳಿಸಲು ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಗ್ರಂಥಾಲಯದ ಆವರಣದಲ್ಲಿ ಕಾಂಪೌಂಡ್ ಪಕ್ಕದಲ್ಲಿ ಗಿಡಗಳನ್ನು ನೆಟ್ಟು ಬೆಳೆಸಲು ಕ್ರಮ ವಹಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರಲ್ಲದೆ, ಕಸದ ಬುಟ್ಟಿಗಳನ್ನಿಡಲು ಸೂಚಿಸಿದರಲ್ಲದೆ, ಗ್ರಂಥಾಲಯಕ್ಕೆ ಯಾವ ಯಾವ ನಿಯತಕಾಲಿಕೆ ಬರುತ್ತಿದೆ ಎಂಬುದರ ಬಗ್ಗೆ ಮಾಹಿತಿ ನೀಡಿ ಪೋನ್ ಬಳಕೆ ಮಾಡಿದರೆ ದಂಡ ವಸೂಲಿ ಮಾಡಬೇಕು ನೂತನ ಕಟ್ಟಡ ಕಾಮಗಾರಿಯಲ್ಲಿ ಬಾಕಿ ಉಳಿದಿರುವ ಕೆಲಸವನ್ನು ನಿರ್ಮಿತಿ ಕೇಂದ್ರದವರು ಪರಿಶೀಲನೆ ಮಾಡಿ ಒಂದು ವರದಿ ನೀಡುವಂತೆ ಸೂಚಿಸಿದರು.

ಗ್ರಂಥಾಲಯದಲ್ಲಿ ಓದುಗರಿಗೆ ತೊಂದರೆ ಆಗದಂತೆ ಹಾಸನಾಂಬ ಕಲಾಕ್ಷೇತ್ರದ ಹೊರ ಆವರಣದಲ್ಲಿ ಮೈಕ್ ಬಳಕೆ ಮಾಡುವಂತಿಲ್ಲ. ಗ್ರಂಥಾಲಯದಲ್ಲಿರುವ ಸ್ಪರ್ಧಾ ಕುಟೀರಕ್ಕೆ ಅಧ್ಯಯನ ಮಾಡಲು ಬರುವ ಮಕ್ಕಳಿಗೆ ಅನುಕೂಲವಾಗುವಂತೆ ಇಂದಿರಾ ಕ್ಯಾಂಟೀನ್ ತೆರೆಯಲು ಕ್ರಮ ಕೈಗೊಳ್ಳಬೇಕು. ಗ್ರಂಥಾಲಯಕ್ಕೆ ಓದಲು ಬರುವ ವಿದ್ಯಾರ್ಥಿಗಳ ನೋಂದಣಿ ಮಾಡಿಸುವುದರ ಜೊತೆಗೆ ಒಂದು ಗ್ರೂಪ್ ಮಾಡಿ. ಒಂದು ಟೆಸ್ಟ್ ಮಾಡಿ ವಿದ್ಯಾರ್ಥಿಗಳಿಗೆ ಓರಿಯಂಟೇಷನ್ ಮಾಡಿ ಎಂದು ಹೇಳಿದರು.

ಬಡಮಕ್ಕಳಿಗೆ ಓರಿಯೆಂಟೇಷನ್ ಮಾಡಿ ಪರೀಕ್ಷೆಗೆ ತಯಾರಿ ಮಾಡುವ ನಿಟ್ಟಿನಲ್ಲಿ ಗಮನಹರಿಸಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರಲ್ಲದೆ, ಗ್ರಂಥಾಲಯದಲ್ಲಿ ಓದಲು ಬರುವ ವಿದ್ಯಾರ್ಥಿಗಳ ಆರೋಗ್ಯ ತಪಾಸಣೆ ಮಾಡಲು ಕ್ರಮ ವಹಿಸಲು ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ದೂದ್‌ಪೀರ್, ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ ರಾಮಕೃಷ್ಣ ಗ್ರಂಥಾಲಯದ ಅಧಿಕಾರಿಗಳು ಹಾಗೂ ವಿವಿಧ ಅಧಿಕಾರಿಗಳು ಹಾಜರಿದ್ದರು.

# ಜಾನಪದ ಕಲೆಯಿಂದ ಭಾರತದ ಪರಂಪರೆ ಶ್ರೀಮಂತ

• ಪ್ರಜೋದಯ ವರದಿ



**ಹಾಸನ:** ಜಾನಪದ ಕಲೆಯಿಂದ ಭಾರತ ದೇಶದ ಸಾಹಿತ್ಯ ಮತ್ತು ಸಂಸ್ಕೃತಿ ಪರಂಪರೆ ಶ್ರೀಮಂತವಾಗಿದೆ, ಉಳಿಸಿ ಬೆಳೆಸುವ ಮಹತ್ವವಾದ ಹೊಣೆಗಾರಿಕೆ ಇಂದಿನ ಮಕ್ಕಳು ಮುಂದಿನ ಯುವಜನರ ಮೇಲಿದೆ ಎಂದು ನಾಡಿನ ಹಿರಿಯ ಕಲಾವಿದ ಹಾಗೂ ಕರ್ನಾಟಕ ಜನಪದ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಗ್ಯಾರಂಟಿ ರಾಮಣ್ಣ ತಿಳಿಸಿದ್ದಾರೆ.

ಮಾವಿನಕೆರೆ ಜವಲಾಲ್ ನವೋದಯ ಶಾಲೆಯ ಸಭಾಂಗಣದಲ್ಲಿ ಮಂಗಳವಾರ ನಿರಂತರ ಸಾಂಸ್ಕೃತಿಕ ಕ್ರೀಡಾ ಯುವಕ ಸಂಘ, ಕರ್ನಾಟಕ ಜಾನಪದ ಪರಿಷತ್ ಜಿಲ್ಲಾ ಘಟಕ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಏರ್ಪಡಿಸಲಾಗಿದ್ದ ಜಾನಪದ ಸಂಭ್ರಮ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಮಣ್ಣಿನ ಮೂಲ ಬೇರು ಜಾನಪದ ಗೀತೆಗಳು ಭಾರತೀಯ ಕಲೆ ಸಾಹಿತ್ಯ ಸಂಸ್ಕೃತಿ ಮತ್ತು ಪರಂಪರೆ ಶ್ರೀಮಂತವಾಗಿವೆ ಎಂದರು.

ಜಾನಪದವು ಭಾರತದಿಂದ ವಿಶ್ವದಲ್ಲೇ ಹೆಸರುವಾಸಿಯಾಗಿದೆ, ಹಿಂದೆ ನಮ್ಮ ಹಿರಿಯರು ಬದುಕಿನ ಅವಿಭಾಜ್ಯ ಅಂಗವಾಗಿ ಅವರ ಜೀವನದಲ್ಲಿ ಜಾನಪದ ಅಧುನಿಕ ತೊಡಗಿಸಿಕೊಂಡರು, ಅರಬ್ ಹಾಗೂ ಪಶ್ಚಿಮಾತ್ಯ ಪ್ರಭಾವದಿಂದ ಜಾನಪದ ಕಲೆ ಕಣ್ಮರೆ ಆಗುತ್ತವೆ. ಇಂದಿನ ಮಕ್ಕಳು ಜಾನಪದ ಕಲೆಯನ್ನು ಉಳಿಸಬೇಕು ಎಂದರು.

ನವೋದಯ ಕಾಲೇಜಿನ ಉಪ ಪ್ರಾಂಶುಪಾಲರಾದ ಜನಾರ್ಧನ್ ಅವರು ಕಾರ್ಯಕ್ರಮ ಅಧ್ಯಕ್ಷತೆ ವಹಿಸಿ ಮಾತನಾಡಿ, ಜನಸಾಮಾನ್ಯರಿಂದ ದೂರವಾಗುತ್ತಿರುವ ಜಾನಪದ ಕಲೆ ಸಾಹಿತ್ಯ ಮತ್ತು ಸಂಸ್ಕೃತಿ ಉಳಿಸಿ ಬೆಳೆಸಲು ಇಂದಿನ ಮಕ್ಕಳು ಮತ್ತು ಯುವ ಜನತೆಯಿಂದ ಮಾತ್ರ ಸಾಧ್ಯ ಹಾಗಾಗಿ ಜಾನಪದ ಗೀತೆಗಳು ಮತ್ತು ಕೋಲಾಟ ಸುಗ್ಗಿ ಕುಣಿತ ಡೊಳ್ಳು ಕುಣಿತ ಜನಪದ ಗೀತೆ ಸೋಬಾನ ಸುಗ್ಗಿ ಕುಣಿತಗಳನ್ನು ಉಳಿಸಿ ಬೆಳೆಸಿ ಎಂದು ಕರೆ ನೀಡಿದರು

ಕಾರ್ಯಕ್ರಮದಲ್ಲಿ ಸುಗ್ಗಿ ಕುಣಿತ ಡೊಳ್ಳು ಕುಣಿತ ಕಂಸಾಳೆ, ಜಾನಪದ ಗೀತೆ, ಸೋಬಾನ ಪದವನ್ನು ಕಾರ್ಯಕ್ರಮ ವೇದಿಕೆಯಲ್ಲಿ ಪ್ರದರ್ಶನ ನೀಡಲಾಯಿತು.

ಮುಖ್ಯ ಅತಿಥಿಗಳಾಗಿ ಜನಪದ ಕಲಾವಿದರಾದ ದುದ್ದ ಯೋಗೇಂದ್ರ, ಲೀಲಾದರ, ದಿವಾಕರ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

# ಜಿಲ್ಲೆಯಲ್ಲಿ ಚುರುಕುಗೊಂಡ ಮುಂಗಾರು

### ಮಲೆನಾಡು ಭಾಗದಲ್ಲಿ ಎರಡು ದಿನಗಳಿಂದ ಬಿಡುವು ನೀಡದ ಮಳೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ಮುಂಗಾರು ಚುರುಕುಗೊಂಡಿದ್ದು, ಮಲೆನಾಡು ಭಾಗದಲ್ಲಿ ಕಳೆದ ಎರಡು ದಿನಗಳಿಂದ ಮಳೆಯ ಅಬ್ಬರ ಜೋರಾಗಿದೆ.

ಸಕಲೇಶಪುರ, ಆಲೂರು ಹಾಗು ಬೇಲೂರು ತಾಲ್ಲೂಕುಗಳಲ್ಲಿ ಎರಡು ದಿನಗಳಿಂದ ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದ ಜನರ ದಿನನಿತ್ಯದ ಕಾರ್ಯ ಚಟುವಟಿಕೆಗೆ ಅಡ್ಡಿಯುಂಟಾಗಿದೆ. ಮಲೆನಾಡು ಮಾತ್ರವಲ್ಲದೇ ಬಯಲು ಸೀಮೆ, ಅರೆ ಮಲೆನಾಡು ಭಾಗದಲ್ಲೂ ಮಳೆ ಬಿರುಸುಗೊಂಡಿರುವುದರಿಂದ ಬಿತ್ತನೆ ಕಾರ್ಯಕ್ಕೆ ಅನುಕೂಲವಾಗಿದೆ. ಈ ಬಾರಿ ಮುಂಗಾರು ಸಮಯಕ್ಕೆ ಸರಿಯಾಗಿ ಪ್ರವೇಶಿಸಿರುವುದು ರೈತ ಸಮುದಾಯದಲ್ಲಿ ಸಂತಸ ಮೂಡಿಸಿದೆ. ಆದರೆ, ಮಲೆನಾಡು, ಪಶ್ಚಿಮಘಟ್ಟ ವ್ಯಾಪ್ತಿಯ ಗ್ರಾಮಗಳಲ್ಲಿ ಮಳೆ ಬಿಡುವು ನೀಡದೆ ನಿರಂತವಾಗಿ ಸುರಿಯುತ್ತಿರುವುದರಿಂದ ಕೃಷಿ ಚಟುವಟಿಕೆಗಳಿಗೆ ವಿರಾಮ ನೀಡುವಂತಾಗಿದೆ.

ಅರಸೀಕೆರೆ, ಚನ್ನರಾಯಪಟ್ಟಣ, ಹೊಳೆನರಸೀಪುರ ಭಾಗದಲ್ಲೂ ಉತ್ತಮ ಮಳೆಯಾಗುತ್ತಿರುವುದರಿಂದ ಜಮೀನು ಉಳುಮೆ ಕಾರ್ಯ ಚುರುಕುಗೊಂಡಿದೆ.

ಸಕಲೇಶಪುರ ತಾಲ್ಲೂಕಿನಲ್ಲಿ ಮಳೆಯ ಅಬ್ಬರದಿಂದ ವಿದ್ಯುತ್ ಸರಬರಾಜು ಪದೇ ಪದೇ ವ್ಯತ್ಯಯಗೊಳ್ಳುತ್ತಿದೆ. ಹಲವೆಡೆ ಮರಗಳು ಹಾಗು ಕೊಂಬೆಗಳು ವಿದ್ಯುತ್ ತಂತಿಗಳ ಮೇಲೆ ಬಿದ್ದ ಪರಿಣಾಮ ವಿದ್ಯುತ್ ಸಂಪರ್ಕ ಕಡಿತಗೊಂಡಿದ್ದು, ಗ್ರಾಮೀಣ ಭಾಗದ ಜನರು ಕತ್ತಲಲ್ಲೇ ದಿನ ಕಳೆಯುವ ಪರಿಸ್ಥಿತಿ ನಿರ್ಮಾಣವಾಗಿದೆ. ವಿದ್ಯುತ್ ಇಲ್ಲದೆ ಕುಡಿಯುವ ನೀರಿನ ಪೂರೈಕೆ, ವ್ಯಾಪಾರ ವಹಿವಾಟು ಹಾಗೂ ದಿನನಿತ್ಯದ ಚಟುವಟಿಕೆಗಳಿಗೂ ತೊಂದರೆ ಉಂಟಾಗಿದೆ.

ನಗರದಲ್ಲೂ ಸಂಜೆಯ ನಂತರ ವರುಣನ ಅಬ್ಬರ ಜೋರಾಗಿದ್ದರಿಂದ ವಿದ್ಯಾರ್ಥಿಗಳು, ನೌಕರರು ತೊಂದರೆ ಅನುಭವಿಸುವಂತಾಯಿತು. ಬೆಳಿಗ್ಗೆಯಿಂದ ತುಂತುರು ಮಳೆ, ಬಿಸಿಲಿನ ವಾತಾವರಣ ಕಂಡು ಬಂದರೂ ಮಧ್ಯಾಹ್ನದ ವೇಳೆ ಸಾಧಾರಣವಾಗಿ ಪ್ರಾರಂಭವಾದ ಮಳೆ ಸಂಜೆಯ ನಂತರ ಧಾರಾಕಾರವಾಗಿ ಮಳೆ ಸುರಿಯಿತು. ಹೀಗಾಗಿ ರಸ್ತೆಗಳಲ್ಲಿ ಮಳೆ ನೀರು ನಿಂತು ವಾಹನ ಸವಾರರು ಪರದಾಡುವ ಸ್ಥಿತಿ ನಿರ್ಮಾಣವಾಗಿತ್ತು. ಬಿ.ಎಂ.ರಸ್ತೆ ಜಲಾವೃತಗೊಂಡಿದ್ದರಿಂದ ವಾಹನಗಳು ಸಂಚರಿಸಲು ಅಡ್ಡಿಯುಂಟಾಗಿತು.

# ತಂಬಾಕು ಮುಕ್ತ ಕಚೇರಿ ಫಲಕ ಅಳವಡಿಸಿ

• ಪ್ರಜೋದಯ ವರದಿ



**ಹಾಸನ:** ಜಿಲ್ಲೆಯ ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ತಂಬಾಕು ಮುಕ್ತ ಕಚೇರಿ ಎಂದು ಫಲಕ ಅಳವಡಿಸುವಂತೆ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ನಡೆದ ಸಭೆಯಲ್ಲಿ ಮಾತನಾಡಿದ ಅವರು ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಸೇವನೆ ನಿಷೇಧಿಸಿದ್ದು, ಸೇವನೆ ಮಾಡುತ್ತಿರುವುದು ಕಂಡು ಬಂದಲ್ಲಿ ದಂಡ ವಿಧಿಸುವಂತೆ ಸೂಚನೆ ನೀಡಿದರಲ್ಲದೆ, ಅನಿರೀಕ್ಷಿತ ದಾಳಿ ನಡೆಸಲು ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿದರು.

ತಂಬಾಕು ಉತ್ಪನ್ನಗಳನ್ನು ಬಳಸಬಾರದು, ಅವುಗಳಿಂದ ಆರೋಗ್ಯದ ಮೇಲೆ ಉಂಟಾಗುವ ದುಷ್ಪರಿಣಾಮ ಕುರಿತು ಶಾಲಾ ಮಕ್ಕಳಿಗೆ ಮಾಹಿತಿ ನೀಡುವುದರ ಮೂಲಕ ಜಾಗೃತಿ ಮೂಡಿಸಲು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರಲ್ಲದೆ, ತಂಬಾಕು ಮುಕ್ತ ಶಾಲೆ, ಹಾಸ್ಟೆಲ್ ಎಂದು ಫಲಕ ಅಳವಡಿಸಬೇಕು. ಆವರಣಗಳಲ್ಲಿ ಗುಟ್ಕಾ ಕವರ್‌ಗಳು ಸಿಕ್ಕರೆ ದಂಡ ವಿಧಿಸಿ ಎಂದರಲ್ಲದೆ, ಶಾಲಾ ಮುಖ್ಯಸ್ಥರೆ ಹೊಣೆಗಾರರು ಎಂದು ಎಚ್ಚರಿಸಿದರು.

ಬಸ್ ನಿಲ್ದಾಣ ಮತ್ತು ರೈಲ್ವೆ ನಿಲ್ದಾಣಗಳನ್ನು ತಂಬಾಕು ಮುಕ್ತ ನಿಲ್ದಾಣ ಎಂದು ಘೋಷಣೆ ಮಾಡಲು ಕ್ರಮ ವಹಿಸಲು ತಿಳಿಸಿದರು.

# ಜನಜೀವನಕ್ಕೆ ದಿಕ್ಕು ತೋರಿದ ಮಹಾನ್ ವ್ಯಕ್ತಿ ಕೆಂಪೇಗೌಡ

### ಜೂನ್ 27ರಂದು ಜಯಂತಿ ಆಚರಣೆಗೆ ಸಿದ್ಧತೆ: ಶಾಸಕ ಸುರೇಶ್

• ಪ್ರಜೋದಯ ವರದಿ




**ಬೇಲೂರು:** ನಾಡಪ್ರಭು ಕೆಂಪೇಗೌಡರು ಒಂದು ಸಮುದಾಯಕ್ಕೆ ಸೀಮಿತ ವ್ಯಕ್ತಿಯಲ್ಲ, ಎಲ್ಲ ಸಮುದಾಯಗಳ ಅಭಿವೃದ್ಧಿಗೆ ಪೇಟೆ-ಪಟ್ಟಣಗಳನ್ನು ನಿರ್ಮಿಸಿ ಜನಜೀವನಕ್ಕೆ ದಿಕ್ಕು ತೋರಿದ ಮಹಾನ್ ವ್ಯಕ್ತಿ ಎಂದು ಶಾಸಕ ಎಚ್.ಕೆ.ಸುರೇಶ್ ಅವರು ಹೇಳಿದರು.

ಪಟ್ಟಣದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಕೆಂಪೇಗೌಡ ಜಯಂತಿ ಅಂಗವಾಗಿ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜೂನ್ 27ರಂದು ಸಮಾಜದ ವಿವಿಧ ಸಂಘ-ಸಂಸ್ಥೆಗಳು, ಮುಖಂಡರು ಹಾಗೂ ಎಲ್ಲ ಸಮುದಾಯದ ಜನರ ಸಹಕಾರದೊಂದಿಗೆ ಕೆಂಪೇಗೌಡ ಅವರ ಜಯಂತಿಯನ್ನು ಅದ್ದೂರಿಯಾಗಿ ಆಚರಿಸುವಂತೆ ಕರೆ ನೀಡಿದರು.

ಕೆಂಪೇಗೌಡರ ಪ್ರತಿಮೆಗೆ ಮಾಲಾರ್ಪಣೆ, ಮೆರವಣಿಗೆ ಹಾಗೂ ಸಾರ್ವಜನಿಕ ಸಭೆಯನ್ನು ಆಯೋಜಿಸಿ ಜಯಂತಿಗೆ ವಿಶೇಷ ಅರ್ಥ ನೀಡಬೇಕು. ಈ ಸಂಬಂಧ ಎಲ್ಲ ಮುಖಂಡರು ಸಭೆ ಸೇರಿ ಅಂತಿಮ ತೀರ್ಮಾನ ಕೈಗೊಳ್ಳಬೇಕಿದ್ದು, ಕಾರ್ಯಕ್ರಮದ ಕುರಿತು ಈಗಾಗಲೇ ಪೂರ್ವಭಾವಿ ಮಾಹಿತಿ ನೀಡಲಾಗಿದೆ. ಶೀಘ್ರದಲ್ಲೇ ಅಧಿಕೃತ ಆಹ್ವಾನ ಪತ್ರಿಕೆ ವಿತರಿಸಲಾಗುವುದು ಎಂದು ಅವರು ಹೇಳಿದರು.

ಒಕ್ಕಲಿಗರ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ಗಣೇಶ್ ಮಾತನಾಡಿ, ಕಳೆದ 13 ವರ್ಷಗಳಿಂದ ಬೇಲೂರಿನಲ್ಲಿ ಕೆಂಪೇಗೌಡ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಈ ಬಾರಿಯೂ ಸ್ವಾಮೀಜಿಗಳ ದಿನಾಂಕ ಹಾಗೂ ಲಭ್ಯತೆ ಕುರಿತು ಚರ್ಚಿಸಿ, ಜೂ.27ರಂದು ಅಥವಾ ನಂತರದ ಸೂಕ್ತ ದಿನಾಂಕದಲ್ಲಿ ಆಚರಣೆ ನಡೆಸುವ ಕುರಿತು ನಿರ್ಧಾರ ಕೈಗೊಳ್ಳಲಾಗುವುದು ಎಂದರು.

ಮಹಿಳಾ ಒಕ್ಕಲಿಗರ ಸಂಘದ ಅಧ್ಯಕ್ಷೆ ಭಾರತೀಗೌಡ ಮಾತನಾಡಿ, ಪೂರ್ವಭಾವಿ ಸಭೆಯ ಮಾಹಿತಿ ವಾಟ್ಸಾಪ್ ಮೂಲಕ ನೀಡಲಾಗಿದ್ದರೂ ಎಲ್ಲರಿಗೂ ಅಧಿಕೃತ ಪತ್ರದ ಮೂಲಕ ಆಹ್ವಾನ ನೀಡುವುದು ಸೂಕ್ತ. ಕಳೆದ ಬಾರಿ ನಿಗದಿತ ಸಮಯಕ್ಕಿಂತ ಮುಂಚೆಯೇ ಮಾಲಾರ್ಪಣೆ ಕಾರ್ಯಕ್ರಮ ಮುಗಿದಿದ್ದು, ಈ ಬಾರಿ ಅಂತಹ ಗೊಂದಲ ಉಂಟಾಗದಂತೆ ನೋಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಒಕ್ಕಲಿಗರ ಯುವ ವೇದಿಕೆ ಅಧ್ಯಕ್ಷ ಗಿರೀಶ್, ತಹಸೀಲ್ದಾರ್ ಶ್ರೀಧರ್ ಕಂಕಣವಾಡಿ ತಾಪಂ ಇಒ ಸತೀಶ್ ಕುಮಾರ್, ಬಿಇಒ ಭಾಗ್ಯಮ್ಮ, ಜಿಲ್ಲಾ ಪಂಚಾಯಿತಿ ಕುಡಿಯುವ ನೀರು ಸರಬರಾಜು ವಿಭಾಗದ ಎಇಇ ಅನ್ವರ್ ಭಾಷಾ, ಒಕ್ಕಲಿಗರ ಯುವ ವೇದಿಕೆ ಗೌರವಾಧ್ಯಕ್ಷ ಚಂದ್ರಣ್ಣ, ಲೋಹಿತ್, ಹರೀಶ್, ಮಹೇಶ್, ಮಲ್ಲಿಕಾರ್ಜುನ್, ಶ್ರೀದೇವಿ, ಚೇತನ್, ನಂದೀಶ್ ಉಪಸ್ಥಿತರಿದ್ದರು.

### ಸ್ಪರ್ಧಾತ್ಮಕ ಮನೋಭಾವ ಬೆಳೆಸುವುದರ ಜೊತೆಗೆ ಶೈಕ್ಷಣಿಕ ಸಾಧನೆಗೆ ಪ್ರೇರಣೆ

# ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಎನ್‌ಎಂಎಂಎಸ್ ಯೋಜನೆ ನೆರವು

• ಪ್ರಜೋದಯ ವರದಿ



**ಶ್ರವಣಬೆಳಗೊಳ:** ಎನ್‌ಎಂಎಂಎಸ್ ವಿದ್ಯಾರ್ಥಿ ವೇತನ ಯೋಜನೆಯಿಂದ ಗ್ರಾಮೀಣ ಮತ್ತು ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಮುಂದುವರಿಸಲು ನೆರವಾಗುತ್ತಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ ಹೋಬಳಿ ಘಟಕದ ಅಧ್ಯಕ್ಷ ನಾಗೇಂದ್ರರಾಯ ಹೇಳಿದರು.

ಪಟ್ಟಣದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ 2025-26 ನೇ ಸಾಲಿನ ಎನ್.ಎಂ.ಎಂ.ಎಸ್. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ವಿದ್ಯಾರ್ಥಿ ವೇತನಕ್ಕೆ ಆಯ್ಕೆಯಾಗಿರುವ ವಿದ್ಯಾರ್ಥಿಗಳಿಗೆ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿ, ಇಂತಹ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅರ್ಹತೆ ಪಡೆದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡುವುದರಿಂದ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಶಿಕ್ಷಣ ವೆಚ್ಚದ ಭಾರ ಕಡಿಮೆಯಾಗಿ ತಮ್ಮ ಅಧ್ಯಯನದ ಕಡೆ ಹೆಚ್ಚು ಗಮನ ಹರಿಸಲು ಸಾಧ್ಯವಾಗುತ್ತದೆ ಎಂದರು.

ಎನ್‌ಎಂಎಂಎಸ್ ವಿದ್ಯಾರ್ಥಿ ವೇತನವು ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕ ಮನೋಭಾವವನ್ನು ಬೆಳೆಸುವುದರ ಜೊತೆಗೆ ಶೈಕ್ಷಣಿಕ ಸಾಧನೆಗೆ ಪ್ರೇರಣೆ ನೀಡುತ್ತದೆ. ಆರ್ಥಿಕ ಸಮಸ್ಯೆಗಳ ಕಾರಣದಿಂದ ಶಿಕ್ಷಣವನ್ನು ಅರ್ಧದಲ್ಲೇ ಬಿಡುವ ಪರಿಸ್ಥಿತಿಯನ್ನು ತಡೆಯುತ್ತದೆ. ಹಲವು ವಿದ್ಯಾರ್ಥಿಗಳು ಈ ವಿದ್ಯಾರ್ಥಿ ವೇತನದ ನೆರವಿನಿಂದ ಉತ್ತಮ ಶಿಕ್ಷಣ ಪಡೆದು ಉನ್ನತ ಗುರಿಗಳನ್ನು ಸಾಧಿಸುತ್ತಿದ್ದಾರೆ. ಈ ಯೋಜನೆಯು ಬಡ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳ ಶೈಕ್ಷಣಿಕ ಕನಸುಗಳಿಗೆ ಬಲ ತುಂಬುವ ಪರಿಣಾಮಕಾರಿ ಯೋಜನೆಯಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಮುಖ್ಯ ಶಿಕ್ಷಕ ಬಿ.ಕೆ.ಸತೀಶ್ ಮಾತನಾಡಿ, ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಕರ್ನಾಟಕ ಪಬ್ಲಿಕ್ ಶಾಲೆಯು ಶಿಕ್ಷಣ ಕ್ಷೇತ್ರದಲ್ಲಿ ಮಹತ್ತರವಾದ ಬದಲಾವಣೆ ತರುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಗ್ರಾಮೀಣ ಹಾಗೂ ಹಿಂದುಳಿದ ಪ್ರದೇಶಗಳ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ಒದಗಿಸುವ ಉದ್ದೇಶದಿಂದ ಕೆಪಿಎಸ್ ಶಾಲೆಗಳನ್ನು ಸ್ಥಾಪಿಸಲಾಗುತ್ತಿದ್ದು, ಪ್ರಸಕ್ತ ವರ್ಷದಿಂದ ಶ್ರವಣಬೆಳಗೊಳದಲ್ಲೂ ಕೆಪಿಎಸ್ ಪ್ರಾರಂಭಿಸಿರುವುದರಿಂದ ಸ್ಥಳೀಯ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ ಎಂದರು.

ಶಿಕ್ಷಣದ ಜೊತೆಗೆ ಸಾಂಸ್ಕೃತಿಕ, ಕ್ರೀಡಾ ಹಾಗೂ ನಾಯಕತ್ವ ಕೌಶಲ್ಯಗಳ ಅಭಿವೃದ್ಧಿಗೂ ಕೆಪಿಎಸ್ ಶಾಲೆಗಳು ಹೆಚ್ಚಿನ ಒತ್ತು ನೀಡುತ್ತಿವೆ. ಇದರಿಂದ ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದ ಭವಿಷ್ಯದ ಸವಾಲುಗಳನ್ನು ಎದುರಿಸಲು ಸಿದ್ಧರಾಗುತ್ತಿದ್ದಾರೆ. ಕೆಪಿಎಸ್ ಶಾಲೆಗಳು ಸರ್ಕಾರಿ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದ್ದು, ರಾಜ್ಯದ ಶಿಕ್ಷಣ ಕ್ಷೇತ್ರಕ್ಕೆ ಹೊಸ ದಿಕ್ಕನ್ನು ತೋರಿಸುತ್ತಿವೆ ಎಂದು ಹೇಳಿದರು.

ಶಾಲೆಯ 9 ನೇ ತರಗತಿ ವಿದ್ಯಾರ್ಥಿಗಳಾದ ಅಂಕಿತಾ, ಡಿ.ಎಸ್. ಬಿಂದುಶ್ರೀ, ಶ್ರೇಯಾ, ಅಂಕಿತಾ ಹಾಗೂ ಎಸ್.ಎಂ.ಪ್ರಜ್ವಲ್ ಆಯ್ಕೆಯಾಗಿದ್ದು, ಚನ್ನರಾಯಪಟ್ಟಣ ತಾಲ್ಲೂಕಿನ ವಿವಿಧ ಶಾಲೆಗಳ ಒಟ್ಟು 20 ವಿದ್ಯಾರ್ಥಿಗಳ ಪೈಕಿ ನಮ್ಮ ಶಾಲೆಯಿಂದಲೇ 5 ವಿದ್ಯಾರ್ಥಿಗಳು ಉತ್ತೀರ್ಣರಾಗಿ ವಿದ್ಯಾರ್ಥಿವೇತನಕ್ಕೆ ಆಯ್ಕೆಯಾಗಿರುವುದು ಸಂತಸ ತಂದಿದೆ ಎಂದು ಪರೀಕ್ಷೆಗೆ ತರಬೇತಿ ನೀಡಿದ ಶಿಕ್ಷಕರಾದ ಬಿ.ಎಸ್. ರವಿಕುಮಾರ್ ಹಾಗೂ ಗುಣವತಿ ಸಂತಸ ವ್ಯಕ್ತಪಡಿಸಿದರು.

ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ರವಿಕುಮಾರ, ಉಪನ್ಯಾಸಕ ಲೋಕೇಶ್, ಅಂಬಿಕಾ ಶಾಲೆ ಮುಖ್ಯ ಶಿಕ್ಷಕ ನಾಗೇಶ್, ಶಿಕ್ಷಕರಾದ ಪ್ರಕಾಶ್, ಮಂಗಳ, ಪುಟ್ಟರಾಜು, ಚೇತನಾ ಇದ್ದರು.

# ಅಮೀನಾ ಮಿಸ್ಬಾಗೆ ಪಿಹೆಚ್.ಡಿ.



• ಪ್ರಜೋದಯ ವರದಿ

**ಹಳೇಬೀಡು:** ಇಲ್ಲಿಯ ವಿಶೇಷ ಪ್ರವಾಸಿ ಮಾರ್ಗದರ್ಶಿ ಅಸ್ಲಾಂ ಷರೀಫ್ ಅವರ ಪುತ್ರಿ ಅಮೀನಾ ಮಿಸ್ಬಾ ಅವರು ತುಮಕೂರು ವಿಶ್ವವಿದ್ಯಾಲಯದ ಪಿ.ಎಚ್.ಡಿ ಪದವಿ ಪಡೆದಿದ್ದಾರೆ.

ಈಚೆಗೆ ತುಮಕೂರು ವಿಶ್ವವಿದ್ಯಾಲಯದಲ್ಲಿ ನಡೆದ ಘಟಿಕೋತ್ಸವದಲ್ಲಿ ಅವರಿಗೆ ಪಿ.ಎಚ್.ಡಿ ಪುರಸ್ಕಾರ ಪ್ರಧಾನ ಮಾಡಲಾಗಿದೆ.

ಎಂಎಸ್ಸಿ ಪ್ರಾಣಿಶಾಸ್ತ್ರ ಪದವೀಧರೆಯಾದ ಅಮೀನಾ ಮಿಸ್ಬಾ ಪ್ರಾಣಿಶಾಸ್ತ್ರದಲ್ಲಿ ರೇಷ್ಮೆ ವಿಷಯದಲ್ಲಿ ತುಮುಕೂರು ವಿಶ್ವವಿದ್ಯಾಲಯಕ್ಕೆ ಮಹಾಪ್ರಬಂಧ ಮಂಡಿಸಿದ್ದರು.

ಉಪಕುಲಪತಿ ಬಾ.ವೆಂಕಟೇಶ್ವರಚಾರಲು, ಕುಲ ಸಚಿವ ನಾಹಿದಾ ಜಮ್ ಅವರ ಮಾರ್ಗದರ್ಶನದಲ್ಲಿ ಪಿಎಚ್.ಡಿ ಸಿದ್ದತೆ ನಡೆಸಿ ಯಶಸ್ವಿಯಾಗಿದ್ದಾರೆ. ಅಮೀನಾ ಮಿಸ್ಬಾ ಅವರ ತಂದೆ ಅಸ್ಲಾಂ ಷರೀಫ್ ಪ್ರವಾಸಿ ತಾಣಗಳ ವಿಶೇಷ ಮಾರ್ಗದರ್ಶಿಯಾಗಿದ್ದಾರೆ. ತಾಯಿ ಸಬೀನಾ ಭಾನು ಗೃಹಿಣಿಯಾಗಿದ್ದಾರೆ.

ಮೂಲತಃ ಬಾಣಾವರದವರಾದ ಅಸ್ಲಾಂ ಷರೀಫ್ ವಾಕ್ ಚಾತುರ್ಯ ಹಾಗೂ ಭಾಷಾ ಜ್ಞಾನದಿಂದ ಹೊಯ್ಸಳರ ನಾಡಿನ ಪ್ರಸಿದ್ಧ ಮಾರ್ಗದರ್ಶಿಯಾಗಿದ್ದಾರೆ. ರಾಜ್ಯಪಾಲರು, ನ್ಯಾಯಮೂರ್ತಿಗಳು ಮೊದಲಾದ ದೇಶದ ಅತಿ ಗಣ್ಯರಿಗೆ ಬೇಲೂರು, ಹಳೇಬೀಡು ದೇವಾಲಯಗಳ ಮಾರ್ಗದರ್ಶನ ಮಾಡಿ ಪ್ರವಾಸೋದ್ಯಮ ಇಲಾಖೆಯಿಂದ ಬೆಸ್ಟ್ ಎನಿಸಿಕೊಂಡಿದ್ದಾರೆ. ಅಸ್ಲಾಂ ಅವರ ಪುತ್ರಿಯ ಸಾಧನೆಗೆ ಹಳೇಬೀಡು, ಬಾಣಾವರ ಭಾಗದ ಜನರು ಶುಭ ಹಾರೈಸಿದ್ದಾರೆ.

# ಕೃಷಿ ಜಮೀನಿನಲ್ಲಿ ಚಿರತೆ ಹೆಜ್ಜೆ ಗುರುತು ಪತ್ತೆ

## ಪಾರಸನಹಳ್ಳಿ, ಸಂತೆಮರೂರು ಗ್ರಾಮದಲ್ಲಿ ಆತಂಕ | ಬೋನು ಇರಿಸಿದ ಅರಣ್ಯ ಇಲಾಖೆ

• ಪ್ರಜೋದಯ ವರದಿ



**ಅರಕಲಗೂಡು:** ತಾಲ್ಲೂಕಿನ ದೊಡ್ಡಮಗ್ಗೆ ಹೋಬಳಿ ಪಾರಸನಹಳ್ಳಿ, ಸಂತೆಮರೂರು ಗ್ರಾಮದ ಜಮೀನಿನಲ್ಲಿ ಮಂಗಳವಾರ ಚಿರತೆ ಕಾಣಿಸಿಕೊಂಡಿದ್ದು ರೈತರಲ್ಲಿ ಆತಂಕ ಹುಟ್ಟಿಸಿದೆ.

ಸಂತೆಮರೂರು ಕೃಷಿ ಜಮೀನಿನಲ್ಲಿ ಚಿರತೆ ಮರಿಯೊಂದಿಗೆ ಸಂಚಾರ ಮಾಡಿರುವ ಹೆಜ್ಜೆ ಗುರುತು ಪತ್ತೆಯಾಗಿದೆ. ಅಲ್ಲದೆ ಪಾರಸನಹಳ್ಳಿ ಗ್ರಾಮದ ಕೃಷಿ ಜಮೀನಿನಲ್ಲಿಯೂ ಚಿರತೆ ಕಾಣಿಸಿಕೊಂಡಿದೆ. ಅರಣ್ಯ ಇಲಾಖೆಯಿಂದ ಚಿರತೆ ಸೆರೆಗೆ ಬೋನು ಇಡಲಾಗಿದೆ. ಆದರೆ ಚಿರತೆ ಮರಿಯೊಂದಿಗೆ ಅಕ್ಕಪಕ್ಕದ ಗ್ರಾಮಗಳ ಕೃಷಿ ಜಮೀನುಗಳ ಬಳಿ ಓಡಾಡಿರುವ ಹೆಜ್ಜೆ ಗುರುತು ಪತ್ತೆಯಾಗಿದೆ.

ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಅರಣ್ಯ ಇಲಾಖೆ ಅಧಿಕಾರಿಗಳಾದ ಪ್ರವೀಣ್, ಪಾಷಾ ಮತ್ತು ಸಿಬ್ಬಂದಿ ಚಿರತೆಯ ಹೆಜ್ಜೆ ಗುರುತು ಖಾತ್ರಿಪಡಿಸಿದ್ದಾರೆ. ಪಟಾಕಿ ಸಿಡಿಸಿದ್ದಾರೆ. ಸಂತೆಮರೂರು ಸಮೀಪದಲ್ಲಿ ಅರಣ್ಯ ಪ್ರದೇಶವಿದ್ದು, ಚಿರತೆ ಈ ಭಾಗದಲ್ಲಿ ಆಗಾಗ ಕಾಣಿಸಿ ಕೊಳ್ಳುತ್ತಿದೆಂದು ರೈತರು ಮಾಹಿತಿ ನೀಡಿದ್ದಾರೆ.

ಹಲವು ವರ್ಷಗಳ ಹಿಂದೆ ಸಂತೆಮರೂರು ಗ್ರಾಮ ಸಮೀಪದ ತೋಟದ ಮನೆಯಿಂದ ಬಾಲಕನನ್ನು ಚಿರತೆ ಹೊತ್ತೋಯ್ದು ಬಲಿತೆಗೆದುಕೊಂಡಿತ್ತು. ಅದಾದ ಹಲವು ವರ್ಷಗಳಲ್ಲಿ ಚಿರತೆ ಈ ಭಾಗದಲ್ಲಿ ಕಾಣಿಸಿಕೊಂಡಿರಲಿಲ್ಲ. ಇತ್ತೀಚಿಗೆ ಸಂತೆಮರೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಚಿರತೆ ಮರಿಯೊಂದಿಗೆ ಕಾಣಿಸಿಕೊಳ್ಳುತ್ತಿರುವುದನ್ನು ಜನರು ಕಣ್ಣಾರೆ ಕಂಡಿದ್ದಾರೆ.

ಕಳೆದ ಐದು ದಿನಗಳ ಹಿಂದೆ ಪಾರಸನಹಳ್ಳಿ ಗ್ರಾಮದ ರೈತರ ಕೊಟ್ಟಿಗೆ ಬಳಿ ಬಂದಿರುವ ಚಿರತೆ ಕೊಟ್ಟಿಗೆ ಬಾಗಿಲು ಹಾಕಿದ್ದರಿಂದ ವಾಪಾಸ್ಸು ಹೋಗಿದೆ. ಕೊಟ್ಟಿಗೆ ಬಳಿ ಚಿರತೆ ಸುಳಿದಾಡಿರುವ ಹೆಜ್ಜೆ ಗುರುತುಗಳು ಕಂಡು ಬಂದಿವೆ. ಅಲ್ಲದೆ ತಾಲ್ಲೂಕಿನ ಕಳ್ಳಿಮುದ್ದನಹಳ್ಳಿ ಹಾಗು ಬೂವನಹಳ್ಳಿ ಗ್ರಾಮದಲ್ಲಿ ಚಿರತೆ ಕೃಷಿ ಜಮೀನಿನಲ್ಲಿ ತೊಡಗಿದ್ದ ಮಹಿಳೆ ಸೇರಿ ಐವರ ಮೇಲೆ ಮಾರಣಾಂತಿಕವಾಗಿ ದಾಳಿ ಮಾಡಿದ್ದು, ಇನ್ನೂ ಕೂಡ ಗಾಯಗೊಂಡವರು ಚಿಕಿತ್ಸೆ ಪಡೆಯುತ್ತಿದ್ದಾರೆ. ಗ್ರಾಮದ ತೋಟದ ಮನೆಯಲ್ಲಿದ್ದ ಮತ್ತೋರ್ವ ಮಹಿಳೆ ಮೇಲೆ ದಾಳಿ ಮಾಡಲು ಯತ್ನಿಸಿದ್ದ ಚಿರತೆ ವಾಸದ ಮನೆಯ ಕೊಟ್ಟಿಗೆಗೆ ನುಗ್ಗಿ ಬಂಧಿಯಾಗಿತ್ತು. ಮನೆಯೊಡತಿ ಸಮಯ ಪ್ರಜ್ಞೆ ಯಿಂದ ಕೊಟ್ಟಿಗೆ ಬಾಗಿಲು ಹಾಕಿದ ಪರಿಣಾಮ ಚಿರತೆ ಬಂಧಿಯಾಗಲು ನೆರವಾಗಿತ್ತು. ಅಂತಿಮವಾಗಿ ಚಿರತೆಗೆ ಅರವಳಿಕೆ ಮದ್ದು ನೀಡಿ ಅರಣ್ಯ ಇಲಾಖೆ ಬಂಧಿಸುವಲ್ಲಿ ಯಶಸ್ವಿಯಾಗಿತ್ತು.

ಹಲವಾರು ದಿನಗಳಿಂದ ಪಾರಸನಹಳ್ಳಿ ಸುತ್ತಮುತ್ತ ಆಹಾರಕ್ಕಾಗಿ ಅಲೆದಾಡುತ್ತಿರುವ ಮರಿ ಯೊಂದಿಗಿನ ಚಿರತೆ ಜನರಲ್ಲಿ ಜೀವಭಯ ಮೂಡಿಸಿದೆ. ಮಂಗಳವಾರ ಸಂತೆಮರೂರು ಗ್ರಾಮದ ಪ್ರದೀಪ್ ರಾಜೇಅರಸು ಅವರ ಜಮೀನಿನಲ್ಲಿ ಕಾಣಿಸಿಕೊಂಡಿರುವುದು ಅಕ್ಕಪಕ್ಕದಲ್ಲಿ ಹಲವಾರು ಹಳ್ಳಿಗಳಿದ್ದು ರೈತಾಪಿ ವರ್ಗದ ಜನರು ಜಮೀನು ಕೆಲಸಗಳಿಗೆ ತೆರಳಲು ಭಯಪಡು ವಂತಾಗಿದೆ. ಯಾವ ಹೊತ್ತಿನಲ್ಲಿ ಮೇಲೆರಗುವುದೋ ಎನ್ನುವ ಭಯ ಜನರಲ್ಲಿ ಮನೆ ಮಾಡಿದೆ.

ಅರಕಲಗೂಡು ಪಟ್ಟಣಕ್ಕೆ ಸಮೀಪವಿರುವ ಪಾರಸನಹಳ್ಳಿ ಗ್ರಾಮದಿಂದ ಚಿರತೆ ಸಂತೆಮರೂರು, ಜೋಡಿಗುಬ್ಬಿ ಅರಣ್ಯ ಪ್ರದೇಶದತ್ತ ಅಲೆದಾಡುತ್ತಿರಬಹುದು ಇಲ್ಲವೇ ಪೊದೆಯಲ್ಲಿ ಅವಿತಿರಬಹುದು. ಬೆಳಿಗ್ಗೆ ಶಿಕ್ಷಕ ಚನ್ನಯ್ಯ ಅವರು ಅರಕಲಗೂಡಿಗೆ ಬೈಕ್‌ನಲ್ಲಿ ಬರುವಾಗ ಚಿರತೆ ಪ್ರತ್ಯಕ್ಷವಾಗಿದೆ.

### ಎಚ್ಚರ ವಹಿಸಲು ಅರಣ್ಯ ಇಲಾಖೆ ಸೂಚನೆ

ಪಾರಸನಹಳ್ಳಿ ಬಳಿ ಕೆಲ ದಿನಗಳ ಹಿಂದೆಯೇ ಚಿರತೆ ಸೆರೆಗೆ ಬೋನು ಇರಿಸಲಾಗಿದೆ. ಚಿರತೆ ಮಾತ್ರ ಪತ್ತೆಯಾಗಿಲ್ಲ. ಸಂತೆಮರೂರು ಗ್ರಾಮದ ಕೃಷಿ ಜಮೀನಿನಲ್ಲಿ ಸಂಚಾರ ಮಾಡಿರುವ ಹೆಜ್ಜೆ ಗುರುತು ಪತ್ತೆಯಾಗಿದೆ. ಆಯಾ ಗ್ರಾಮಗಳ ಕೃಷಿ ಜಮೀನು ಬಳಿ ಪಟಾಕಿ ಸಿಡಿಸಲಾಗಿದೆ. ಚಿರತೆ ಸಂಚಾರ ನಿರಂತರವಾಗಿರುತ್ತದೆ. ಕೃಷಿ ಜಮೀನು ಬಳಿ ಕೆಲಸಕ್ಕೆ ತೆರಳುವ ರೈತರು ಎಚ್ಚರಿಕೆಯಿಂದ ಇರಬೇಕು. ಚಿರತೆ ಸೆರೆಗೆ ಸತತ ಪ್ರಯತ್ನ ನಡೆಸಲಾಗುತ್ತಿದೆ ಎಂದು ಅರಣ್ಯ ಇಲಾಖೆ ಅಧಿಕಾರಿ ಪ್ರವೀಣ್ ಅವರು ತಿಳಿಸಿದರು.

# ಪುರಸಭೆ ಆಸ್ತಿ ಒತ್ತುವರಿ ತೆರವಿಗೆ ಅಗತ್ಯ ಕ್ರಮ

• ಪ್ರಜೋದಯ ವರದಿ





**ಬೇಲೂರು:** ಪುರಸಭೆಗೆ ಆಸ್ತಿ ಒತ್ತುವರಿ ತೆರವಿಗೆ ಮುಲಾಜಿಲ್ಲದೆ ಕ್ರಮ ಕೈಗೊಳ್ಳಲಾಗುವುದೆಂದು ಪುರಸಭೆ ಅಧ್ಯಕ್ಷ ಅಕ್ರಂ ಷರೀಫ್ ಅವರು ಹೇಳಿದರು.

ಪುರಸಭೆ ವೇಲಾಪುರಿ ಸಭಾಂಗಣದಲ್ಲಿ ಮಂಗಳವಾರ ನಡೆದ ತುರ್ತು ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಾರ್ವಜನಿಕ ಆಸ್ತಿ ರಕ್ಷಿಸುವುದು ನಮ್ಮ ಕರ್ತವ್ಯ. ಈ ನಿಟ್ಟಿನಲ್ಲಿ ಎಷ್ಟೇ ಒತ್ತಡ ಕೇಳಿಬಂದರೂ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಾಗುವುದು. ಸದಸ್ಯರ ಸಲಹೆ ಮತ್ತು ಸಹಕಾರದೊಂದಿಗೆ ಪಟ್ಟಣದ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು. ಪುರಸಭೆ ಹಾಗು ತಾಲ್ಲೂಕು ಪಂಚಾಯಿತಿ ಆಸ್ತಿ ಗಡಿಗಳನ್ನು ಅಳತೆ ಮಾಡಿ ಸ್ಪಷ್ಟವಾಗಿ ಗುರುತಿಸುವಂತೆ ಅಧಿಕಾರಿ ಗಳಿಗೆ ಸೂಚಿಸಲಾಗಿದೆ. ಹೊಳೆಬೀದಿಯ ಜಾಗದ ವಿವಾದ ಸಂಬಂಧ ಸ್ಥಳಕ್ಕೆ ಭೇಟಿ ನೀಡಿ ಅಧಿಕಾರಿಗಳಿಂದ ಮಾಹಿತಿ ಪಡೆಯುತ್ತೇನೆಂದರು.

ಸದಸ್ಯ ಎ.ಆರ್.ಅಶೋಕ್ ಅವರು ಮಾತನಾಡಿ, ಪುರಸಭೆಯ ಹಲವು ಆಸ್ತಿಗಳು ಒತ್ತುವರಿ ಯಾಗುತ್ತಿದ್ದರೂ ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಿಲ್ಲ. ಹೊಳೆಬೀದಿಯ ಕೋಳಿ ಅಂಗಡಿ ಹಿಂಭಾ ಗದಲ್ಲಿರುವ ಸುಮಾರು 1,200 ಚದರ ಅಡಿ ಪುರಸಭೆ ಜಾಗ ಒತ್ತುವರಿಯಾಗಿದ್ದು, ಅದರ ಬಗ್ಗೆ ಮಾಹಿತಿ ಸಂಗ್ರಹಿಸಿ ವಶಪಡಿಸಿಕೊಳ್ಳುವಲ್ಲಿ ವಿಫಲರಾಗಿದ್ದಾರೆಂದು ಅಸಮಾಧಾನ ವ್ಯಕ್ತಪಡಿಸಿದರು.

ಸದಸ್ಯ ಜಗದೀಶ್ ಅವರು ಮಾತನಾಡಿ, ಸಂತೆ ಹಾಗು ದಿನವಹಿ ಸುಂಕದ ಹರಾಜು ಪ್ರಕ್ರಿಯೆ ವಿಳಂಬವಾಗಿರುವುದರಿಂದ ಪುರಸಭೆಗೆ ಸುಮಾರು 3 ಲಕ್ಷ ರೂ. ಆದಾಯ ನಷ್ಟವಾಗಿದೆ. ಕೂಡಲೇ ಟೆಂಡರ್ ಕರೆದು ಹರಾಜು ಪ್ರಕ್ರಿಯೆ ನಡೆಸಬೇಕು. ಕುಡಿಯುವ ನೀರಿನ ಸರಬರಾಜಿನ ಅವಧಿಯನ್ನು ಹೆಚ್ಚಿಸಬೇಕು ಹಾಗು ಕಸ ಸಂಗ್ರಹ ಟಿಪ್ಪರ್‌ಗಳನ್ನು ತ್ವರಿತವಾಗಿ ದುರಸ್ತಿಗೊಳಿಸ ಬೇಕೆಂದು ಒತ್ತಾಯಿಸಿದರು.

ಮತ್ತೊಬ್ಬ ಸದಸ್ಯೆ ತೀರ್ಥಕುಮಾರಿ ವೆಂಕಟೇಶ್ ಅವರು ಮಾತನಾಡಿ, ಸದಸ್ಯರ ಅವಧಿ ಅಂತ್ಯಗೊಳ್ಳುತ್ತಿರುವ ಹಿನ್ನಲೆಯಲ್ಲಿ ಮಳೆಗಾಲಕ್ಕೂ ಮೊದಲೇ ಗುಂಡಿಬಿದ್ದ ರಸ್ತೆ ಮತ್ತು ಹಾಳಾ ಗಿರುವ ಸ್ಲ್ಯಾಬ್‌ಗಳನ್ನು ದುರಸ್ತಿಗೊಳಿಸಬೇಕೆಂದು ಆಗ್ರಹಿಸಿದರು. ಸದಸ್ಯರಾದ ಶೈಲೇಶ್, ಜಮಾಲುದ್ದೀನ್, ಅಶೋಕ್, ಪ್ರಭಾಕರ್, ಮುಖ್ಯಾಧಿಕಾರಿ ಬಸವರಾಜು ಶಿಗ್ಗಾವಿ ಇತರರಿದ್ದರು.

# ಹದ ಮಳೆ : ಕೃಷಿ ಚಟುವಟಿಕೆ ಆರಂಭ

• ಪ್ರಜೋದಯ ವರದಿ



**ಅರಕಲಗೂಡು:** ತಾಲ್ಲೂಕಿನಲ್ಲಿ ಹದ ಮಳೆ ಬೀಳುತಿದ್ದು, ರೈತರು ಕೃಷಿ ಚಟುವಟಿಯಲ್ಲಿ ನಿರತವಾಗಿರುವುದು ಕಂಡುಬಂದಿದೆ. ಕಳೆದ ಮೇ ತಿಂಗಳಲ್ಲಿ ವಾಡಿಕೆ ಮಳೆಯ ಪ್ರಮಾಣ ಕುಂಠಿತಗೊಂಡ ಪರಿಣಾಮ ಮೆಕ್ಕೆಜೋಳ, ಆಲೂಗೆಡ್ಡೆ ಬಿತ್ತನೆಗೆ ಹಿನ್ನಡೆಯಾಗಿತ್ತು. ಪ್ರಮುಖ ವಾಣಿಜ್ಯ ಬೆಳೆ ತಂಬಾಕು ಬಿತ್ತನೆ ಈಗಾಗಲೇ ಮುಗಿಯುವ ಹಂತಕ್ಕೆ ಬಂದಿದ್ದು, ಮೆಕ್ಕೆಜೋಳ ಮತ್ತು ಆಲೂಗೆಡ್ಡೆ ಬಿತ್ತನೆ ಆರಂಭಗೊಂಡಿದೆ.

ತಾಲ್ಲೂಕಿನ ಪ್ರಮುಖ ವಾಣಿಜ್ಯ ಬೆಳೆಯಾದ ತಂಬಾಕು ಬಿತ್ತನೆ ಕೈಗೊಳ್ಳುವ ದೊಡ್ಡಮಗ್ಗೆ, ಕೊಣನೂರು ಮತ್ತು ರಾಮನಾಥಪುರ ಹೋಬಳಿಗಳಲ್ಲಿ ತಂಬಾಕು ಬಿತ್ತನೆ ಕಾರ್ಯ ಮುಗಿಯುವ ಹಂತಕ್ಕೆ ಬಂದಿದೆ. ಕಸಬಾ ಮತ್ತು ಮಲ್ಲಿಪಟ್ಟಣ ಹೋಬಳಿ ವ್ಯಾಪ್ತಿಯಲ್ಲಿ ಮೆಕ್ಕೆಜೋಳ, ಆಲೂಗೆಡ್ಡೆ, ರಾಗಿ ಬಿತ್ತನೆ ಆರಂಭಗೊಂಡಿದೆ.

**ಕೃಷಿ ಚಟುವಟಿಕೆ ಹಾಗೂ ಬೆಳೆ ವಿವರ**

ತಾಲ್ಲೂಕಿನಲ್ಲಿ 2026-27ನೇ ಸಾಲಿನ ಮುಂಗಾರು ಹಂಗಾಮಿಗೆ 33.770 ಹೆಕ್ಟೆರ್ ಕೃಷಿ ಪ್ರದೇಶದ ಗುರಿ ಹೊಂದಲಾಗಿದ್ದು, ಈ ವರೆಗೆ ವಿವಿಧ ಬೆಳೆಗಳು ಸೇರಿ 8 ಸಾವಿರ ಹೆಕ್ಟೆರ್‌ನಲ್ಲಿ ಬಿತ್ತನೆ ಕಾರ್ಯ ನಡೆದಿದೆ. ಅದರಲ್ಲಿ ತಂಬಾಕು ಬಿತ್ತನೆ ಸಿಂಹಪಾಲಾಗಿದ್ದು, ನಂತರದಲ್ಲಿ ಮುಸುಕಿನ ಜೋಳ, ಉದ್ದು, ಹೆಸರು, ಅಲಸಂದೆ, ನೆಲಗಡಲೆ ಹಾಗೂ ಕೂಳೆ ಕಬ್ಬು ಬಿತ್ತನೆ ಕೈಗೊಳ್ಳಲು ರೈತರು ಭೂಮಿಯನ್ನು ಹಸನುಗೊಳಿಸುವಲ್ಲಿ ನಿರತವಾಗಿದ್ದಾರೆ.


**ಬಿತ್ತನೆ ಬೀಜ ಹಾಗೂ ಪರಿಕರಗಳ ದಾಸ್ತಾನು**

2026-27ನೇ ನೇ ಸಾಲಿನ ಮುಂಗಾರು ಹಂಗಾಮಿಗೆ ಅರಕಲಗೂಡು ತಾಲ್ಲೂಕಿನ ಎಲ್ಲಾ 5 ಹೋಬಳಿಗಳಲ್ಲಿ (ಕಸಬಾ, ದೊಡ್ಡಮಗ್ಗೆ, ರಾಮನಾಥಪುರ, ಕೊಣನೂರು ಮತ್ತು ಮಲ್ಲಿಪಟ್ಟಣ) ಅಗತ್ಯತೆಗೆ ತಕ್ಕಂತೆ ರೈತ ಸಂಪರ್ಕ ಕೇಂದ್ರಗಳಲ್ಲಿ ಅಲಸಂದೆ, ಉದ್ದು ಹಾಗೂ ಮುಸುಕಿನಜೋಳ ಬಿತ್ತನೆ ಬೀಜ ದಾಸ್ತಾನಿದ್ದು, ಕೃಷಿ ಪರಿಕರಗಳಾದ ಜಿಂಕ್ ಸಲ್ಫೇಟ್, ಬೋರಾಕ್ಸ್ (ಲಘು ಪೋಷಕಾಂಶಗಳು), ಸಸ್ಯಸಂರಕ್ಷಣಾ ಔಷದಗಳು ರೈತರಿಗೆ ಲಭ್ಯವಿರುತ್ತವೆ. ಪ್ರಸ್ತುತ್ತ ಅಲಸಂದೆ, ಉದ್ದು ಹಾಗೂ ಮುಸುಕಿನ ಜೋಳ ಬಿತ್ತನೆ ಬೀಜ ದಾಸ್ತಾನು ಸ್ವೀಕೃತವಾಗಿರುತ್ತದೆ.

**ಮಳೆವಿವರ :** ಅರಕಲಗೂಡು-4.6 ಮಿ.ಮೀ., ಮಲ್ಲಿಪಟ್ಟಣ-8 ಮಿ.ಮೀ., ದೊಡ್ಡಮಗ್ಗೆ -8.4 ಮಿ.ಮೀ. ಹಾಗು ದೊಡ್ಡಬೆಮ್ಮತ್ತಿ-4 ಮಿ.ಮೀ. ಮಳೆಯಾಗಿದೆ.

# ಅಫ್ಘಾನಿಸ್ತಾನ ಮೇಲೆ ಪಾಕ್ ದಾಳಿ: ಭಾರತ ಖಂಡನೆ

• ಪ್ರಜೋದಯ ವರದಿ



**ವಿಶ್ವಸಂಸ್ಥೆ:** ಅಫ್ಘಾನಿಸ್ತಾನದ ಮೇಲೆ ಪಾಕಿಸ್ತಾನ ನಡೆಸುತ್ತಿರುವ ವೈಮಾನಿಕ ದಾಳಿಯನ್ನು ವಿಶ್ವಸಂಸ್ಥೆಯಲ್ಲಿ ಭಾರತವು ಟೀಕಿಸಿದೆ.

ವಿಶ್ವಸಂಸ್ಥೆ ಭದ್ರತಾ ಮಂಡಳಿ ಸಭೆಯಲ್ಲಿ ಅಫ್ಘಾನಿಸ್ತಾನದ ಪರಿಸ್ಥಿತಿ ಕುರಿತು ಮಾತನಾಡಿದ ವಿಶ್ವಸಂಸ್ಥೆಯ ಭಾರತದ ಕಾಯಂ ಪ್ರತಿನಿಧಿ ಹರೀಶ್ ಪರ್ವತನೇನಿ ಅವರು, ಪಾಕಿಸ್ತಾನದ ವಿರುದ್ಧ ತೀಕ್ಷ್ಣ ವಾಗ್ದಾಳಿ ನಡೆಸಿದ್ದಾರೆ. ಅಫ್ಘಾನಿಸ್ತಾನದ ವಿರುದ್ಧ ಪಾಕಿಸ್ತಾನ ನಡೆಸುತ್ತಿರುವ ವೈಮಾನಿಕ ದಾಳಿಯಿಂದ ಭಾರೀ ಪ್ರಮಾಣದಲ್ಲಿ ನಾಗರಿಕರ ಸಾವು- ನೋವುಗಳಿಗೆ ಕಾರಣವಾಗುತ್ತಿದ್ದು, ಅಫ್ಘನ್ ಜನರನ್ನು ಸಂಕಷ್ಟಕ್ಕೆ ದೂಡುತ್ತಿದೆ. ಇಂತಹ ವಿವೇಚನಾರಹಿತ ಹಿಂಸಾಚಾರದ ಕೃತ್ಯಗಳು ಅಫ್ಘಾನಿಸ್ತಾನದ ಸಾರ್ವ ಭೌಮತ್ವದ ಮೇಲಿನ ಬಹಿರಂಗ ದಾಳಿಯಾಗಿದ್ದು, ಈ ಪ್ರದೇಶದ ಶಾಂತಿ ಮತ್ತು ಸ್ಥಿರತೆಗೆ ಧಕ್ಕೆಯುಂಟು ಮಾಡಲಿವೆ ಎಂದು ಪರ್ವತನೇನಿ ಹೇಳಿದ್ದಾರೆ.

ಯುಎನ್‌ಎಎಂಎ ಮಾಹಿತಿಯನ್ನು ಉಲ್ಲೇಖಿಸಿ ಮಾತನಾಡಿದ ಅವರು, ಈ ವರ್ಷದ ಮೊದಲ ಮೂರು ತಿಂಗಳಲ್ಲೇ ಪಾಕಿಸ್ತಾನದ ದಾಳಿಗೆ 372 ನಾಗರಿಕರು ಸಾವಿಗೀಡಾಗಿದ್ದಾರೆ ಮತ್ತು 397 ಜನರು ಗಾಯಗೊಂಡಿದ್ದಾರೆ. ಅವರಲ್ಲಿ ಹೆಚ್ಚಿನವರು ಪವಿತ್ರ ರಂಜಾನ್ ಮಾಸದಲ್ಲಿ ಮೃತಪಟ್ಟಿದ್ದಾರೆಂದು ತಿಳಿಸಿದ್ದಾರೆ.

ಯಾವ ಧರ್ಮ, ಯಾವ ಕಾನೂನು ಮತ್ತು ಯಾವ ನೈತಿಕತೆಯೂ ಇಂತಹ ಕ್ರಮಗಳನ್ನು ಸಮರ್ಥಿಸಲು ಸಾಧ್ಯವಿಲ್ಲ. ನರಮೇಧವನ್ನು ಸೇನಾ ಕಾರ್ಯಾಚರಣೆ ಎಂದು ಬಿಂಬಿಸುವುದರಿಂದ ಅಪರಾಧಿಯು ಅಪರಾಧ ಮುಕ್ತನಾಗುವುದಿಲ್ಲ. ನಾಗರಿಕರನ್ನು ಕೊಲ್ಲುವುದು, ಅಂಗ ವಿಕಲರನ್ನಾಗಿ ಮಾಡುವುದು ಮತ್ತು ಅವರನ್ನು ಅನಾಥರನ್ನಾಗಿ ಮಾಡುವುದು ಭಯೋತ್ಪಾದನೆ ವಿರುದ್ಧದ ಕ್ರಮವಲ್ಲ. ತನ್ನದೇ ವೈಫಲ್ಯಗಳಿಗೆ ನೆರೆಹೊರೆಯ ವರನ್ನು ದೂಷಿಸುವುದು ಪಾಕಿಸ್ತಾನದ ಹಳೆಯ ಅಭ್ಯಾಸ. ಜಗತ್ತನ್ನು ವಂಚಿಸುವ ಈ ಪ್ರಯತ್ನ ವಿಫಲವಾಗಲಿದೆ ಎಂದಿದ್ದಾರೆ.

ಸಾಮೂಹಿಕ ಹತ್ಯೆಯನ್ನು ಸೇನಾ ಕಾರ್ಯಾಚರಣೆ ಎಂದು ಕರೆಯುವುದರಿಂದ ತಪ್ಪಿತಸ್ಥರು ನಿರ್ದೋಷಿಗಳಾಗುವುದಿಲ್ಲ. ನಾಗರಿಕರನ್ನು ಕೊಲ್ಲು ವುದು, ಗಾಯಗೊಳಿಸುವುದು ಮತ್ತು ಮಕ್ಕಳನ್ನು ಅನಾಥರನ್ನಾಗಿಸುವುದು ಯಾವುದೇ ರೀತಿಯ ಭಯೋತ್ಪಾದನೆ ವಿರೋಧಿ ಕಾರ್ಯಾಚರಣೆ ಆಗಲು ಸಾಧ್ಯವಿಲ್ಲವೆಂದು ಕಿಡಿಕಾರಿದರು.

ಇದೇ ವೇಳೆ ಅಫ್ಘಾನಿಸ್ತಾನದಲ್ಲಿನ ವಿಶ್ವಸಂಸ್ಥೆಯ ನೆರವು ಮಿಷನ್ ವರದಿಯನ್ನು ಉಲ್ಲೇಖಿಸಿದ ಅವರು, ಬಹುತೇಕ ಸಾವು-ನೋವುಗಳು ಪವಿತ್ರ ರಂಜಾನ್ ತಿಂಗಳ ಅವಧಿಯಲ್ಲಿ ಸಂಭವಿಸಿರುವುದು ಗಂಭೀರ ವಿಚಾರ. ಯಾವ ಧರ್ಮ, ಯಾವ ಕಾನೂನು ಅಥವಾ ಯಾವ ನೈತಿಕತೆಯೂ ಇಂತಹ ಕೃತ್ಯಗಳನ್ನು ಸಮರ್ಥಿಸಲು ಸಾಧ್ಯವಿಲ್ಲ ಎಂದು ಹೇಳಿದರು.

ಬಳಿಕ ಪಾಕಿಸ್ತಾನವನ್ನು ನೇರವಾಗಿ ಟೀಕಿಸಿದ ಅವರು, ಸಾಮೂಹಿಕ ಹತ್ಯಾಕಾಂಡವನ್ನು ಸೇನಾ ಕಾರ್ಯಾಚರಣೆ ಎಂದು ಬಣ್ಣಿಸಿದರೆ ತಪ್ಪಿತಸ್ಥರು ನಿರ್ದೋಷಿಗಳಾಗುವುದಿಲ್ಲ. ನಾಗರಿಕರನ್ನು ಕೊಲ್ಲುವುದು, ಅಂಗವಿಕಲರನ್ನಾಗಿಸುವುದು ಮತ್ತು ಮಕ್ಕಳನ್ನು ಅನಾಥರನ್ನಾಗಿಸುವುದು ಭಯೋತ್ಪಾದನೆ ವಿರೋಧಿ ಕಾರ್ಯಾಚರಣೆ ಅಲ್ಲವೆಂದು ಕಿಡಿಕಾರಿದರು.

ಪಾಕಿಸ್ತಾನ ತನ್ನ ದೇಶೀಯ ವೈಫಲ್ಯಗಳಿಗೆ ನೆರೆಯ ರಾಷ್ಟ್ರಗಳನ್ನು ಹೊಣೆ ಮಾಡುವುದು ಹಳೆಯ ಚಾಳಿಯಾಗಿದೆ. ತನ್ನ ಗಡಿಗಳೊಳಗಿನ ಕೆಲವು ಗುಂಪುಗಳನ್ನು ಫಿತ್ನಾ ಅಲ್ ಹಿಂದೂಸ್ತಾನ್ ಎಂದು ಅಧಿಕೃತವಾಗಿ ಕರೆಯಲು ನೀಡಿರುವ ನಿರ್ದೇಶನ ವನ್ನು ಭಾರತ ತೀವ್ರವಾಗಿ ಖಂಡಿಸಿತು. ಇದು ಧಾರ್ಮಿಕ ಪದಗಳ ಹೆಸರಿನಲ್ಲಿ ನಡೆಸುತ್ತಿರುವ ಅಧಿಕೃತ ಸುಳ್ಳು ಪ್ರಚಾರ ಮತ್ತು ತಪ್ಪು ಮಾಹಿತಿಯ ಅಭಿಯಾನ ಎಂದರು.

# ಕೆ-ಸಿಇಟಿ ಫಲಿತಾಂಶ: ಎ.ಪಿ.ಜೆ. ಕಾಲೇಜು ಸಾಧನೆ

• ಪ್ರಜೋದಯ ವರದಿ





**ಹಾಸನ:** ಕಳೆದ ಏಪ್ರಿಲ್‌ನಲ್ಲಿ ನಡೆದ ಕರ್ನಾಟಕ ಸಾಮಾನ್ಯ ಪರೀಕ್ಷೆ (ಕೆ- ಸಿಇಟಿ) ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಬಿ.ಕಾಟೀಹಳ್ಳಿಯಲ್ಲಿರುವ ಎ.ಪಿ.ಜೆ. ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ.

ಅರ್ಪಿತ ಬಿಎಸ್ಸಿ ಕೃಷಿ ವಿಭಾಗದಲ್ಲಿ ರಾಜ್ಯಕ್ಕೆ 790ನೇ ಹಾಗು ಇಂಜಿನೀಯರಿಂಗ್ ವಿಭಾಗದಲ್ಲಿ 2682ನೇ ರ‍್ಯಾಂಕ್ ತಮ್ಮದಾಗಿಸಿಕೊಂಡಿದ್ದಾರೆ. ಇಂಜಿನೀಯ ರಿಂಗ್ ಪ್ರವೇಶಾತಿಯ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಕೌಸ್ತುಭ ಶರ್ಮ 1,263, ರಿಕ್ಷಿತಾ 2,391, ವಿನೀತ್ 2,453 ಹಾಗು ಅಮನ್ ಉದಯ ರಾಜ್ 2,923ನೇ ರ‍್ಯಾಂಕ್ ಪಡೆದಿದ್ದಾರೆ.

ಸಂಸ್ಥೆಯ ಸಂಸ್ಥಾಪಕ ಡಿ.ಮುರಳಿ ಅವರು ಮಾತನಾಡಿ, ನಮ್ಮ ಕಾಲೇಜಿನ 19 ವಿದ್ಯಾರ್ಥಿಗಳು 5,000ಕ್ಕಿಂತ ಕಡಿಮೆ ರ‍್ಯಾಂಕಿಂಗ್ ಹಾಗು 38 ಮಕ್ಕಳು 10,000 ಕ್ಕಿಂತ ಕಡಿಮೆ ರ‍್ಯಾಂಕಿಂಗ್ ಪಡೆ ದಿದ್ದಾರೆ. ಈ ವಿದ್ಯಾರ್ಥಿಗಳಿಗೆ ರಾಜ್ಯದ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಉನ್ನತ ವ್ಯಾಸಂಗಕ್ಕೆ ಅವಕಾಶ ದೊರೆ ಯಲಿದೆ ಎಂದರು.

ಸಾಧಕ ವಿದ್ಯಾರ್ಥಿಗಳಿಗೆ ಕಾಲೇಜಿನ ಪ್ರಾಂಶುಪಾಲ, ಬೋಧಕ ಹಾಗು ಬೋಧಕೇತರ ಸಿಬ್ಬಂದಿ ಅಭಿನಂದಿಸಿದ್ದಾರೆ.

# ಸೆ. 17ರಿಂದ ಕೃಷಿ-ಆಯುರ್ವೇದ ಇಂಡಸ್ಟ್ರಿಯಲ್ ಮಷಿನರಿ ಪ್ರದರ್ಶನ




• ಪ್ರಜೋದಯ ವರದಿ

**ಹಾಸನ:** ಮೈಸೂರಿನ ಮಹಾರಾಜಾ ಮೈದಾನದಲ್ಲಿ ಸೆ.17 ರಿಂದ 21ರ ವರೆಗೆ ಶ್ರೀ ದತ್ತ ಎಂಟರ್‌ಪ್ರೈಸಸ್ ವತಿಯಿಂದ ಇನ್ನೋವೇಶನ್ ಕೃಷಿ ಮತ್ತು ಆಯುರ್ವೇದ ಇಂಡಸ್ಟ್ರಿಯಲ್ ಮಷಿನರಿ ಪ್ರದರ್ಶನ-2026 ಏರ್ಪಡಿಸಲಾಗಿದೆ ಎಂದು ರಾಷ್ಟ್ರ ರಕ್ಷಣಾ ಸೇನೆ ಜಿಲ್ಲಾಧ್ಯಕ್ಷ ಸುರೇಶ್ ಗೌಡ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ಮಹಿಳೆ, ವಿಕಲಚೇತನ ಹಾಗು ತೃತೀಯ ಲಿಂಗಿ ಉದ್ಯಮಿಗಳಿಗೆ ಉಚಿತ ಮಳಿಗೆ ನೀಡಲಾಗುತ್ತಿದೆ. ಜಿಲ್ಲೆಯ 50 ಉದ್ಯಮಿಗಳು ಭಾಗವಹಿಸುವ ನಿರೀಕ್ಷೆಯಿದೆ ಎಂದರು.

ಕೃಷಿ, ಆಯುರ್ವೇದ, ಸ್ಟಾರ್ಟ್ ಅಪ್, ಗ್ರಾಮೀಣ ಕೈಗಾರಿಕೆ, ಸಣ್ಣ ಮತ್ತು ಮಧ್ಯಮ ಉದ್ಯಮಗಳು, ವಿವಿಧ ಕ್ಷೇತ್ರಗಳ ಉತ್ಪನ್ನ ಹಾಗು ನವೀನ ತಂತ್ರಜ್ಞಾನಗಳಿಗೆ ಒಂದೇ ಸೂರಿನಡಿ ವೇದಿಕೆ ಕಲ್ಪಿಸಲಾಗುತ್ತಿದೆ. ವಿದ್ಯಾರ್ಥಿಗಳಲ್ಲಿನ ಸೃಜನಶೀಲತೆ ಮತ್ತು ಸಂಶೋಧನಾ ಮನೋ ಭಾವ ಉತ್ತೇಜಿಸಲು ವಿಶೇಷ ಅವಕಾಶ ಕಲ್ಪಿಸಲಾಗಿದೆ. ರೈತರು, ಉದ್ಯಮಿಗಳು, ತಯಾರಕರು, ಸ್ವ-ಸಹಾಯ ಸಂಘಗಳು, ಶಿಕ್ಷಣ ಸಂಸ್ಥೆಗಳು, ಹೂಡಿಕೆದಾರರು ಹಾಗು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬಹುದು. ಮಳಿಗೆ ಕಾಯ್ದಿರಿಸಲು ಹಾಗು ನೋಂದಣಿಗೆ ಮೊ.ನಂ. 99029 59039 ಅಥವಾ 8722720114 ಇಲ್ಲಿಗೆ ಸಂಪರ್ಕಿಸಬೇಕೆಂದರು.

ಶ್ರೀರಾಮಸೇನೆ ಜಿಲ್ಲಾಧ್ಯಕ್ಷ ಧರ್ಮನಾಯಕ್, ಮಂಜುನಾಥ್, ಮಹೇಶ್ ಹಾಜರಿದ್ದರು.

# ಜಮೀರ್‌ಗೆ ಸಚಿವ ಸ್ಥಾನ ನೀಡದಿದ್ದರೆ ಕಾಂಗ್ರೆಸ್‌ಗೆ ಪಾಠ ಖಚಿತ

• ಪ್ರಜೋದಯ ವರದಿ




**ಹಾಸನ:** ಅಲ್ಪಸಂಖ್ಯಾತ ಸಮುದಾಯದ ನಾಯಕ ಜಮೀರ್ ಅಹ್ಮದ್ ಖಾನ್ ಅವರ ಏಳಿಗೆ ಸಹಿಸಲಾಗದೆ ಸಚಿವ ಸಂಪುಟದಿಂದ ಹೊರಗಿಡಲಾಗಿದ್ದು, ಅವರಿಗೆ ಉಪಮುಖ್ಯಮಂತ್ರಿ ಹಾಗು ಸಚಿವ ಸ್ಥಾನ ನೀಡದಿದ್ದರೆ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ತಕ್ಕಪಾಠ ಕಲಿಸಲಾಗುವುದೆಂದುಜಿಲ್ಲಾಅಲ್ಪಸಂಖ್ಯಾತ ಮುಸ್ಲಿಂ ಸ್ವಾಭಿಮಾನಿ ವೇದಿಕೆ ಜಿಲ್ಲಾಧ್ಯಕ್ಷ ಸಮೀರ್ ಅಹಮದ್ ಅವರು ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, 2023ರ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ 136 ಸ್ಥಾನ ಗೆಲ್ಲುವಲ್ಲಿ ಅಲ್ಪಸಂಖ್ಯಾತರ ಕೊಡುಗೆ ಹೆಚ್ಚಿದೆ. ಜಮೀರ್ ಅಹ್ಮದ್ ಖಾನ್ ಅವರ ಹೋರಾಟದಿಂದ ಕಾಂಗ್ರೆಸ್ ಬಹುಮತ ಗಳಿಸಲು ಸಾಧ್ಯವಾಗಿದೆ. ದಾವಣಗೆರೆ ದಕ್ಷಿಣ ಕ್ಷೇತ್ರ ಉಪಚುನಾವಣೆಯಲ್ಲಿ ಮುಸ್ಲಿಮರಿಗೆ ಟಿಕೆಟ್ ಕೇಳಿದರೆಂಬ ಏಕೈಕ ಕಾರಣಕ್ಕೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ನಿರ್ಲಕ್ಷ್ಯ ಮಾಡುತ್ತಿದ್ದಾರೆಂದು ಆರೋಪಿಸಿದರು.

ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ಅವರು ರಾಜೀನಾಮೆ ನೀಡುತ್ತಿದ್ದಂತೆ ಜಮೀರ್ ಅವರು ದಾವಣಗೆರೆ ಉಪಚುನಾವಣೆ ಕ್ಷೇತ್ರದ ಅಭ್ಯರ್ಥಿ ಕುರಿತು ಮಾತನಾಡಿದ್ದಾರೆನ್ನಲಾದ ನಕಲಿ ಆಡಿಯೋ ಹರಿಬಿಟ್ಟು ಅವರನ್ನು ಅವಕಾಶ ವಂಚಿತರನ್ನಾಗಿಸಲಾಗಿದೆ. ಇದು ವ್ಯವಸ್ಥಿತ ಷಡ್ಯಂತ್ರವಾಗಿದೆ. ಜಮೀರ್ ಅಹ್ಮದ್ ಖಾನ್ ಕೇವಲ ಅಲ್ಪಸಂಖ್ಯಾತ ನಾಯಕರಲ್ಲ, ಸರ್ವ ಸಮುದಾಯದವರು ಅವರನ್ನು ಇಷ್ಟ ಪಡುತ್ತಾರೆಂದರು.

ಜಮೀರ್ ಅವರ ಸಂಘಟನಾ ಶಕ್ತಿಯ ಅರಿವಿದ್ದರಿಂದಲೇ ಕೇರಳ ಚುನಾವಣೆಯಲ್ಲಿ ಪ್ರಚಾರಕ್ಕೆ ಕರೆಸಿ ಕೊಳ್ಳಲಾಗಿತ್ತು. ದಾವಣಗೆರೆಯಲ್ಲೂ ಅವರು ಪ್ರಚಾರ ನಡೆಸಿದ್ದರಿಂದ ಕೈ ಅಭ್ಯರ್ಥಿ ಸಮರ್ಥ್ ಶಾಮನೂರು ಗೆದ್ದಿದ್ದಾರೆ. ಈ ಎಲ್ಲಾ ಸತ್ಯ ಹೈಕಮಾಂಡ್ ನಾಯಕರಿಗೆ ಗೊತ್ತಿದೆ. ಯಾರದೋ ಕಪಿಮುಷ್ಟಿಗೆ ಸಿಲುಕಿ ದ್ವೇಷ ಸಾಧಿಸಲಾಗುತ್ತಿದೆ. 2ನೇ ಹಂತದ ಸಚಿವ ಸಂಪುಟ ವಿಸ್ತರಣೆಯಲ್ಲಿ ಜಮೀರ್ ಅಹ್ಮದ್ ಅವರಿಗೆ ಸ್ಥಾನಮಾನ ನೀಡದಿ ದ್ದರೆ ಮುಸ್ಲಿಂ ಸಮುದಾಯ ಕಾಂಗ್ರೆಸ್‌ನಿಂದ ಅಂತರ ಕಾಯ್ದುಕೊಳ್ಳ ಬೇಕಾಗುತ್ತದೆಂದು ಎಚ್ಚರಿಕೆ ನೀಡಿದರು.

ಜಿಲ್ಲಾ ಅಲ್ಪಸಂಖ್ಯಾತ ಮುಸ್ಲಿಂ ಸ್ವಾಭಿಮಾನಿ ವೇದಿಕೆ ಸದಸ್ಯ ವಸೀಂ ಖಾನ್, ಮೊಹಮ್ಮದ್ ಶರ್ಫುದ್ದೀನ್ ಹಾಜರಿದ್ದರು.

# ಸಣ್ಣ ಪ್ರಯತ್ನದಿಂದ ದೊಡ್ಡ ಬದಲಾವಣೆ ಸಾಧ್ಯ

» **ಮೊದಲನೇ ಪುಟದಿಂದ**

ದಲ್ಲಿ ಅಳವಡಿಸಿಕೊಂಡಾಗ ಮಾತ್ರ ಮುಂದಿನ ಪೀಳಿಗೆಗೆ ಆರೋಗ್ಯಕರ ಪರಿಸರ ನೀಡಲು ಸಾಧ್ಯವೆಂದು ತಿಳಿಸಿದರು.

ಪರಿಸರ ಸಂರಕ್ಷಣೆ ಕೇವಲ ಸರ್ಕಾರದ ಜವಾಬ್ದಾರಿಯಲ್ಲ, ಪ್ರತಿಯೊಬ್ಬ ನಾಗರಿಕನ ಕರ್ತವ್ಯ. ಅಭಿವೃದ್ಧಿ ಹೆಸರಿನಲ್ಲಿ ಮರಗಳು ನಾಶವಾಗುತ್ತಿದ್ದು, ಪ್ರತಿಯೊಬ್ಬರೂ ಕನಿಷ್ಠ ಒಂದು ಗಿಡ ನೆಟ್ಟು, ಪೋಷಿಸುವ ಸಂಕಲ್ಪ ಮಾಡಬೇಕು. ಮಾನವನ ಬದುಕಿಗೆ ಅತ್ಯಗತ್ಯವಾದ ನೀರು, ಗಾಳಿ ಮತ್ತು ಬೆಳಕು ಪ್ರಕೃತಿಯ ಕೊಡುಗೆಗಳಾಗಿದ್ದು, ಅವುಗಳನ್ನು ಸಂರಕ್ಷಿಸದಿದ್ದರೆ ಮುಂದಿನ ಪೀಳಿಗೆಗೆ ಸಂಕಷ್ಟ ಎದುರಾಗಲಿದೆ ಎಂದು ಎಚ್ಚರಿಸಿದರು.

ಹವಾಮಾನ ವೈಪರೀತ್ಯ, ತಾಪಮಾನ ಏರಿಕೆ, ಅನಿಯಮಿತ ಮಳೆ ಹಾಗೂ ಪ್ರಕೃತಿ ವಿಕೋಪ ಹೆಚ್ಚುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ಪರಿಸರ ಸಂರಕ್ಷಣೆ ಅನಿವಾ ರ್ಯವಾಗಿದೆ. ಲಕ್ಷಾಂತರ ಮರಗಳು ಬೆಳೆದು ಪರಿಸರ ಸಮತೋಲನ ಕಾಪಾಡಲು ಸಾಧ್ಯ. ಇತ್ತೀಚಿನ ದಿನಗಳಲ್ಲಿ ಯುವ ಸಮುದಾಯ ಅಗತ್ಯಕ್ಕಿಂತ ಹೆಚ್ಚು ಸಮಯವನ್ನು ಮೊಬೈಲ್ ಬಳಕೆಯಲ್ಲೇ ಕಳೆಯುತ್ತಿ ದ್ದಾರೆ. ತಂತ್ರಜ್ಞಾನವನ್ನು ಸಮರ್ಪಕ ವಾಗಿ ಬಳಸುವುದು ಒಳ್ಳೆಯದಾದರೂ ಅದರ ದುರುಪಯೋಗದಿಂದ ದೂರ ವಿರಬೇಕು. ವಿಶೇಷವಾಗಿ ಯುವಕರು ಪರಿಸರ ಸಂರಕ್ಷಣೆಯಲ್ಲಿ ಸಕ್ರಿಯ ಪಾತ್ರವಹಿಸಿ ಹೆಚ್ಚಿನ ಸಂಖ್ಯೆಯಲ್ಲಿ ಗಿಡಗಳನ್ನು ನೆಟ್ಟು ಅವುಗಳನ್ನು ಪೋಷಿಸುವ ಜವಾಬ್ದಾರಿ ವಹಿಸಿಕೊಳ್ಳ ಬೇಕೆಂದು ಸಲಹೆ ನೀಡಿದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಕಾರ್ಲೆ ಮೊಗಣ್ಣಗೌಡ ಅವರು ಮಾತನಾಡಿ, ಪ್ರತಿವರ್ಷ ನ್ಯಾಯಾಲ ಯದ ಆವರಣದಲ್ಲಿ ಪರಿಸರ ಸಂರಕ್ಷಣೆಗೆ ಒತ್ತು ನೀಡಿ ಗಿಡ ನೆಡುವ ಕಾರ್ಯ ನಿರಂತರವಾಗಿ ನಡೆಯುತ್ತಿದೆ. ಅವುಗಳನ್ನು ಪೋಷಿಸುವ ಜವಾಬ್ದಾರಿಯನ್ನು ಸಿಬ್ಬಂದಿ ವಹಿಸಿ ಕೊಂಡಿದ್ದಾರೆ. ಹೆಚ್ಚು ಮರಗಳು ಬೆಳೆದರೆ ಪರಿಸರ ಹಸಿರಾಗುವುದರ ಜೊತೆಗೆ ಮಳೆಯ ಪ್ರಮಾಣ ಹೆಚ್ಚಲು ಸಹಕಾರಿಯಾಗುತ್ತದೆ. ಶುದ್ಧ ಗಾಳಿ, ಉತ್ತಮ ವಾತಾವರಣ ಹಾಗೂ ಸುಸ್ಥಿರ ಪರಿಸರ ನಿರ್ಮಾಣಕ್ಕಾಗಿ ಪ್ರತಿ ಯೊಬ್ಬರೂ ಇಂತಹ ಅಭಿಯಾನಗಳಲ್ಲಿ ಭಾಗವಹಿಸಬೇಕೆಂದು ಕರೆ ನೀಡಿದರು.

ಕಾನೂನು ಸೇವಾ ಪ್ರಾಧಿಕಾರದ ಕಾರ್ಯದರ್ಶಿ ದಾಕ್ಷಾಯಿಣಿ, ಹಸಿರು ಭೂಮಿ ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷರಾದ ಆರ್ ಪಿ ವೆಂಕಟೇಶ್ ಮೂರ್ತಿ, ಉಪಾಧ್ಯಕ್ಷಪುರುಷೋತ್ತಂ ಮತ್ತು ಕಾರ್ಯದರ್ಶಿ ಎಂ.ಬಿ. ಗಿರಿಜಾಂಬಿಕಾ, ಉಪಾಧ್ಯಕ್ಷ ತಿಮ್ಮೇಗೌಡ, ಖಜಾಂಚಿ ಸುಗುಣ ಹಾಗೂ ನ್ಯಾಯಾಧೀಶರು, ವಕೀಲರು, ಸಿಬ್ಬಂದಿ ಹಾಗೂ ವಿವಿಧ ಗಣ್ಯರು ಭಾಗವಹಿಸಿ ಗಿಡ ನೆಟ್ಟು ಪರಿಸರ ಸಂರಕ್ಷಣೆಯ ಸಂಕಲ್ಪ ಕೈಗೊಂಡರು.

# ಬಿಜೆಪಿ ಭೀತಿ: ಮಧ್ಯಪ್ರದೇಶ ಕಾಂಗ್ರೆಸ್ ಶಾಸಕರು ಬೆಂಗಳೂರಿಗೆ


• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯಸಭಾ ಚುನಾವಣೆಗೂ ಮುನ್ನ ತನ್ನ ಶಾಸಕರನ್ನು ಸೆಳೆಯಲು ಬಿಜೆಪಿ ಪ್ರಯತ್ನಿಸುತ್ತಿದೆ ಎಂದು ಮಧ್ಯಪ್ರದೇಶ ಕಾಂಗ್ರೆಸ್ ನಾಯಕರು ಆರೋಪಿಸಿದ್ದು, ಅಡ್ಡ ಮತದಾನ ತಡೆಯಲು ತನ್ನ ಶಾಸಕರನ್ನು ಕಾಂಗ್ರೆಸ್ ಆಡಳಿತವಿರುವ ಕರ್ನಾಟಕಕ್ಕೆ ಸ್ಥಳಾಂತರಿಸಲು ನಿರ್ಧರಿಸಿದೆ.

230 ಸದಸ್ಯ ಬಲದ ರಾಜ್ಯ ವಿಧಾನಸಭೆಯಲ್ಲಿ ಸದ್ಯ 229 ಶಾಸಕರಿದ್ದಾರೆ. ಈ ಪೈಕಿ ಬಿಜೆಪಿ 2 ಹಾಗು ಕಾಂಗ್ರೆಸ್ 1 ಸ್ಥಾನಗಳನ್ನು ಸುಲಭವಾಗಿ ಗೆಲ್ಲಬಹುದಾಗಿದೆ. ರಾಜ್ಯಸಭೆಗೆ ಆಯ್ಕೆ ಯಾಗಲು ಒಬ್ಬ ಅಭ್ಯರ್ಥಿಗೆ 58 ಪ್ರಥಮ ಪ್ರಾಶಸ್ತ್ಯದ ಮತಗಳು ಬೇಕು. 164 ಶಾಸಕರನ್ನು ಹೊಂದಿರುವ ಆಡಳಿತಾರೂಢ ಬಿಜೆಪಿ, ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ತರುಣ್ ಚುಗ್ ಮತ್ತು ರಾಜ್ಯ ಘಟಕದ ಕಾರ್ಯದರ್ಶಿ ರಜನೀಶ್ ಅಗರ್ವಾಲ್ ಹಾಗು ಕೊನೆ ಕ್ಷಣದಲ್ಲಿ ಮೂರನೇ ಅಭ್ಯರ್ಥಿಯಾಗಿ ಮಧ್ಯಪ್ರದೇಶ ಮೀನುಗಾರರ ಕಲ್ಯಾಣ ಮಂಡಳಿಯ ಅಧ್ಯಕ್ಷ ಮಹೇಶ್ ಕೇವತ್ ಅವರನ್ನು ಕಣಕ್ಕಿಳಿಸಿದೆ. ಮಾಜಿ ಸಂಸದೆ ಮೀನಾಕ್ಷಿ ನಟರಾಜನ್ ಅವರಿಗೆ ಕಾಂಗ್ರೆಸ್ ಟಿಕೆಟ್ ನೀಡಿದೆ. ಮೂರನೇ ಅಭ್ಯರ್ಥಿ ಗೆಲ್ಲುವಷ್ಟು ಸಂಖ್ಯಾಬಲ ಬಿಜೆಪಿಗೆ ಇಲ್ಲದಿದ್ದರೂ ಕಾಂಗ್ರೆಸ್ ಮತಗಳನ್ನು ಸೆಳೆಯುವ ವಿಶ್ವಾಸದಿಂದ ಕೇವತ್ ಅವರನ್ನು ಕಣಕ್ಕಿಳಿಸಿದೆ.

# ರಸ್ತೆಯಲ್ಲಿ ಕಾಡಾನೆ ಭೀಮ ಸಂಚಾರ

• ಪ್ರಜೋದಯ ವರದಿ



**ಸಕಲೇಶಪುರ:** ಕಾಡಾನೆ ಭೀಮ ಮಂಗಳವಾರ ತಾಲ್ಲೂಕಿನ ಕೆರೆಹಳ್ಳಿ ರಸ್ತೆಯಲ್ಲಿ ಕಾಣಿಸಿಕೊಂಡಿದ್ದರಿಂದ ಕೆಲ ಕಾಲ ವಾಹನ ಸವಾರರು ಆತಂಕಗೊಳ್ಳುವಂತಾಯಿತು.

ಕಾಡಾನೆ ಕಾಫಿ ತೋಟದಿಂದ ರಸ್ತೆಗೆ ಬರುತ್ತಿದ್ದಂತೆ ಭಯಗೊಂಡ ವಾಹನ ಸವಾರರು, ರಸ್ತೆ ಬದಿ ನಿಂತು ಭೀಮಾ ಮತ್ತೊಂದು ತೋಟದ ಒಳಗೆ ಹೋಗುವ ವರೆಗೂ ಕಾಯಬೇಕಾಯಿತು. ಮತ್ತೊಂದೆಡೆ ಅರಣ್ಯ ಇಲಾಖೆ ಇಟಿಎಫ್ ಸಿಬ್ಬಂದಿ ಜಾಗೃತಗೊಂಡು, ಸುತ್ತಮುತ್ತಲ ಜನರಿಗೆ ಮಾಹಿತಿ ನೀಡಿದರು. ಮೈಮೇಲೆ ಮಣ್ಣು ಸುರಿದುಕೊಂಡಿರುವ ಭೀಮ, ಯಾರಿಗೂ ತೊಂದರೆ ಕೊಡದಂತೆ ರಸ್ತೆಯಲ್ಲಿ ನಿಧಾನವಾಗಿ ಹೆಜ್ಜೆ ಹಾಕಿದ. ಜನರೂ ಕೂಡ ಧೈರ್ಯದಿಂದ ಕಾಡಾನೆ ನೋಡುತ್ತಾ ಕೆಲ ಹೊತ್ತು ಹಾಗೆಯೇ ನಿಂತರು. ಕಾಡಾನೆಗಳ ಗುಂಪಿನಿಂದ ಬೇರ್ಪಟ್ಟಿರುವ ಕಾಡಾನೆ ಭೀಮ, ಇತ್ತೀಚೆಗೆ ಜನ ನಿಬಿಡ ಪ್ರದೇಶ ಹಾಗು ರಸ್ತೆಗಳಲ್ಲಿ ಆಗಾಗ್ಗೆ ಕಾಣಿಸಿಕೊಳ್ಳುತ್ತಿದೆ.

ತಾಲ್ಲೂಕಿನ ಕೆಸಗುಲಿ ಗ್ರಾಮದ ಪಿಂಟೋ ಎಸ್ಟೇಟ್ ಮಂಗನ ಕಾಡು ಹಾಗು ಗುಡ್ ಬೆಟ್ಟ ಎಸ್ಟೇಟ್, ಕಿರೇಹಳ್ಳಿ ಗ್ರಾಮದ ಈಶ್ವರ್ ಅವರ ಕಾಡು ಶೋಭಮ್ಮ ಅವರ ತೋಟ ಹಾಗು ಹೊಸ ಮಠ ಎಸ್ಟೇಟ್, ಸುಳ್ಳಕ್ಕಿ ಗ್ರಾಮದ ರವಿ ಅವರ ತೋಟದ ಪಕ್ಕದ ಕಾಡು, ನೀಚನಹಳ್ಳಿ ಹಾಗು ಕಿರುಹುಣಸೆ ಗ್ರಾಮದ ಮಂಜುನಾಥ್, ವಿರೂಪಾಕ್ಷ ಅವರ ತೋಟ ಹಾಗು ಸುತ್ತಮುತ್ತ ಕಾಡಾನೆಗಳು ಕಂಡುಬಂದಿರುತ್ತವೆ.

ಹೆತ್ತೂರು ಮತ್ತು ಯಸಳೂರು ಹೋಬಳಿಯ ಮರ್ಜನಹಳ್ಳಿ ಗ್ರಾಮದ ಹಂಜಲ್ ಗದ್ದೆ, ಕೊಂಗಳ್ಳಿ ಗ್ರಾಮದ ಬೆಟ್ಟ, ಹಡ್ಲುಗದ್ದೆ ಗ್ರಾಮದ ಹಿತರ್ಗದ್ದೆ ಹಾಗು ಕರಿ ಗುಂಡಿ, ಕೊಂತಾನಮನೆ ಗ್ರಾಮದ ಅರೆಗದ್ದೆ, ಕೆಳ್ಳಹಾಡ್ಯಾ ಗ್ರಾಮದ ಕಾರೆಕುರವ್ ಹಾಗು ಏಕ ರೆಸಾರ್ಟ್, ಬಾಳೆಕೆರೆ ಗ್ರಾಮದ ನೀಲಗಿರಿ ನೆಡುತೋಪು, ಬಿಸ್ಲೆ ಗ್ರಾಮದ ಏಣಿಕೂಲ್ ಬೆಟ್ಟ, ಐಗೂರು ಗ್ರಾಮದ ನಿರ್ಮಾ ಎಸ್ಟೇಟ್, ಸುತ್ತಮುತ್ತ ಕಾಡಾನೆಗಳು ಕಾಣಿಸಿಕೊಂಡಿವೆ.

## 1.47 ಕೋ.ರೂ. ವೆಚ್ಚದಲ್ಲಿ ವಸತಿ ಗೃಹ ನಿರ್ಮಾಣಕ್ಕೆ ಚಾಲನೆ: ಸಿಮೆಂಟ್ ಮಂಜು

# ಕ್ರಾಫರ್ಡ್ ಆಸ್ಪತ್ರೆ ಸಮಗ್ರ ಅಭಿವೃದ್ಧಿಗೆ ಒತ್ತು

• ಪ್ರಜೋದಯ ವರದಿ



**ಸಕಲೇಶಪುರ:** ತಾಲ್ಲೂಕಿನ ಕ್ರಾಫರ್ಡ್ ಆಸ್ಪತ್ರೆಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಉದ್ದೇಶದಿಂದ ಹಂತ ಹಂತವಾಗಿ ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸಲಾಗುತ್ತಿದೆ ಎಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.

ಮಂಗಳವಾರ ಕ್ರಾಫರ್ಡ್ ಆಸ್ಪತ್ರೆ ಆವರಣದಲ್ಲಿ ವೈದ್ಯರ ನೂತನ ವಸತಿ ಗೃಹ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ಮುಂದಿನ ದಿನಗಳಲ್ಲಿ ಆಸ್ಪತ್ರೆಗೆ ಅಗತ್ಯ ವೈದ್ಯಕೀಯ ಯಂತ್ರೋಪಕರಣಗಳು, ಆಸ್ಪತ್ರೆ ನವೀಕರಣ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಗೆ ಸಂಬಂಧಿಸಿದ ಕಾಮಗಾರಿಗಳನ್ನು ಶೀಘ್ರ ಆರಂಭಿಸಲಾಗುವುದು. ಆಸ್ಪತ್ರೆಯ ಸಮಗ್ರ ಅಭಿವೃದ್ಧಿಗೆ ಬದ್ಧತೆಯಿಂದ ಕಾರ್ಯನಿರ್ವಹಿಸಲಾಗುತ್ತಿದೆಂದು ಹೇಳಿದರು.

ಆರೋಗ್ಯ ಇಲಾಖೆಯ ವೈದ್ಯರು ಹಾಗು ಸಿಬ್ಬಂದಿ ಹಲವರು ಜಿಲ್ಲಾ ಕೇಂದ್ರಗಳಲ್ಲಿ ವಾಸವಿದ್ದು, ಕರ್ತವ್ಯಕ್ಕಾಗಿ ಪ್ರತಿದಿನ ತಾಲ್ಲೂಕು ಕೇಂದ್ರಗಳಿಗೆ ಸಂಚರಿಸುವ ಪರಿಸ್ಥಿತಿ ಇದೆ. ಇದರಿಂದ ಸಮಯ ವ್ಯರ್ಥವಾಗುವುದಲ್ಲದೆ ಸಾರ್ವಜನಿಕರಿಗೆ ಸಮಯಕ್ಕೆ ಸರಿಯಾಗಿ ವೈದ್ಯಕೀಯ ಸೇವೆ ದೊರೆಯುವುದಕ್ಕೂ ತೊಂದರೆಯಾಗುತ್ತದೆ. ಈ ಹಿನ್ನಲೆ ವೈದ್ಯರು ಆಸ್ಪತ್ರೆ ಸಮೀಪದಲ್ಲೇ ವಾಸಿಸುವ ಅನುಕೂಲ ಕಲ್ಪಿಸುವ ಉದ್ದೇಶದಿಂದ 1.47 ಕೋಟಿ ರೂ. ವೆಚ್ಚದಲ್ಲಿ 2 ನೂತನ ವಸತಿ ಗೃಹಗಳ ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ ಎಂದು ತಿಳಿಸಿದರು.

ರಾಷ್ಟ್ರೀಯ ಹೆದ್ದಾರಿ ಸಮೀಪದಲ್ಲಿರುವ ಕಾರಣ ಯಾವುದೇ ಸಂದರ್ಭದಲ್ಲಿ ಅಪಘಾತಗಳು ಸಂಭವಿಸುವ ಸಾಧ್ಯತೆ ಇರುವುದರಿಂದ ತುರ್ತು ವೈದ್ಯಕೀಯ ಸೇವೆಗೆ ವೈದ್ಯರ ಲಭ್ಯತೆ ಅತ್ಯಂತ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ವೈದ್ಯರಿಗೆ ಉತ್ತಮ ವಸತಿ ವ್ಯವಸ್ಥೆ ಕಲ್ಪಿಸುವುದು ಆರೋಗ್ಯ ಸೇವೆಯ ಗುಣಮಟ್ಟ ಹೆಚ್ಚಿಸಲು ನೆರವಾಗಲಿದೆ. ಹಿಂದಿನ ಆರೋಗ್ಯ ಸಚಿವರಾಗಿದ್ದ ದಿನೇಶ್‌ಗುಂಡೂರಾವ್ ಅವರು ಸಲ್ಲಿಸಿದ ಮನವಿಗೆ ಸ್ಪಂದಿಸಿ ಆರ್ಥಿಕ ಇಲಾಖೆಯ ಅನುಮೋದನೆಯೊಂದಿಗೆ ಅನುದಾನ ಬಿಡುಗಡೆ ಮಾಡಿದ್ದಾರೆ. ಪ್ರಸ್ತುತ ಆರೋಗ್ಯ ಸಚಿವರೂ ಸಹ ಈ ಅಭಿವೃದ್ಧಿ ಕಾರ್ಯಗಳಿಗೆ ಪೂರಕವಾಗಿ ಸ್ಪಂದಿಸುವ ವಿಶ್ವಾಸ ವ್ಯಕ್ತಪಡಿಸಿದರು.

ಸಕಲೇಶಪುರ ತಾಲ್ಲೂಕಿಗೆ ಪ್ರತ್ಯೇಕ ತಾಯಿ-ಮಗು ಆಸ್ಪತ್ರೆ ಮಂಜೂರಾತಿ ನೀಡುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಕ್ಷೇತ್ರದ ವಿವಿಧ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರು, ಶುಶ್ರೂಷಕರು ಹಾಗು ಸಿಬ್ಬಂದಿ ಕೊರತೆ ಕುರಿತು ಈಗಾಗಲೇ ಸರ್ಕಾರದ ಗಮನಕ್ಕೆ ತರಲಾಗಿದ್ದು, ಮತ್ತೊಮ್ಮೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದರು.

ಕ್ರಾಫರ್ಡ್ ವೈದ್ಯಾಧಿಕಾರಿ ಡಾ||ಅರುಣ್ ಕುಮಾರ್, ಪುರಸಭಾ ಮುಖ್ಯಾಧಿಕಾರಿ ಮಹೇಶ್ವರಪ್ಪ, ಪುರಸಭಾ ಮಾಜಿ ಸದಸ್ಯೆ ಅನ್ನಪೂರ್ಣ, ಆರೋಗ್ಯ ಇಲಾಖೆ ಸಹಾಯಕ ಇಂಜಿನೀಯರ್ ಸೇತುರಾಮ್, ಮುಖಂಡರಾದ ಅಗ್ನಿ ಸೋಮಶೇಖರ್, ನವೀನ್ ಶೆಟ್ಟಿ, ಉಪಸ್ಥಿತರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK